ಸಂಪುಟ: 13 Volume | ಸಂಚಿಕೆ: 343 Issue | ಪುಟಗಳು 08 Pages | ಶನಿವಾರ 07 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in
mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಅನುಭವವೊಂದು ಅಮೂಲ್ಯ ಅಪೂರ್ವ ವಜ್ರ. ಅದಕ್ಕಾಗಿ ಎಷ್ಟೋ ಜನರು ಬೆವರು, ರಕ್ತ ಸುರಿಸಿದ್ದಾರೆ.

–ಶೇಕ್ಸ್ ಪಿಯರ್

# ಬೆಲೆ ಏರಿಕೆಯ ಭಾರವಿರದ ಬಜೆಟ್

## ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ದಾಖಲೆಯ 17ನೇ ಬಜೆಟ್ | ಪ್ರತಿಪಕ್ಷಗಳಿಂದ ಪ್ರತಿಭಟನೆ | ಆರ್ಥಿಕ ತಜ್ಞರಿಂದ ಮೆಚ್ಚುಗೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ 17ನೇ ಬಜೆಟ್ ಅನ್ನು ಮಂಡಿಸಿದ್ದಾರೆ. ಬೆಲೆ ಏರಿಕೆಯ ಹೆಚ್ಚಳ ವಿಲ್ಲದ, ಹತ್ತು ಹಲವು ವೈಶಿಷ್ಟ್ಯಗಳ ಬಜೆಟ್ ಇದಾಗಿದ್ದು, ಪೊಲೀಸ್ ಇಲಾಖೆ ಸೇರಿದಂತೆ ಹಲವು ಇಲಾಖೆಗಳಿಗೆ ಭರಪೂರ ಅನುದಾನ ನೀಡಿದ್ದಾರೆ.

ವಿಧಾನಸಭೆಯಲ್ಲಿ 2026–27ನೇ ಸಾಲಿನ ಬಜೆಟ್ ಮಂಡಿಸಿದ ಸಿಎಂ, ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಕೈಗಾರಿಕಾ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ನಾಗರಿಕರ ಸುರಕ್ಷತೆಗಾಗಿ ರಾಜ್ಯದಲ್ಲಿ 12 ಹೊಸ ಪೊಲೀಸ್ ಠಾಣೆಗಳನ್ನು ಸ್ಥಾಪಿಸುವುದಾಗಿ ಘೋಷಿಸಿದ್ದಾರೆ. ಇದರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ ಪೊಲೀಸ್ ಠಾಣೆಗಳು ಸೇರಿವೆ.

**ಅಧಿವೇಶನ ಮುಂದೂಡಿಕೆ:** 2026–2027ನೇ ಸಾಲಿನ ರಾಜ್ಯ ಬಜೆಟ್ ಮಂಡನೆ ಮುಕ್ತಾಯಗೊಂಡಿದ್ದು, ವಿಧಾನಮಂಡಲ ಜಂಟಿ ಅಧಿವೇಶನವನ್ನು ಸೋಮವಾರ ಬೆಳಗ್ಗೆ ಮುಂದೂಡಲಾಗಿದೆ. ಪ್ರಸಕ್ತ ಸಾಲಿನ ಬಜೆಟ್ ಮಂಡನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಕ್ತಾಯಗೊಳಿಸಿದ ಬಳಿಕ ಮಾತನಾಡಿದ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಕಲಾಪವನ್ನು ಸೋಮವಾರಕ್ಕೆ ಮುಂದೂಡಿದ್ದಾರೆ.




### ರಾಜಸ್ವ ಸಂಗ್ರಹಕ್ಕೆ ಜಿಎಸ್ಟಿ ಹೊಡೆತ: ಸಿಎಂ

ಕೇಂದ್ರ ಸರ್ಕಾರವು ಅನಿರೀಕ್ಷಿತವಾಗಿ ಸರಕು ಸೇವಾ ತೆರಿಗೆ(ಜಿಎಸ್ಟಿ) ದರ ತರ್ಕಬದ್ಧಗೊಳಿಸಿದ ಪರಿಣಾಮ ರಾಜ್ಯದ ರಾಜಸ್ವ ಸಂಗ್ರಹಣೆಯು ಭಾರೀ ಕುಸಿತ ಕಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆತಂಕ ಹೊರ ಹಾಕಿದ್ದಾರೆ. ವಿಧಾನಸೌಧದಲ್ಲಿ 2026–27ನೇ ಸಾಲಿನ ಆಯವ್ಯಯ ಮಂಡಿಸಿದ ಅವರು, 2025–26ನೇ ಸಾಲಿನಲ್ಲಿ ಜಿಎಸ್ಟಿ ತರ್ಕಬದ್ಧಗೊಳಸುವಿಕೆಗೂ ಮುನ್ನ ರಾಜ್ಯದ ಸರಾಸರಿ ಮಾಸಿಕ ಜಿಎಸ್ಟಿ ರಾಜಸ್ವ ಸಂಗ್ರಹಣೆಯು ಶೇ.10ರಷ್ಟು ಬೆಳವಣಿಗೆಯನ್ನು ದಾಖಲಿಸಿತ್ತು.ಆದರೆ ಏಕಾಏಕಿ ಜಿಎಸ್ಟಿ ತರ್ಕಬದ್ಧಗೊಳಿಸುವಿಕೆ ನಂತರ ಜಿಎಸ್ಟಿ ಸಂಗ್ರಹಣೆಯ ಮಾಸಿಕ ಬೆಳವಣಿಗೆಯ ಶೇ.4ಕ್ಕೆ ಕಡಿಮೆಯಾಗಿದೆ. ಇದರಿಂದಾಗಿ ರಾಜ್ಯದ ಜಿಎಸ್ಟಿ ಸಂಗ್ರಹಣೆಯು ಅಂದಾಜು 10 ಸಾವಿರ ಕೋಟಿ ಆಗಿದೆ. ಮುಂದಿನ ವರ್ಷದಲ್ಲಿ ಇದರ ಪ್ರಮಾಣ 15 ಸಾವಿರ ಕೋಟಿವರೆಗೂ ಏರಿಕೆಯಾಗಲಿದೆ ಎಂದು ಆತಂಕ ಹೊರ ಹಾಕಿದ್ದಾರೆ.

### ರಾಷ್ಟ್ರಮಟ್ಟದಲ್ಲಿ ಸಿದ್ದುಗೆ ಎರಡನೇ ಸ್ಥಾನ

ಸಿದ್ದರಾಮಯ್ಯ 17ನೇ ಬಾರಿ ಬಜೆಟ್ ಮಂಡಿಸುವ ಮೂಲಕ ತಮ್ಮದೇ ದಾಖಲೆ ಮುರಿದಿದ್ದಾರೆ. ಈ ಮೂಲಕ ಕರ್ನಾಟಕ ಇತಿಹಾಸದಲ್ಲೇ ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ ನಾಯಕನಾಗಿದ್ದಾರೆ. ಜತೆಗೆ ರಾಷ್ಟ್ರಮಟ್ಟದಲ್ಲಿ 2ನೇ ಸ್ಥಾನದಲ್ಲಿದ್ದಾರೆ. ಗುಜರಾತ್ನ ಬಿಜೆಪಿಯ ಹಿರಿಯ ನಾಯಕ ವಜುಭಾಯಿ ಆರ್ ವಾಲಾ ಅವರು ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ್ದರು. ಇವರು 1998 ಮತ್ತು 2012ರ ನಡುವೆ ಒಟ್ಟು 18 ಬಜೆಟ್ ಮಂಡಿಸಿದ್ದರು. ವಾಲಾ ಅವರು 2021 ರವರೆಗೆ ಕರ್ನಾಟಕದ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದ್ದಾರೆ.

### ಮಕ್ಕಳಿಗೆ ಸೋಷಿಯಲ್ ಮೀಡಿಯಾ ಬಂದ್

ಹೆಚ್ಚುತ್ತಿರುವ ಮೊಬೈಲ್ ಬಳಕೆ ಮಕ್ಕಳ ಮೇಲೆ ಪರಿಣಾಮ ಬೀರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ 16 ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣದ ಬಳಕೆಯನ್ನು ನಿಷೇಧ ಮಾಡಿದೆ. ವಿಧಾನಸಭೆಯಲ್ಲಿ ಪ್ರಸಕ್ತ ಸಾಲಿನ ರಾಜ್ಯ ಬಜೆಟ್ ಮಂಡನೆ ಮಾಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 16 ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣದ ಬಳಕೆಯನ್ನು ನಿಷೇಧ ಮಾಡಿರುವುದಾಗಿ ಘೋಷಣೆ ಮಾಡಿದ್ದಾರೆ.

### ರೈತ ಸಮೃದ್ಧನಾದರೆ ನಾಡು ಸಮೃದ್ಧಿ

ರೈತ ಸಮೃದ್ಧಧರೆಯ ಕೃಷಿ ಶುದ್ಧವಾಗಿಯಲ್ಲದೆ, ಸಸಿ ಶುದ್ಧವಿಲ್ಲ ಎಂಬ ವಚನಕಾರ ಶಿವಲೆಂಕ ಮಂಚಣ್ಣ ಅವರ ಸಾಲು ಜೊತೆ ಕೃಷಿ ಬಜೆಟ್ ಮಂಡಿಸಿದ ಸಿಎಂ ಸಿದ್ದರಾಮಯ್ಯ, ರೈತ ಸಮೃದ್ಧನಾದರೆ ಕರ್ನಾಟಕ ಸಮೃದ್ಧ ಎಂಬ ಆಶಯದೊಂದಿಗೆ ಕೃಷಿ ಕ್ಷೇತ್ರಕ್ಕೆ ಹಲವು ಮಹತ್ವದ ಯೋಜನೆಗಳನ್ನು ಬಜೆಟ್ ನಲ್ಲಿ ಘೋಷಿಸಿದ್ದಾರೆ. ಬೀಜದಿಂದ ಮಾರುಕಟ್ಟೆಯವರೆಗೆ ರೈತರಿಗೆ ಸಮಗ್ರ ಬೆಂಬಲ ನೀಡುವ ಉದ್ದೇಶದಿಂದ ಈ ಬಾರಿಯ ಬಜೆಟ್ನಲ್ಲಿ ತಂತ್ರಜ್ಞಾನ, ಮಾರುಕಟ್ಟೆ ವಿಸ್ತರಣೆ ಹಾಗೂ ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

### ರಾಜ್ಯದ 9 ಹೊಸ ರೈಲು ಮಾರ್ಗ ನಿರ್ಮಾಣ

ರಾಜ್ಯದ 9 ಹೊಸ ರೈಲು ಮಾರ್ಗ ನಿರ್ಮಾಣ ಯೋಜನೆಗೆ ಕರ್ನಾಟಕ ಬಜೆಟ್ನಲ್ಲಿ 2026 – 27 ನೇ ಸಾಲಿಗೆ 600 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಈ ಬಗ್ಗೆ ಬಜೆಟ್ ಭಾಷಣದಲ್ಲಿ ಸಿಎಂ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ. ಗಿಣಿಗೇರಾ, ರಾಯಚೂರು, ತುಮಕೂರು, ರಾಯದುರ್ಗ, ಚಿಕ್ಕಮಗಳೂರು, ಬೇಲೂರು, ಕುಡಚಿ, ಬಾಗಲಕೋಟೆ, ಗದಗ, ವಾಡಿ,ತುಮಕೂರು, ದಾವಣಗೆರೆ, ಬೇಲೂರು, ಹಾಸನ, ಶಿವಮೊಗ್ಗ– ಶಿಕಾರಿಪುರ, ರಾಣೆಬೆನ್ನೂರು, ಧಾರವಾಡ – ಕಿತ್ತೂರು – ಬೆಳಗಾವಿ ..ಹೊಸ ರೈಲು ಯೋಜನೆಗಳಾಗಿವೆ.

### ಓಲೈಕೆಯ ಬ್ರದರ್ಸ್ ಬಜೆಟ್: ಬಿಜೆಪಿ

ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿರುವ 17 ನೇ ಬಜೆಟ್ ಗೆ



ಬಿಜೆಪಿ ಟೀಕೆ ಮಾಡಿದ್ದು, 'ಬ್ರದರ್ಸ್ ಬಜೆಟ್.. ಓಲೈಕೆ ರಾಜಕಾರಣವೇ ಪರಮ ಗುರಿ' ಎಂದು ಸರ್ಕಾರದ ವಿರುದ್ಧ ಕಿಡಿಕಾರಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ಬಿಜೆಪಿ, ಅಲ್ಪಸಂಖ್ಯಾತರಿಗೆ ಸಿದ್ದರಾಮಯ್ಯ ಬಜೆಟ್ ಘೋಷಣೆ ಮಾಡಿರುವ ಯೋಜನೆಗಳನ್ನು ಉಲ್ಲೇಖಿಸಿ ಕಿಡಿಕಾರಿದ್ದು, ಓಲೈಕೆ ರಾಜಕಾರಣವನ್ನೇ ಪರಮ ಗುರಿಯಾಗಿಸಿಕೊಂಡಿರುವ ಸಿಎಂ, ವೋಟ್ ಬ್ಯಾಂಕ್ ಉಳಿಸಿಕೊಳ್ಳಲು ರಾಜ್ಯದ ಬೊಕ್ಕಸದ ಬಹುಪಾಲನ್ನೇ ಮೀಸಲಿಟ್ಟಿರುವುದು ನಾಡಿನ ದೌರ್ಭಾಗ್ಯ ಎಂದಿದೆ.

### ದೂರ ದೃಷ್ಟಿ ಜನಪದ ಬಜೆಟ್: ದೇಶಪಾಂಡೆ

ಹಳಿಯಾಳ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ ತಮ್ಮ 17ನೇ ಬಜೆಟ್



ಮಂಡನೆಯ ಮೂಲಕ ತಮ್ಮ ಆರ್ಥಿಕ ಜ್ಞಾನ ಮತ್ತು ಆಡಳಿತ ಅನುಭವವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ. ಈ ಬಜೆಟ್ ದೂರದೃಷ್ಟಿಯೊಂದಿಗೆ ರೂಪುಗೊಂಡಿದ್ದು,ಆರ್ಥಿಕ ಶಿಸ್ತನ್ನು ಕಾಯ್ದುಕೊಂಡು ರಾಜ್ಯದ ಎಲ್ಲಾ ವರ್ಗದ ಜನರು, ಎಲ್ಲಾ ಪ್ರದೇಶಗಳು ಹಾಗೂ ವಿವಿಧ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಮಂಡಿಸಲಾಗಿದೆ. ಬಜೆಟನಲ್ಲಿ ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಸೂಪರ ಸ್ಪೇಶಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ರೂ. 100.00 ಕೋಟಿ ಅನುದಾನ ಮೀಸಲಿಟ್ಟಿದ್ದು, ಉತ್ತರ ಕನ್ನಡ ಜಿಲ್ಲೆಯ ಜನತೆಯ ಬಹುದಿನದ ಕನಸು ನನಸಾಗಿದೆ. ಜೊತೆಗೆ ಮಾಜಿ ಕುಸ್ತಿಪಟುಗಳಿಗೆ ಮಾಶಾಸನವನ್ನು ಹೆಚ್ಚಿಸಿದ್ದು, ಅವರ ಜೀವನೋಪಯಕ್ಕಾಗಿ ಸಹಾಯವಾಗಲಿದೆ ಎಂದು ಶಾಸಕ ಆರ್ ವಿ ದೇಶಪಾಂಡೆ ತಿಳಿಸಿದ್ದಾರೆ.

### ಬೆಲೆ ನಿರ್ಧಾರ ಸರ್ಕಾರಕ್ಕಿಲ್ಲ

ಅರವತ್ತು ವರ್ಷಗಳ ಹಿಂದಿನ ಕರ್ನಾಟಕ ಅಬಕಾರಿ ಕಾಯ್ದೆಗೆ ಪ್ರಮುಖ ತಿದ್ದುಪಡಿಯನ್ನು ತರಲಾಗಿದೆ. ಮದ್ಯದ ಬೆಲೆ ನಿಗದಿ ಪಡಿಸುವುದನ್ನು ಮುಕ್ತಗೊಳಿಸಲಾಗಿದೆ. ಅಂದರೆ, ಮಾರುಕಟ್ಟೆಯಲ್ಲಿನ ಪೈಪೋಟಿಗೆ ಅನುಗುಣವಾಗಿ ಮದ್ಯದ ತಯಾರಕ–ರೇ ಬೆಲೆ ನಿಗದಿ ಪಡಿಸಲು ಇನ್ನು ಮುಂದೆ ಅವಕಾಶವನ್ನು ನೀಡಲಾಗಿದೆ. ಹಾಗಾಗಿ, ಏಪ್ರಿಲ್ 1, 2026ರಿಂದ ಅನ್ವಯವಾಗುವಂತೆ, ಮದ್ಯದ ಬೆಲೆ ಕಮ್ಮಿಯಾಗುತ್ತೋ, ಜಾಸ್ತಿಯಾಗುತ್ತೋ ಎನ್ನುವುದು ಮದ್ಯದ ತಯಾರಕರ ಮೇಲೆ ಇರುತ್ತೆ.

### ರಾಜಧಾನಿ ಬೆಂಗಳೂರಿಗೆ ದಕ್ಕಿದ್ದೇನು?

ಸಂಚಾರ ದಟ್ಟಣೆ ನಿವಾರಣೆಗೆ ಬರೋಬ್ಬರಿ 40,000 ಕೋಟಿ ರೂ. ವೆಚ್ಚದಲ್ಲಿ 40 ಕಿ.ಮೀ ಉದ್ದದ ಸುರಂಗ ರಸ್ತೆ ನಿರ್ಮಾಣಕ್ಕೆ ಅನುಮೋದನೆ, ನಗರದ ರಸ್ತೆಗಳ ಬಾಳಿಕೆಗಾಗಿ ಮುಂದಿನ ಮೂರು ವರ್ಷಗಳಲ್ಲಿ 450 ಕಿ.ಮೀ ರಸ್ತೆಗಳನ್ನು 3,000 ಕೋಟಿ ರೂ. ವೆಚ್ಚದಲ್ಲಿ ವೈಟ್ ಟಾಪಿಂಗ್ನಿ ನಿರ್ಧಾರ, ನಮ್ಮ ಮೆಟ್ರೋ ಜಾಲವನ್ನು 2026–27ರ ವೇಳೆಗೆ ಹೆಚ್ಚುವರಿಯಾಗಿ 41 ಕಿ.ಮೀ ವಿಸ್ತರಣೆ ಮಾಡಿ ಲೋಕಾರ್ಪಣೆಗೆ ನಿರ್ಧಾರ, ಬೆಂಗಳೂರಿನಲ್ಲಿ ಎರಡನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಕಾರ್ಯಸಾಧ್ಯತಾ ವರದಿ ತಯಾರಿಗೆ ಮುಂದು..ಇತ್ಯಾದಿ

### ಬಾಗಲಕೋಟೆಗೆ ಸಿಕ್ಕಿರುವುದೇನು?

ಬಾಗಲಕೋಟೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಘಟಕ ಕಾಲೇಜು ಸ್ಥಾಪನೆ, ಮುಧೋಳ ತಾಲ್ಲೂಕಿನಲ್ಲಿ ನೀರಿನ ಸಂರಕ್ಷಣೆಗಾಗಿ ಚೆಕ್ ಡ್ಯಾಂ ಹಾಗೂ ಬಿ.ಸಿ.ಬಿ ನಿರ್ಮಾಣ,ಕೆರೂರು ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ, ಜಿಲ್ಲೆಯ ನಗರ ಪ್ರದೇಶಗಳಲ್ಲಿ ಮೀನು ಮಾರಾಟಕ್ಕಾಗಿ ಸುಸಜ್ಜಿತ ಮಾರುಕಟ್ಟೆಗಳ ನಿರ್ಮಾಣ.

### ವಿಜಯಪುರಕ್ಕೆ ಬಜೆಟ್ ಪಾಲೆಷ್ಟು?

ವಿಜಯಪುರ ವಿಮಾನ ನಿಲ್ದಾಣದ ಆವರಣದಲ್ಲಿ ಪೈಲಟ್ಗಳ ತರಬೇತಿಗಾಗಿ ವಿಮಾನ ಹಾರಾಟ ತರಬೇತಿ ಶಾಲೆ ಪ್ರಾರಂಭ, ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಲು ವಿಸ್ತøತ ಯೋಜನಾ ವರದಿ ತಯಾರಿ, ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ 1,000 ಬಂದಿಗಳ ಸಾಮರ್ಥ್ಯದ ನೂತನ ಕಟ್ಟಡ ನಿರ್ಮಾಣ, ಮುದ್ದೇಬಿಹಾಳ ಗ್ರಾಮಾಂತರ ಭಾಗದಲ್ಲಿ ಭದ್ರತೆಗಾಗಿ ನೂತನ ಪೊಲೀಸ್ ಠಾಣೆ, ಬಬಲೇಶ್ವರ ತಾಲೂಕಿನ ಹಲವು ಹಳ್ಳಗಳಿಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.

### ಬೀದರ್‌ಗೆ ಬಜೆಟ್‌ನಲ್ಲಿ ಸಿಕ್ಕ ಫಲ..?

ಹಜ್ ಯಾತ್ರಿಕರ ಮತ್ತು ಸಂಬಂಧಿಕರ ಅನುಕೂಲಕ್ಕಾಗಿ ಜಿಲ್ಲೆಯಲ್ಲಿ ಹಜ್ ಭವನ ನಿರ್ಮಾಣ, ಶ್ರೀ ನಾನಕ್ ಝೀರಾ ಸಾಹೇಬ್ ಗುರುದ್ವಾರದಲ್ಲಿ ಜ್ಞಾನ ಪ್ರಸಾರಕ್ಕಾಗಿ ಗ್ರಂಥಾಲಯ ಸ್ಥಾಪನೆ, ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ 1,000 ಬಂದಿಗಳ ಸಾಮರ್ಥ್ಯದ ನೂತನ ಕಟ್ಟಡ, ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಜಾನುವಾರುಗಳ ಸಿ.ಟಿ. ಸ್ಕ್ಯಾನಿಂಗ್ ಕೇಂದ್ರ ಸ್ಥಾಪನೆ.

### ಕಲಬುರಗಿಗೆ ಸಿದ್ರಾಮಯ್ಯ ಕೊಡುಗೆ..?

ಹಜ್ ಯಾತ್ರಿಕರ ಅನುಕೂಲಕ್ಕಾಗಿ ಜಿಲ್ಲೆಯಲ್ಲಿ ಸುಸಜ್ಜಿತ ಹಜ್ ಭವನ ನಿರ್ಮಾಣ, ಕ್ರೀಡಾಪಟುಗಳಿಗೆ ಉತ್ತಮ ಸೇವೆ ಒದಗಿಸಲು ಕಲಬುರಗಿಯಲ್ಲಿ ಆಧುನಿಕ ಕ್ರೀಡಾ ವಿಜ್ಞಾನ ಕೇಂದ್ರ ಸ್ಥಾಪನೆ, ಪಿ.ಎಂ. ಮಿತ್ರ ಮೆಗಾ ಜವಳಿ ಪಾರ್ಕ್ನಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ 390 ಕೋಟಿ ರೂ, ಕಲಬುರಗಿ ನಗರಕ್ಕೆ 24/7 ಶಾಶ್ವತ ಕುಡಿಯುವ ನೀರು ಒದಗಿಸಲು 1,863 ಕೋಟಿ ರೂ. ವೆಚ್ಚದ ಯೋಜನೆ, ಜೇವರ್ಗಿಯಲ್ಲಿ ವಿದ್ಯಾರ್ಥಿಗಳ ಜ್ಞಾನವೃದ್ಧಿಗಾಗಿ ನಾಲೆಡ್ಜ್ ಪಾರ್ಕ್ ಸ್ಥಾಪನೆ ಇತ್ಯಾದಿ.

### ಈ ಬಾರಿಯ ಸಿದ್ದು ಬಜೆಟ್ ಹೈಲೈಟ್ಸ್

- 2025–26ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ 184 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳನ್ನಾಗಿ ಹಾಗೂ 50 ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಅನುಕೂಲ ಕಲ್ಪಿಸಲಾಗಿದೆ.
- ಒಂದೇ ಸೂರಿನಡಿ ಗುಣಮಟ್ಟದ ಶಿಕ್ಷಣ ನೀಡಲು ಂಆಃ ನೆರವಿನೊಂದಿಗೆ 500 ಶಾಲೆಗಳು, ಏಖಆಃ ನಿಧಿಯಿಂದ 200 ಶಾಲೆಗಳು ಹಾಗೂ ಏಒಇಖಅ ನಿಧಿಯಿಂದ 100 ಶಾಲೆ, 800 ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಿಸಲಾಗುವುದು. ಇದಕ್ಕಾಗಿ ಒಟ್ಟಾರೆ 3,900 ಕೋಟಿ ರೂ.ಗಳನ್ನು ಮುಂದಿನ ಮೂರು ವರ್ಷಗಳಲ್ಲಿ ವೆಚ್ಚ ಮಾಡಲಾಗುವುದು.
- ಖಾಸಗಿ ಶಾಲೆಗಳ ಮಾನ್ಯತೆ ಪಡೆಯುವ ಹಾಗೂ ನವೀಕರಿಸುವ ಪ್ರಕ್ರಿಯೆಯನ್ನು ಆನ್ಲೈನ್ ಮೂಲಕ ಅರ್ಜಿ ಹಾಗೂ ದಾಖಲೆಗಳನ್ನು ಸಲ್ಲಿಸಲು ಅನುಮತಿಸಿ ಸರಳೀಕರಣಗೊಳಿಸಲಾಗಿದೆ.

### ವಚನ ಸಾಹಿತ್ಯ ಬೆಳವಣಿಗೆಗೆ ಒತ್ತು

ಹುಮನಾಬಾದ್: ಸಿಎಂ ಸಿದ್ದರಾಮಯ್ಯನವರ 2026–27ನೇ



ಸಾಲಿನ ಬಜೆಟ್ ಜನಸಾಮಾನ್ಯರ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ದಾಖಲೆಯ ಬಜೆಟ್ ಆಗಿದೆ. ಅಲ್ಲದೇ ಕಲ್ಯಾಣ ಕರ್ನಾಟಕ ಭಾಗದ ಶರಣರ ನಾಡಿನಲ್ಲಿ ವಚನ ವಿಶ್ವವಿದ್ಯಾಲಯ ನಿರ್ಮಾಣಕ್ಕೆ 25 ಎಕರೆ ಜಮೀನು ಮಂಜೂರು ಮಾಡುವ ಮೂಲಕ ಶರಣ ಸಾಹಿತ್ಯ ಹಾಗೂ ವಚನ ಸಾಹಿತ್ಯದ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಿದ್ದಾರೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ್ ಹೇಳಿದ್ದಾರೆ.

### ಮಾಡಿದ ಸಾಲ ಏನಕ್ಕೆ ಬಳಕೆ ?

ಸಾಲ ಮಾಡುತ್ತಿದ್ದೀರಿ, ಸರಿ. ಅದನ್ನು ಏನಕ್ಕೆ ಬಳಕೆ ಮಾಡುತ್ತಿದ್ದೀರಿ?



ಸಾಲಕ್ಕೆ ತಕ್ಕಂತೆ ಬಂಡವಾಳ ವೆಚ್ಚವೂ ಆಗಬೇಕಲ್ಲವೇ? ದುರಂತವೆಂದರೆ, ಬಂಡವಾಳ ವೆಚ್ಚ ಎಲ್ಲಿದೆಯೋ ಕಳೆದ ಮೂರು ವರ್ಷಗಳಿಂದ ಅಲ್ಲೇ ಇದೆ. ಇವರು ಸಾಲ ಮಾಡಿ ಮೋಜು ಮಾಡುತ್ತಿದ್ದಾರೆ. ಸಾಲದ ಮೇಲೆ ಸಾಲ ಮಾಡಿ 140ಕ್ಕೂ ಹೆಚ್ಚು ಕಾಂಗ್ರೆಸ್ ನಾಯಕರಿಗೆ ಕ್ಯಾಬಿನೆಟ್ ದರ್ಜೆ, ಸ್ಟೇಟ್ ಮಿನಿಸ್ಟರ್ ದರ್ಜೆ ದಯಪಾಲಿಸಿ ಪೊಗದಸ್ತಾಗಿ ಸಾಕುತ್ತಿದ್ದಾರೆ. ಅನುತ್ಪಾದಕ ವೆಚ್ಚಕ್ಕೆ ಹಣ ಪೋಲಾಗುತ್ತಿ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ದೂರಿದ್ದಾರೆ.

### ಗರ್ಭಕೋಶ ಕ್ಯಾನ್ಸರ್ ಲಸಿಕಾ ಕೇಂದ್ರ

2026ನೇ ಸಾಲಿನ ರಾಜ್ಯ ಬಜೆಟ್ ಮಂಡಿಸುತ್ತಿರುವ ಸಿಎಂ ಸಿದ್ದರಾಮಯ್ಯ ಆರೋಗ್ಯ ಕ್ಷೇತ್ರ–ಕ್ಕೆ ಹಲವು ಘೋಷಣೆಗಳನ್ನು ಮಾಡಿದ್ದಾರೆ. ಸಿಎಂ ಸಿದ್ದರಾಮಯ್ಯ ಆರೋಗ್ಯ ಕ್ಷೇತ್ರದಲ್ಲೂ ಹಲವು ಘೋಷಣೆಗಳನ್ನು ಮಾಡಿದ್ದು, ಬೆಂಗಳೂರಿನಲ್ಲಿ ಸ್ತನ ಹಾಗೂ ಗರ್ಭಕೋಶ ಕ್ಯಾನ್ಸರ್ ಲಸಿಕಾ ಕೇಂದ್ರವನ್ನು ಸ್ಥಾಪಿಸುವುದಾಗಿ ಘೋಷಿಸಿದ್ದಾರೆ. ಇದೇ ವೇಳೆ ರಾಯಚೂರು, ಬಾಗಲಕೋಟೆ, ವಿಜಯಪುರ, ಬೀದರ್, ಕೊಪ್ಪಳ, ಚಿತ್ರದುರ್ಗ, ಮಂಡ್ಯ, ಭದ್ರಾವತಿ ಮತ್ತು ಕೆಜಿಎಫ್ ಪ್ರದೇಶಗಳಲ್ಲಿನ ಇಖಙ ಆಸ್ಪತ್ರೆಗಳನ್ನು ಉನ್ನತೀಕರಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

### ಅಂಜನಾದ್ರಿ ಬೆಟ್ಟ ಪ್ರಗತಿಗೆ 100 ಕೋಟಿ..!

ಅಂಜನಾದ್ರಿ ಬೆಟ್ಟವನ್ನು ವಿಶ್ವ ಪ್ರಸಿದ್ಧ ಪ್ರವಾಸಿ ತಾಣವನ್ನಾಗಿ ಮಾಡಲು 100 ಕೋಟಿ ರೂ. ವೆಚ್ಚದ ಯೋಜನೆ, ಜಿಟಿಟಿಸಿ ಕೇಂದ್ರದಲ್ಲಿ ಕಡಿಜಬ್ಳುಿಶಟಿ ಖಿಠಿಶಟ ಇಟಿರುಟಿಜಜಡುಟಿರ ತಂತ್ರಜ್ಞಾನ ಕೇಂದ್ರ ಸ್ಥಾಪನೆ, ಜಿಲ್ಲೆಯ ಯಲಬುರ್ಗಾ ಮತ್ತು ಕುಕನೂರು ತಾಲ್ಲೂಕುಗಳಲ್ಲಿ ಅಂತರ್ಜಲ ವೃದ್ಧಿಗೆ ಕೆರೆಗಳ ಆಧುನೀಕರಣ,ನವಲಿ ಬಳಿ ತುಂಗಭದ್ರಾ ನೀರಿನ ಕೊರತೆ ನೀಗಿಸಲು ಸಮತೋಲನಾ ಜಲಾಶಯ ನಿರ್ಮಾಣದ ಪ್ರಯತ್ನ ಇತ್ಯಾದಿ.

### ಸಮಗ್ರ ಆರೋಗ್ಯ ಸೇವೆ ವಿಸ್ತರಣೆ

ಬಳ್ಳಾರಿ ನಗರದಲ್ಲಿ ನೂತನ ತಾರಾಲಯ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು,ಸಿರ'ಗುಪ್ಪ ಪಟ್ಟಣದಲ್ಲಿ ಸಾರ್ವಜನಿಕ ಸೇವೆಗಳ ಸುಗಮ ನಿರ್ವಹಣೆಗೆ ?ಪ್ರಜಾಸೌಧ?ನಿರ್ಮಾಣ., ಜಿಲ್ಲೆಯ ಗಣಿಬಾಧಿತ ತಾಲ್ಲೂಕುಗಳಲ್ಲಿ ಸಮಗ್ರ ಆರೋಗ್ಯ ಸೇವೆಗಳ ವಿಸ್ತರಣೆ, ಹರಪನಹಳ್ಳಿ ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿಗಳ ಅನುಷ್ಠಾನ ಇತ್ಯಾದಿ.

### ಯಾದಗಿರಿಗೆ ಸರ್ಕಾರದ ಕೊಡುಗೆ..?

ಜಿಲ್ಲಾ ಕೇಂದ್ರದಲ್ಲಿ 100 ಕೋಟಿ ರೂ. ವೆಚ್ಚದ ನೂತನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆ, ಕ–ಕ್ಕೇರಾ ಪಟ್ಟಣದಲ್ಲಿ ಕಾನೂನು ಸುವ್ಯವಸ್ಥೆಗಾಗಿ ನೂತನ ಪೊಲೀಸ್ ಠಾಣೆ, ಕಕ್ಕೇರಾ ಗ್ರಾಮದಲ್ಲಿ ನೂತನ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ, ಜಿಲ್ಲೆಯ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಆಸಕ್ತಿ ಮೂಡಿಸಲು ನೂತನ ತಾರಾಲಯ ನಿರ್ಮಾಣ ಇತ್ಯಾದಿ.

### ಖಾಲಿ ಚೊಂಬು ಹಿಡಿದು ಬಿಜೆಪಿ ಪ್ರತಿಭಟನೆ

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ರಾಜ್ಯ ಬಜೆಟ್ ಖಾಲಿ ಚೊಂಬಿನಂತಿದೆ ಎಂದು ಆಕ್ಷೇಪಿಸಿ ಬಿಜೆಪಿ ವತಿಯಿಂದ ಇಂದು ವಿಧಾನಸೌಧದ ಬಳಿ ಪ್ರತಿಭಟನೆ ನಡೆಸಲಾಯಿತು. ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ವಿಪಕ್ಷ ನಾಯಕ ಆರ್.ಅಶೋಕ್, ಉಪ ನಾಯಕ ಅರವಿಂದ ಬೆಲ್ಲದ, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್, ಮಾಜಿ ಸಚಿವರು, ಶಾಸಕರು, ವಿಧಾನಪರಿಷತ್ ಸದಸ್ಯರು ಭಾಗವಹಿಸಿದ್ದರು.

# ಮಕ್ಕಳಿಗೆ ಶಿಕ್ಷಣದ ಜೊತೆ, ಕ್ರೀಡೆ, ನೈತಿಕ ಶಿಕ್ಷಣವನ್ನು ಕಲಿಸಿ: ರಾಮಶೇಟ್ಟಿ ಪನ್ನಾಳೆ



- ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಮಕ್ಕಳಿಗೆ ಶಿಕ್ಷಣದ ಜೊತೆ, ಕ್ರೀಡೆ, ನೈತಿಕ ಶಿಕ್ಷಣವನ್ನು ಕಲಿಸಿದಲ್ಲಿ ಮಾತ್ರ, ಬಹುಮುಖ ಪ್ರತಿಭಾವಚಿತರಾಗಿ ಹೊರಹೊಮ್ಮುತ್ತಾರೆಂದು ಮುಖಂಡರಾದ ರಾಮಶೇಟ್ಟಿ ಪನ್ನಾಳೆ ಹೇಳಿದರು.

ಪಟ್ಟಣದ ಶಾಸ್ತ್ರೀ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ನಡೆಯುತ್ತಿರುವ ಭಾಗಿರಥಿ ಪಬ್ಲಿಕ್ ಶಾಲೆಯಲ್ಲಿ ಈಚೆಗೆ ಹಮ್ಮಿಕೊಂಡ ಶಾಲಾ ಮಟ್ಟದ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ವಿಜೇತ ಮಕ್ಕಳಿಗೆ ಪ್ರಶಸ್ತಿ ಪತ್ರ ವಿತರಿಸಿದ ಅವರು ಮಾತನಾಡಿದರು.ಆನ್‌ಲೈನ್ ಶಿಕ್ಷಣದಿಂದ ಯೋಚನೆ,ಆಲೋಚನೆ ಮರೆಯುತ್ತಿದ್ದು ಇದರಿಂದ ಮಕ್ಕಳ ಮನಸ್ಸಿನಲ್ಲಿನ ಯೋಚನಾ ಶಕ್ತಿಯು ಕುಗ್ಗುತ್ತಿದೆ. ಅಲ್ಲದೆ ಗಂಭೀರ ಪರಿಣಾಮ ಬೀರುತ್ತಿದೆ. ಸರ್ಕಾರ ಈ ನೀತಿಯನ್ನು ಕೈ ಬಿಡುವ ಯೋಚನೆ ಮಾಡುತ್ತಿದ್ದು ಆದಷ್ಟು ಶೀಘ್ರವಾಗಿ ಜಾರಿಯಾದರೆ ಉತ್ತಮ. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಅನೇಕ ಪೋಷಕರು ಮಕ್ಕಳನ್ನು ವಸತಿಯುತ ಪದ್ಧತಿಯ ಶಿಕ್ಷಣಕ್ಕೆ ಚಿಕ್ಕ ವಯಸ್ಸಿನಲ್ಲಿಯೇ ಸೇರಿಸುತ್ತಿದ್ದಾರೆ. ಆದರಿಂದ ಮಕ್ಕಳು ಮಾನಸಿಕ ಒತ್ತಡಕ್ಕೆ ಒಳಗಾಘುತ್ತಾರೆ ಎನ್ನುವುದನ್ನು ಯಾರು ಮರೆಯಬಾರದು ಎಂದರು. 18ನೇ ವಯಸ್ಸಿನವರೆಗೂ ಮಕ್ಕಳನ್ನು ತಮ್ಮ ಜೊತೆಯಲ್ಲಿಟ್ಟುಕೊಂಡು ಶಿಕ್ಷಣ ಕೊಡಿಸುತ್ತಾ, ದಿನ ನಿತ್ಯ ಅವರೊಂದಿಗೆ ಕೆಲಸಮಯ ಕಳೆದರೆ ಮಾನಸಿಕವಾಗಿ ಸದೃಢವಾಗಿ ಬೆಳೆದು ಭವಿಷ್ಯದಲ್ಲಿ ಎಂತಹದೆ ಸಮಸ್ಯೆಯನ್ನು ಸಮರ್ಥವಾಗಿ ನಿಭಾಯಿಸುತ್ತಾರೆ ಎಂದು ಜಾಗೃತಿ ಮೂಡಿಸಿದರು.ಮುಖ್ಯಶಿಕ್ಷಕ ಮನೋಜಕುಮಾರ ಹಿರೇಮಠ ಮಾತನಾಡಿ, ಶಿಕ್ಷಕರು ಹಾಗೂ ಪಾಲಕರು ಮಕ್ಕಳಿಗೆ ಮಾನವೀಯ ಮೌಲ್ಯ ಹಾಗೂ ಸಂಬಂಧಗಳ ಬಗ್ಗೆ ತಿಳಿಸುವ ಕಾರ್ಯಮಾಡಬೇಕಿದೆ ಎಂದರು.ವಿವೇಕಾನಂದ ಟ್ರಸ ಅಧ್ಯಕ್ಷ ಸಂಗಮೇಶ ಬಿರಾದಾರ, ಅರವಿಂದ ಚ್ಯಾಂಡೇಶ್ವರೆ, ಶ್ರೀದೇವಿ, ದೀಪಮಾಲಾ, ಸಂಗೀತಾ, ರಾಜಶ್ರೀ, ಅಂಬಿಕಾ, ವಾಣಿಶ್ರೀ, ಅಶ್ವಿನಿ, ಪಂಚಫುಲಾ ಹಾಗೂ ಶಾಲೆಯ ಮುದ್ದುಮ್ಮಕಳು ಇದ್ದರು.

## ಪ್ರತಿ ವಲಯಕ್ಕೂ ಸಮಾನ ಆದ್ಯತೆ

ಮಲ್ಲಮ್ಮ ನುಡಿ ವಾರ್ತೆಕಮಲನಗರ

ಪ್ರತಿಯೊಂದು ವಲಯಕ್ಕೂ ಸಮಾನ ಆದ್ಯತೆ ನೀಡಿ, ಸಮೃದ್ಧ ಕರ್ನಾಟಕದ ನಿರ್ಮಾಣಕ್ಕಾಗಿ 4.48 ಲಕ್ಷ ಕೋಟಿ ಮೊತ್ತದ 2026–2027 ಸಾಲಿನ ಬೃಹತ್ ಬಜೆಟ್ ಮಂಡಿಸಿ ಶಿಕ್ಷಣ, ಆರೋಗ್ಯ, ಕೃಷಿ ಹಾಗೂ ಮೂಲಭೂತ ಸೌಕರ್ಯಗಳಿಗೆ ವಿಶೇಷ ಒತ್ತು ನೀಡುವ ಜೊತೆಗೆ,ಸರ್ಕಾರದ ಗ್ಯಾರಂಟಿ ಯೋಜನೆಗಳ ಮೂಲಕ ಪ್ರತಿಯೊಬ್ಬರ ಬಾಳಿನಲ್ಲಿ ಹೊಸ ಭರವಸೆ ಮೂಡಿಸುವಂತೆ ಮಾಡಿದೆ. ಅಲ್ಲದೆ ಸಣ್ಣ ನೀರಾವರಿ ಹಾಗೂ ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೆ ಬಂಪರ್ ಕೊಡುಗೆ, ಸರ್ವರ ಸಬಲೀಕರಣ, ಅವಕಾಶಗಳ ಅನಾವರಣ, ನವ ಕರ್ನಾಟಕದ ನಿರ್ಮಾಣ. ಶರಣರ ನಾಡು, ಬಸವಣ್ಣನವರ ಕರ್ಮಭೂಮಿ ಬಸವಕಲ್ಯಾಣದಲ್ಲಿ ವಚನ ವಿಶ್ವವಿದ್ಯಾಲಯಕ್ಕೆ 25 ಎಕರೆ ಜಾಗ ನೀಡುವುದಾಗಿ ಬಜೆಟ್‌ನಲ್ಲಿ ಘೋಷಿಸಿರುವುದು ಅತ್ಯಂತ ಸಂತಸದ ವಿಚಾರ ಎಂದು ತಾಲೂಕಿನ ಮದನೂರ

ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪೂಜಾ ಗುಂಡಪ್ಪಾ ಬೇಲ್ಲೆ ಪ್ರಕಟಣೆ ಮೂಲಕ ತಿಳಿಸಿದರು.

## ಭೂಮಿ ಮಂಜೂರು: ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ಹರ್ಷ



- ಮಲ್ಲಮ್ಮ ನುಡಿ ವಾರ್ತೆ ಬೀದರ

ಶರಣರ ನಾಡು,ಬಸವಣ್ಣನವರ್ ಕರ್ಮಭೂಮಿ ಬಸವಕಲ್ಯಾಣದಲ್ಲಿ ವಚನ ವಿಶ್ವವಿದ್ಯಾಲಯಕ್ಕೆ 25 ಎಕರೆ ಜಾಗ ನೀಡುವುದಾಗಿ ಬಜೆಟ್‌ನಲ್ಲಿ ಘೋಷಿಸಿರುವುದು ಬಸವಾಭೀಮಾನಿಗಳಿಗೆ ಹರ್ಷದಾಯಕ ವಿಷಯವಾಗಿದೆ, ಅದೇ ರೀತಿ 1ರಿಂದ 16ವರುಷದ ಮಕ್ಕಳಿಗೆ ಸಾಮಾಜಿಕ ಜಾಲತಾಣ ವೀಕ್ಷಣೆ ನಿಷೇದ ಮಾಡಿರುವ ಈ ಮಹತ್ವದ ಘೋಷಣೆ ಮಾಡಿದಕ್ಕಾಗಿ ಬೀದರ ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ಹಾಗು ಸಮಸ್ತ ನಾಡಿನ ಬಸವಾಭೀಮಾನಿಗಳ ಪರವಾಗಿ ಬೀದರ ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ಕಾರ್ಯದರ್ಶಿಗಳಾದ ಓಂಕಾರ ಪಾಟೀಲ ಅವರು ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಗೆ ಹಾಗು ಈ ಕಾರ್ಯ ಬಜೆಟ್‌ನಲ್ಲಿ ಘೋಷಣೆಯಾಗಲು ಪ್ರಮುಖ ಪಾತ್ರ ವಹಿಸಿರುವ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾರೆ.

“ ಸಿಎಂ ಸಿದ್ದರಾಮಯ್ಯನವರು ರಾಜ್ಯದ ಜನರ ನಿರೀಕ್ಷೆಗೆ ಅನುಗುಣವಾಗಿ 2026–27ನೇ ಸಾಲಿನ ಐತಿಹಾಸಿಕ ಬಜೆಟ್ ಮಂಡಿಸಿದ್ದಾರೆ. ಅವರು ತಮ್ಮ 17ನೇ ಬಜೆಟ್ ನಲ್ಲಿ ವಿದ್ಯಾರ್ಥಿಗಳ, ಗ್ರಾಮೀಣ ಭಾಗದ ಅಭಿವೃದ್ಧಿಗೆ ಹಾಗೂ ಪ್ರವಾಸೋದ್ಯಮ ಉತ್ತೇಜನಕ್ಕೆ ಸೇರಿ ಕೃಷಿ, ಆರೋಗ್ಯ, ಶಿಕ್ಷಣ ಹೆಚ್ಚಿನ ಒತ್ತು ನೀಡಿದ್ದಾರೆ.



ಉಮೇಶ ಜಮಗಿ
ಅಧ್ಯಕ್ಷ, ಯುವ ಕಾಂಗ್ರೆಸ್ ಸಮಿತಿ ಹುಮನಾಬಾದ್


“ 2026–27ನೇ ಸಾಲಿಗೆ ಸಿಎಂ ಸಿದ್ದರಾಮಯ್ಯನವರು ಮಂಡಿಸಿರುವ 17ನೇ ಬಜೆಟ್ ಜನಪರವಾದ ಬಜೆಟ್ ಆಗಿದೆ. ಕಲ್ಯಾಣ ನಾಡಿನಲ್ಲಿ ವಚನ ಸಾಹಿತ್ಯ ವಿಶ್ವವಿದ್ಯಾಲಯ ನಿರ್ಮಾಣಕ್ಕೆ 25 ಎಕರೆ ಜಮೀನು ಮಂಜೂರು ಮಾಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹಾಗೂ ಶರಣರ ತತ್ವಕ್ಕೆ ಹೆಚ್ಚಿನ ಮನ್ನಣೆ ನೀಡಿದ್ದಾರೆ.



**ಉಮೇಶ ಒತಗಿ**
**ಕಾಂಗ್ರೆಸ್ ಯುವ ಮುಖಂಡರು, ಹಣಮಂತವಾಡಿ (ಆರ್)**

# ಮೆರವಣಿಗೆ ಜೊತೆಗೆ ಬೀರಲಿಂಗೇಶ್ವರ ಮಹೋತ್ಸವ





- ಮಲ್ಲಮ್ಮ ನುಡಿ ವಾರ್ತೆ ಬೀದರ್

ಗಡಿಜಿಲ್ಲೆಬೀದರ್‌ನಕುಂಬಾರವಾಡಾ ಮುಖ್ಯ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಲಾದ ಭವ್ಯ ಮಂದಿರದಲ್ಲಿ ಶ್ರೀ ಬೀರಲಿಂಗೇಶ್ವರ ದೇವರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಕಳಸಾರೋಹಣ ಹಾಗೂ ಭವನಗಳ ಉದ್ಘಾಟನಾ ಮಹೋತ್ಸವ ಶುಕ್ರವಾರ ಅತ್ಯಂತ ವೈಭವದಿಂದ ಆರಂಭಗೊಂಡಿತು. ಮುಂಜಾನೆಯಿಂದಲೇ ನಗರದಲ್ಲಿ ಹಬ್ಬದ ವಾತಾವರಣ ಮನೆಮಾಡಿತ್ತು.

ಜಾನಪದ ಕಲೆಗಳ ಮೇಳೈಕೆ: ಬೆಳಿಗ್ಗೆ ನಗರದ ಐತಿಹಾಸಿಕ ಮಹಾತ್ಮಾ ಬೊಮ್ಮಗೊಂಡೇಶ್ವರ ವೃತ್ತದಿಂದ ಆರಂಭವಾದ ಭವ್ಯ ಮೆರವಣಿಗೆಯು ಭಕ್ತರ ಕಣ್ಮನ ಸೆಳೆಯಿತು.

ಪುಷ್ಪಾಲಂಕೃತ ವಾಹನದಲ್ಲಿ ಶ್ರೀ ಬೀರಲಿಂಗೇಶ್ವರ, ಶ್ರೀ ಮಾಳಿಂಗರಾಯ ಹಾಗೂ ಮಹಾತ್ಮಾ ಬೊಮ್ಮಗೊಂಡೇಶ್ವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಕುಂಬಾರವಾಡಾದ ಮಂದಿರದವರೆಗೆ ಮೆರವಣಿಗೆ ನಡೆಸಲಾಯಿತು.

ಕುಂಭೋತ್ಸವ: ಸುಮಾರು 108 ಸುಮಂಗಲೆಯರು ಸಾಂಪ್ರದಾಯಿಕ ಉಡುಗೆಯಲ್ಲಿ ಪೂರ್ಣಕುಂಭ ಹೊತ್ತು ಮೆರವಣಿಗೆಯ ಮುಂಚೂಣಿಯಲ್ಲಿದ್ದರು. ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ಡೊಳ್ಳು ಕುಣಿತ ಹಾಗೂ ತಮಟೆ ತಂಡಗಳ ಪ್ರದರ್ಶನ ಮೆರವಣಿಗೆಗೆ ಕಳೆ ತಂದವು. ಡೊಳ್ಳಿನ ಸದ್ದಿಗೆ ವಯಸ್ಸಿನ ಅಂತರವಿಲ್ಲದೆ ಎಲ್ಲರೂ ಹೆಜ್ಜೆ ಹಾಕಿದ್ದು ಮೆರವಣಿಗೆಯ ಮೆರುಗನ್ನು ಹೆಚ್ಚಿಸಿತು.

ಗಣ್ಯರ ಹಾಗೂ ಮಠಾಧೀಶರ ಸಮ್ಮುಖದಲ್ಲಿ ಧಾರ್ಮಿಕ ಸಮಾರಂಭದ ಭವ್ಯ ಮೆರವಣಿಗೆಗೆ ವಿಧಾನ ಪರಿಷತ ಮಾಜಿ ಸಭಾಪತಿ ರಘುನಾಥರಾವ್ ಮಲ್ಕಾಪುರೆ ಚಾಲನೆ ನೀಡಿದರು.

ಮಠಾಧೀಶರು ಭಕ್ತರಿಗೆ ಆಶೀರ್ವಚನ ನೀಡಿದರು.

ಗೌರಾದ ಬೀರಲಿಂಗೇಶ್ವರ ಮಠದ ಶ್ರೀ ಬೀರಪ್ಪ ಮುತ್ಯಾ, ಔದತಪುರದ ಯಲ್ಲಾಲಿಂಗ ಮಠದ ಶ್ರೀ ಮಚ್ಚೆಂದ್ರನಾಥ ಮುತ್ಯಾ, ಉಚ್ಚಾದ ಬೀರಲಿಂಗೇಶ್ವರ ಪಟ್ಟದ ದೇವರು ಮಠದ ಶ್ರೀ ಗೋಪಾಲ ಮುತ್ಯಾ, ಶ್ರೀ ಜಗದೇಶ್ವರ ಮೇತ್ರೆ ಸ್ವಾಮೀಜಿ ಚೊಂಡಿ ಅವರು ದಿವ್ಯ ಸಾನಿಧ್ಯ ವಹಿಸಿ, ಸಮಾಜಕ್ಕೆ ಶಾಂತಿ ಮತ್ತು ಭಕ್ತಿಯ ಸಂದೇಶ ಸಾರಿದರು. ಪೂಜ್ಯರಿಗೂ ಸಹ ಹೂವಿನ ಅಲಂಕಾರದ ರಥದಲ್ಲಿ ಕೂರಿಸಿ ಮೆರವಣಿಗೆ ಮಾಡಲಾಯಿತು.

ಶಾಸ್ತ್ರೋಕ್ತ ಪೂಜಾ ವಿಧಿವಿಧಾನಗಳು: ನಂತರ ಮಂದಿರದ ಆವರಣದಲ್ಲಿ ವೈದಿಕ ಸಂಪ್ರದಾಯದಂತೆ ವಿವಿಧ ಪೂಜೆಗಳು ನಡೆದವು. ಗಣಪತಿ ಪೂಜೆ & ಪುಣ್ಯ ವಾಚನ, ಕಾರ್ಯಕ್ರಮ ನಿರ್ವಿಘ್ನವಾಗಿ ಸಾಗಲು ಪ್ರಥಮ ಪೂಜೆ ಸಲ್ಲಿಕೆಯಾಯಿತು. ರಕ್ಷಾ ಬಂಧನ & ದೇವತಾ ಆಹ್ವಾನ: ಸಕಲ ದೇವತೆಗಳನ್ನು ಆಹ್ವಾನಿಸಿ ವಿಧಿವಿಧಾನಗಳನ್ನು ನೆರವೇರಿಸಲಾಯಿತು. ಧಾನ್ಯಾಧಿವಾಸ & ಹವನ: ಮೂರ್ತಿಗಳ ಪಾವಿತ್ರ್ಯತೆಗಾಗಿ ಧಾನ್ಯಾಧಿವಾಸ ಮತ್ತು ಮಂತ್ರಘೋಷಗಳೊಂದಿಗೆ ಹವನ ಜರುಗಿತು.

ಮಹಾಮಂಗಳಾರತಿ: ಮುಂಜಾನೆಯ ಕಾರ್ಯಕ್ರಮಗಳ ಸಮಾರೋಪವಾಗಿ ಮಹಾಮಂಗಳಾರತಿ ನೆರವೇರಿ ತೀರ್ಥ ಪ್ರಸಾದ ವಿನಿಯೋಗಿಸಲಾಯಿತು. ಭಕ್ತಾದಿಗಳಿಗೆ ಮಹಾಪ್ರಸಾದ (ದಾಸೋಹ) ವ್ಯವಸ್ಥೆ ಮಾಡಲಾಗಿತ್ತು. ಮಧ್ಯಾಹ್ನ ಘತಮಾರಿ ಮಲ್ಲಮ್ಮ ಸತ್ಸಂಗ ತಂಡದಿಂದ ಭಕ್ತಿಪರವಶವಾದ ಭಜನೆಗಳು ನಡೆದವು. ಸಂಜೆ ಪೂಜ್ಯ ಗುರುಗಳಿಂದ ಪ್ರವಚನ ನಡೆಯಿತು. ತದನಂತರ ಮಲ್ಲಿಕಾರ್ಜುನ ರಾಂಪುರೆ ಹಾಗೂ ಸಂಗಡಿಗರು ನಡೆಸಿಕೊಟ್ಟ ಭಜನಾ ಕಾರ್ಯಕ್ರಮವು ಭಕ್ತರನ್ನು ಮಂತ್ರಮುಗ್ಧಗೊಳಿಸಿತು.

ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಅಮೃತರಾವ್ ಚಿಮಕೋಡೆ, ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗದ ಮಾಜಿ ಅಧ್ಯಕ್ಷ ಪಂಡಿತರಾವ ಚಿದ್ರಿ, ಮಾಜಿ ಜಿಲ್ಲಾ ಪಂಚಾಯತ ಅಧ್ಯಕ್ಷ ಗೀತಾ ಪಂಡಿತರಾವ್‌ಟ ಚಿದ್ರಿ, ಅಖಿಲ ಭಾರತ ಗೊಂಡ ಆದಿವಾಸಿ ಸಂಘದ ಕರ್ನಾಟಕ ಘಟಕದ ಪ್ರಧಾನ ಕಾರ್ಯದರ್ಶಿ ಮಾಳಪ್ಪ ಅಡಸಾರೆ, ಮಾಜಿ ಜಿಲ್ಲಾ ಪಂಚಾಯತ ಅಧ್ಯಕ್ಷ ಬಾಬು ಖಾಶೇಂಪುರ, ಮಾಜಿ ಗ್ರಾಮ ಪಂಚಾಯತ ಅಧ್ಯಕ್ಷ ಕಾಮಶೆಟ್ಟಿ ಹಳಿಯಂಬರ, ನಗರಸಭೆ ಸದಸ್ಯ ರಾಜಾರಾಮ ಚಿಟ್ಟಾ, ಶ್ರೀಬೀರಲಿಂಗೇಶ್ವರ ದೇವಸ್ಥಾನದ ಸೇವಾ ಸಮಿತಿ ಅಧ್ಯಕ್ಷ ಪಿ.ಎಸ್. ಇಟಗಂಪಳ್ಳಿ ಮುಖಂಡರಾದ ಈಶ್ವರ ಮಲ್ಕಾಪುರ, ಭೀಮರಾವ್ ಜನಾಪೇಟ್, ಸಂತೋಷ ಜೋಳದಾಪಕೆ, ಬಾಬುರಾವ ಸಂಗೊಳಗಿ, ಅಶೋಕ್ ಮುದಾಳೆ, ಗುರುನಾಥ ಮುದಾಳೆ, ಶ್ರೀಪತಿ ಮೇತ್ರೆ, ವಿಠಲರಾವ ಪೀಠಗೋಡ, ರಘುನಾಥ ಭುರೆ, ಕಲ್ಯಾಣರಾವ ಅಡಸಾರೆ, ಜಗನ್ನಾಥ ಜಮಗಿ, ಧನ್ನರಾಜ್ ಗುಡಮೆ, ಲೋಕೇಶ್ ಮೇತ್ರೆ, ಸಂಜು ಡೊಳ್ಳೆ ಸೇರಿದಂತೆ

# ಡಿಜಿಟಲ್ ಸಖಿಗಳು ಗ್ರಾಮೀಣ ಭಾಗದ ಸೈನಿಕರು: ಅಪೂರ್ವ ರಾಠೋಡ




- ಮಲ್ಲಮ್ಮ ನುಡಿ ವಾರ್ತೆ ಬೀದರ್

ಡಿಜಿಟಲ್ ಸಖಿಗಳು ಗ್ರಾಮೀಣ ಭಾಗದ ಸೈನಿಕರು, ಈ ಸೈನಿಕರು ಜನರಿಗೆ ಆರ್ಥಿಕ ಭದ್ರತೆ ಕುರಿತು ಅರಿವು ಮೂಡಿಸುವ ಮೂಲಕ ಕಾರ್ಯನಿರ್ವಹಿಸಿದ್ದಾರೆಂದು ಗ್ರೂಪ್ ಮುಖ್ಯಸ್ಥರು, ಸಿಎಸ್‌ಆರ್ ಮತ್ತು ಸುಸ್ಥಿರತೆ ಎಲ್ & ಟಿ ಫೈನಾನ್ಸ್‌ನ ಅಪೂರ್ವ ರಾಠೋಡ ತಿಳಿಸಿದರು.

ಅವರು ಕರ್ನಾಟಕ ಪಶುವೈದ್ಯಕೀಯ, ಬೀದರ ಪಶು ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯ ಸಭಾಂಗಣದಲ್ಲಿಂದು ಆಯೋಜಿಸಿದ ಡಿಜಿಟಲ್ ಸಖಿ ಉತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂದಿನ ಕಾರ್ಯಕ್ರಮ ಮುಕ್ತಾಯವಲ್ಲ ಹೊಸ ಆರಂಭ ಎಂದು ಹೇಳಿ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಶುಭಹಾರೈಸಿದರು.

ಅಕ್ಸಸ್‌ಲೈವ್‌ಹೂಡ್ಸ್‌ನ ನಿರ್ದೇಶಕರಾದ ಪ್ರವೀಣ ರೆಡ್ಡಿ ಮಾತನಾಡಿ, ಮೂಲಕನೂರು ಮಹಿಳಾ ಸೊಸೈಟಿ ಆರಂಭ, ಮಹಿಳಾ ಹಾಲು ಉತ್ಪಾದಕ ಸಂಘ ರಚನೆ, ಗ್ರಾಮೀಣ ಅಭಿವೃದ್ಧಿಯಲ್ಲಿ ಮಹಿಳಾ ಸಂಘಟನೆಗಳ ಪಾತ್ರದ ಕುರಿತು ಪ್ರಸ್ತಾಪಿಸಿದ ಅವರು ಎಲ್.ಅಂಡ್.ಟಿ. ಸಂಸ್ಥೆಗೆ ಧನ್ಯವಾದ ತಿಳಿಸಿದರು. ಡಿಜಿಟಲ್ ಸಖಿಗಳು ಡಿಜಿಟಲ್ ಪ್ಲಾಟ್ ಫಾರಂ ಸುರಕ್ಷಿತ ಬಳಕೆ ಮತ್ತು ಡಿಜಿಟಲ್ ಫ್ರೋಡ್‌ಗಳ ಬಗ್ಗೆ ಅತ್ಯುತ್ತಮ ಕಾರ್ಯ ನಿರ್ವಹಿದ್ದಾರೆಂದರು.

ಇದೇ ಸಂದರ್ಭದಲ್ಲಿ ಎಲ್ಲಾ ಗಣ್ಯರು ವಿಶೇಷ ಅವಾರ್ಡ್ ನೀಡುವ ಮೂಲಕ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಅಕ್ಸಸ್ ಲವಲಿಹೂಡ್ಸ್ ನಿರ್ದೇಶಕ ಸುನಿಲ್ ಭಟ್, ಅಪೂರ್ವ ರಾಠೋಡ್, ಅಕ್ಸಸ್ ಲಿವಲಿಹೂಡ್ಸ್ ನಿರ್ದೇಶಕ ಅಲಿಗಿ ರೆಡ್ಡಿ, ಆರ್.ಕೆ.ಅನಿಲ್, ಹೆಡ್ ಸಿಎಸ್‌ಆರ್–ಎಲ್ & ಟಿ ಫೈನಾನ್ಸ್ ಸಮಿರ ಶರ್ಮಾ, ಎಲ್ ಅಂಡ್ ಟಿ ಹಿರಿಯ ವ್ಯವಸ್ಥಾಪಕರ ಶ್ರೀಕಾಂತ್, ಜೆನರಲ್ ಮ್ಯಾನೇಜರ್ ನರೇಂದ್ರ ಗಾರಿದಿ, ಬೀದರ ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ದೇವಿಕಾ ಆರ್, ಬೀದರನ ಶಾರದಾ ತರಬೇತಿ ಕೇಂದ್ರದ ನಿರ್ದೇಶಕ ಬಿ.ಸುಬ್ರಮಣ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಡಿಜಿಟಲ್ ಸಖಿ ಯೋಜನೆಯ ಯೋಜನಾ ಮುಖ್ಯಸ್ಥರಾದ ಮಲ್ಲೇಶ್ ಗೌಡ ಮಾಡಿದರು. ಯೋಜನಾ ವ್ಯವಸ್ಥಾಪಕರಾದ ಮಹಮ್ಮದ್ ಸಿರಾಜ್ ವಂದನೆ ಸಲ್ಲಿಸಿದರು.

# ನಾಮಫಲಕಗಳಲ್ಲಿ ಕನ್ನಡಕ್ಕೆ ಅರವತ್ತು ಪ್ರತಿಶತ ಪ್ರಾಮುಖ್ಯತೆ ಕಡ್ಡಾಯ: ಪುರುಷೋತ್ತಮ್ ಬಿಳಿಮಲೆ



- ಮಲ್ಲಮ್ಮ ನುಡಿ ವಾರ್ತೆ ಬೀದರ್

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅನುಷ್ಠಾನ ಸಮಿತಿಯ ಮಾರ್ಗಸೂಚಿಯ ಪ್ರಕಾರ ಯಾವುದೇ ಅಂಗಡಿ, ಕಚೇರಿ ಅಥವಾ ಸಂಸ್ಥೆಗಳ ನಾಮಫಲಕಗಳಲ್ಲಿ ಕನ್ನಡ ಭಾಷೆಗೆ ಕನಿಷ್ಠ ಅರವತ್ತು ಪ್ರತಿಶತ ಪ್ರಾಮುಖ್ಯತೆ ನೀಡುವುದು ಕಡ್ಡಾಯವಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಪುರುಶೋತ್ತಮ್ ಬಿಳಿಮಲೆ ಅವರು ತಿಳಿಸಿದರು.

ಅವರಿಂದು ಬೀದರ ನಗರದ (ಹಬ್ಸಿಕೋಟ್) ಸರ್ಕಾರಿ ಅತಿಥಿ ಗೃಹದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರೊಂದಿಗೆ ಕರೆದ ಸಭೆಯಲ್ಲಿ ಮಾತನಾಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ಕನ್ನಡದ ಬಳಕೆಯನ್ನು ಹೆಚ್ಚಿಸುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದೆ. ಬೀದರ ಜಿಲ್ಲೆಯ ಜನರು ಕನ್ನಡ ಭಾಷೆಯ ಗೌರವವನ್ನು ಕಾಪಾಡುವ ದಿಸೆಯಲ್ಲಿ ಜಾಗೃತರಾಗಬೇಕು. ವಿಶೇಷವಾಗಿ ಯುವಕರು ಹಾಗೂ ವಿದ್ಯಾರ್ಥಿಗಳು ತಮ್ಮ ದೈನಂದಿನ ಜೀವನದಲ್ಲಿ ಕನ್ನಡವನ್ನು ಹೆಚ್ಚು ಬಳಸಬೇಕು. ಕನ್ನಡ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಹೆಚ್ಚಿಸಲು ಪೋಷಕರು ಹಾಗೂ ಸಮಾಜದ ಎಲ್ಲ ವರ್ಗದವರು ಮುಂದಾಗಬೇಕು ಎಂದು ಹೇಳಿದರು.

ಕನ್ನಡ ಶಾಲೆಗಳ ಬೆಳವಣಿಗೆಗೆ ಸರ್ಕಾರ ಹಾಗೂ ಸಮಾಜ ಎರಡೂ ಕೈಜೋಡಿಸಬೇಕಾಗಿದೆ. ಗ್ರಾಮೀಣ ಭಾಗಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳ ಮೂಲ ಸೌಕರ್ಯಗಳನ್ನು ಬಲಪಡಿಸುವುದು, ಅರ್ಹ ಶಿಕ್ಷಕರನ್ನು ನೇಮಕ ಮಾಡುವುದು ಹಾಗೂ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ವ್ಯವಸ್ಥೆ ಕಲ್ಪಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಜೊತೆಗೆ ಪಾಲಕರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಲ್ಲಿ ಸೇರಿಸುವಂತೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ರಾಮ್ ಶಿಂಧೆ ಮಾತನಾಡಿ, ಗಡಿನಾಡಿನ ಜಿಲ್ಲೆಗಳಲ್ಲಿ ಕನ್ನಡ ಭಾಷೆಯ ಉಳಿವು ಮತ್ತು ಅಭಿವೃದ್ಧಿಗೆ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸುತ್ತಿದ್ದು, ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ ಸುನೀಲ ಭಾವಿಕಟ್ಟಿ, ಟಿ.ಎಂ. ಮಚ್ಚೆ, ಅಂಬರೀಷ ಮಲ್ಲೇಶಿ, ರಘುಶಂಕ ಭಾತಂಬ್ರಾ, ಅವರು ಅಧ್ಯಕ್ಷರಿಗೆ ಸನ್ಮಾನಿಸಿ ಜಿಲ್ಲೆಯಲ್ಲಿರುವ ಕನ್ನಡ ಭಾಷೆಯ ಸಮಸ್ಯೆಗಳ ಕುರಿತು ಅಧ್ಯಕ್ಷರೊಂದಿಗೆ ಸಭೆಯಲ್ಲಿ ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಸಮಾಜಿಕ ಚಿಂತಕ ಜಗನ್ನಾಥ ಹೆಬ್ಬಾಳೆ, ಎಸ್.ಬಿ. ಕುಚಬಾಳ್, ಸಂಜೀವಕುಮಾರ್ ಸಿರ್ಸೆ, ಸಂತೋಷ ಹೊನ್ನಡಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
ಪ್ರಧಾನ ಸಂಪಾದಕರು
ಮೋ: 9845028349

# ಗ್ರಾಮೀಣ ಪ್ರದೇಶಗಳಲ್ಲಿ ಜನರ ನರಕಯಾತನೆ

ರಾಜ್ಯದಲ್ಲಿ ಅಭಿವೃದ್ಧಿಯ ಮಾತುಗಳು ದಿನವೂ ಕೇಳಿಬರುತ್ತಿದ್ದರೂ, ಗ್ರಾಮೀಣ ಪ್ರದೇಶಗಳ ಜನರ ನಿಜವಾದ ಪರಿಸ್ಥಿತಿ ಇನ್ನೂ ದುಃಖಕರವಾಗಿಯೇ ಇದೆ. ನಗರಗಳಲ್ಲಿ ಸೌಲಭ್ಯಗಳ ಮಳೆ ಸುರಿಯುತ್ತಿರುವಾಗ, ಗ್ರಾಮಗಳಲ್ಲಿ ಜನರು ಮೂಲಭೂತ ಸೌಲಭ್ಯಗಳ ಕೊರತೆಯಿಂದ ನರಕಯಾತನೆ ಅನುಭವಿಸುತ್ತಿದ್ದಾರೆ. ರಸ್ತೆಗಳು ಹಾಳಾಗಿರುವುದು, ಕುಡಿಯುವ ನೀರಿನ ಕೊರತೆ, ಆರೋಗ್ಯ ಸೇವೆಗಳ ಅಭಾವ ಮತ್ತು ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದಿರುವುದು ಗ್ರಾಮೀಣ ಜನರ ದೈನಂದಿನ ಸಮಸ್ಯೆಗಳಾಗಿವೆ.

ಗ್ರಾಮಗಳಲ್ಲಿ ಸರಿಯಾದ ರಸ್ತೆಗಳಿಲ್ಲದೆ ಜನರು ಸಂಚಾರಕ್ಕೆ ಬಹಳ ಕಷ್ಟ ಅನುಭವಿಸುತ್ತಿದ್ದಾರೆ. ಮಳೆಯ ಸಮಯದಲ್ಲಿ ರಸ್ತೆಗಳಲ್ಲಿ ಚಿಕ್ಕ ಗುಂಡಿಗಳೇ ದೊಡ್ಡ ಕೆರೆಗಳಂತೆ ಕಾಣುತ್ತವೆ. ಇದರಿಂದ ವಿದ್ಯಾರ್ಥಿಗಳು ಶಾಲೆಗೆ ಹೋಗಲು ಹಾಗೂ ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ತೆ–ಔಂದರೆ ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇದರ ಜೊತೆಗೆ, ಹಲವಾರು ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರು ಲಭ್ಯವಿಲ್ಲ. ಜನರು ಕಿಲೋಮೀಟರ್‌ಗಳಷ್ಟು ದೂರ ಹೋಗಿ ನೀರು ತರುವ ಪರಿಸ್ಥಿತಿ ಇನ್ನೂ ಮುಂದುವರಿದಿದೆ. ಆರೋಗ್ಯ ಸೇವೆಗಳ ವಿಷಯದಲ್ಲಿಯೂ ಗ್ರಾಮೀಣ ಜನತೆ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾರೆ. ಗ್ರಾಮಗಳಲ್ಲಿ ಆಸ್ಪತ್ರೆಗಳು ಇಲ್ಲದಿರುವುದು ಅಥವಾ ವೈದ್ಯರು ಲಭ್ಯವಿಲ್ಲದಿರುವುದು ಜನರಿಗೆ ದೊಡ್ಡ ಸಮಸ್ಯೆಯಾಗಿದೆ. ಸರ್ಕಾರ ಗ್ರಾಮೀಣ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಘೋಷಿಸಿದರೂ, ಅವುಗಳ ಅನುಷ್ಠಾನದಲ್ಲಿ ಅನೇಕ ಕೊರತೆಗಳು ಕಾಣಿಸುತ್ತಿವೆ. ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ನೇರವಾಗಿ ಅರಿತು ಪರಿಹಾರ ಕಂಡುಕೊಳ್ಳುವ ಮನೋಭಾವ ತೋರಬೇಕು. ಜನರ ತೆರಿಗೆ ಹಣದಿಂದ ನಡೆಯುವ ಆಡಳಿತ ಜನರ ಸೇವೆಗೆ ಮೀಸಲಾಗಿರಬೇಕು. ಆದ್ದರಿಂದ ಸರ್ಕಾರ ಹಾಗೂ ಜನಪ್ರತಿನಿಧಿಗಳು ಗ್ರಾಮೀಣ ಪ್ರದೇಶಗಳ ಸಮಸ್ಯೆಗಳತ್ತ ವಿಶೇಷ ಗಮನ ಹರಿಸಬೇಕು. ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮೂಲಕ ಗ್ರಾಮಗಳ ಅಭಿವೃದ್ಧಿಗೆ ಆದ್ಯತೆ ನೀಡಿದರೆ ಮಾತ್ರ ಗ್ರಾಮೀಣ ಜನರ ನರಕಯಾತನೆ ಕಡಿಮೆಯಾಗಬಹುದು. ಇಲ್ಲವಾದರೆ ಅಭಿವೃದ್ಧಿಯ ಮಾತುಗಳು ಕೇವಲ ಕಾಗದದಲ್ಲೇ ಉಳಿಯುವ ಅಪಾಯ ಇದೆ.

“ ದಾಖಲೆ ರಾಮಯ್ಯನವರ ಪ್ರಸ್ತುತ ಸಾಲಿನ ಬಜೆಟ್ ರಾಜ್ಯದ ಜನರ ಕಲ್ಯಾಣಕ್ಕೆ ಪೂರಕವಾದ ಐತಿಹಾಸಿಕ ಬಜೆಟ್ ಇದಾಗಿದೆ. ಗ್ರಾಮ ಪಂಚಾಯಿತಿಗೆ ಮಹಾತ್ಮ ಗಾಂಧಿ ಹೆಸರು ಮರು ನಾಮಕರಣ ಮಾಡುವ ಮೂಲಕ ಗ್ರಾಮೀಣ ಭಾಗದ ಹಳ್ಳಿಗಳ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವ ಮೂಲಕ ಗ್ರಾಮೀಣ ಭಾಗದ ಜನರ ನಿರೀಕ್ಷೆ ತಕ್ಕಂತೆ ಸಿಎಂ ಬಜೆಟ್ ಮಂಡಿಸಿದ್ದಾರೆ.



**ಡಾ. ಚಂದ್ರಶೇಖರ ಪಾಟಿಲ್**
**ವಿಧಾನ ಪರಿಷತ್ ಸದಸ್ಯ**

---

“ ರಾಜ್ಯದ ಯುವ ಜನತೆಯ ಬೇಡಿಕೆಗೆ ಅನುಗುಣವಾಗಿ ಸಿಎಂ ಸಿದ್ದರಾಮಯ್ಯನವರು ಪ್ರಸ್ತುತ ಸಾಲಿನ ಬಜೆಟ್ ಮಂಡಿಸಿದ್ದಾರೆ. ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸರಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗೆ ಭರ್ತಿ ಮಾಡುವುದಕ್ಕೆ ಗ್ರಿನ್ ಸಿಗ್ನಲ್ ನೀಡಲಾಗಿದೆ. ಅಲ್ಲದೇ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ಸಾಮಾಜಿಕ ಜಾಲತಾಣದ ಮೇಲೆ ಕಡಿವಾಣಕ್ಕೆ ಮುಂದಾಗಿರುವುದು ಐತಿಹಾಸಿಕ ನಿರ್ಧಾರ ಇದಾಗಿದೆ.



**ಭೀಮರಾವ ಪಾಟೀಲ್**
**ವಿಧಾನ ಪರಿಷತ್ ಸದಸ್ಯ**

---

“ ಮುಖ್ಯಂಮಂತ್ರಿ ಸಿದ್ದರಾಮಯ್ಯ ನವರ ಈ ಬಜೆಟ್ ಎಲ್ಲ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಪೂರಕವಾದ ಬಜೆಟ್ ಆಗಿದೆ. ವಯೋವೃದ್ಧರು, ಬಾಣಂತಿ, ಶಿಶು ಆರೈಕೆಗಾಗಿ ತರಬೇತಿ ಕೇಂದ್ರ ಹಾಗೂ ಸ್ವಯಂ ಉದ್ಯೋಗಕ್ಕಾಗಿ ಮಹಿಳಾ ಕೋ ಆಪರೇಟಿವ್ ಸೊಸೈಟಿ ಸೇರಿ ವಿವಿಧ ಯೋಜನೆಗಳು ನೀಡಿ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ.



**ಅಭಿಷೇಕ ಪಾಟೀಲ್**
**ಉಪಾಧ್ಯಕ್ಷ, ಡಿಸಿಸಿ ಬ್ಯಾಂಕ್ ಬೀದರ್**

“ ರಾಜ್ಯದ ಜನರ ಕಲ್ಯಾಣಕ್ಕೆ ಪೂರಕವಾಗಿ ಸಿಎಂ ಗ್ಯಾರಂಟಿ ರಾಮಯ್ಯನವರು ತಮ್ಮ 17ನೇ ಐತಿಹಾಸಿಕ ಬಜೆಟ್ ಮಂಡಿಸಿದ್ದಾರೆ. ಕಲ್ಯಾಣ ನಾಡಿನಲ್ಲಿ ವಚನ ವಿಶ್ವವಿದ್ಯಾಲಯ ನಿರ್ಮಾಣ ಸೇರಿ ಮಹಿಳೆಯರ ಸಬಲೀಕರಣ ಹಾಗೂ ರೈತರ, ವಿದ್ಯಾರ್ಥಿಗಳ ಬೆಳವಣಿಗೆಗೆ ಮನ್ನಣೆ ನೀಡಲಾಗಿದೆ.



**ರಾಜು ಪೂಜಾರಿ**
**ಕಾಂಗ್ರೆಸ್ ಯುವ ಮುಖಂಡರು, ದುಬಲಗುಂಡಿ**

# ಸಮ ಸಮಾಜ ನಿರ್ಮಾಣಕ್ಕೆ ಸಿದ್ರಾಮಯ್ಯನವರ ಕೊಡುಗೆ ಅಪಾರ

**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ :** ಸಮ ಸಮಾಜ ನಿರ್ಮಾಣ ಕಾರ್ಯಕ್ಕೆ 12ನೇ ಶತಮಾನದ ವಚನ ಸಾಹಿತ್ಯವು ಕಾಲಗರ್ಭದಲ್ಲಿ ಮರೆಯಾಗಿತ್ತಿರುವ ಸಂದರ್ಭದಲ್ಲಿ 770 ಶರಣರ ವಚನಗಳ ಹಸ್ತಪ್ರತಿ ಸಂಗ್ರಹಿಸಿ ಸಂಶೋಧಿಸಿ, ಪ್ರಕಟಿಸಿ ವಚನ ಸಾಹಿತ್ಯದ ನವಚೇತನಕ್ಕೆ ಕಾರಣಿಕರ್ತರಾದವರು ನೇಕಾರ ಸಮುದಾಯದ ಶರಣ ಜಿವಿ ಡಾ. ರಾಯಬಹಾದ್ದೂರ ಫಕಿರಪ್ಪ ಗುರುಬಸಪ್ಪಾ ಹಳಕಟ್ಟಿ ಅವರು ತನ್ನ ಜೀವನದುದ್ದಕ್ಕೂ ಇವುಗಳನ್ನು ಉಳಿಸಿ ಬೆಳೆಸಿ ಈ ಸಮಾಜಕ್ಕೆ ಕೊಟ್ಟ ಅತ್ಯಂತ ದೊಡ್ಡ ಕೊಡುಗೆ ಅವರದು ಅಂತಹ



ವಚನ ಸಾಹಿತ್ಯಕ್ಕೆ ಇಂದಿನ ತಂತ್ರಜ್ಞಾನ ಯುಗದಲ್ಲಿ ಅವುಗಳಿಗೆ ಪ್ರಚಾರ ಪ್ರಸಾರದ ಕೊರತೆ ಅರಿತ ಇಂದಿನ ನಾಡದೋರೆ ಮಾನ್ಯ ಮುಖ್ಯಮಂತ್ರಿ ಸಿದ್ರಾಮಯ್ಯನವರು ಕಲ್ಯಾಣ ನಾಡಿನಲ್ಲಿ ವಚನ ವಿಶ್ವವಿದ್ಯಾಲಯಕ್ಕೆ 25ಎಕರೆ ಭೂಮಿ ಕೊಡುವ ವಾಗ್ದಾನ (ಘೋಷಣೆ) ಮಾಡಿದ್ದೂ ಸ್ವಾಗತಾರ್ಹ ಜೊತೆಗೆ ಬೀದರ ಮಹಾನಗರ ಪಾಲಿಕೆಗೆ 100 ಕೋಟಿ ಬಜೆಟನಲ್ಲಿ ಬಂಪರ ಕೊಡುಗೆ ಕೊಡುವುದರ ಜೊತೆundefinedಗೆ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ವಿದ್ಯಾರ್ಥಿಗಳ ಹಸ್ತದಲ್ಲಿ ಮೊಬೈಲ್ ನಿಷೇಧ ಇದು ಮಕ್ಕಳ ಸರ್ವಾಂಗಿಣ ವಿಕಾಸಕ್ಕೆ ಹೊಸ ಮುನ್ನುಡಿ ಬರೆದಿದ್ದಾರೆ ಅಹಿಂದ ತತ್ವ ಸಿದ್ಧಾಂತಕ್ಕೆ ಹಿಂದುಳಿದ ವರ್ಗಗಳ ಅಭಿವೃದ್ಧಿಗೆಗಾಗಿ ಹೊಸ ಯೋಜನೆಗಳು ಜಾರಿಗೆ ತಂದಿದ್ದು ರೈತಾಪಿ ವರ್ಗಕ್ಕೆ ಈ ಬಜೆಟ ಆಸರೆ ಮಾಡಿರುವ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳ ಜೊತೆ ಕೃತಜ್ಞತೆಗಳು. ಮಾನ್ಯ ಸಿದ್ರಾಮಯ್ಯನವರ ಮಂಡಿಸಿರುವ ಈ 17ನೇ ಬಜೆಟ ಜನಪರ ವಿದ್ಯಾರ್ಥಿಪರ, ರೈತಪರ, ಎಂದು ಬಸವಭಾಗ್ಯ ಎಜುಕೇಷನ ಹಾಗೂ ಚಾರಿಟೇಬಲ್ ಟ್ರಸ್ಟ (ರಿ.) ಭಾಲ್ಕಿ ಸಂಸ್ಥೆಯ ಕಾರ್ಯದರ್ಶಿ ಸಂತೋಷ ಬಿಜಿ ಪಾಟೀಲ ತಿಳಿಸಿದ್ದಾರೆ.

# ವೈಭವದ ಸಂಗೀತ ದರ್ಬಾರ್, ಬಕ್ಕಪ್ರಭುಗಳ ಮೇಲೆ ಭಕ್ತಿ ಇಟ್ಟವರ ಇಷ್ಟಾರ್ಥ ಸಿದ್ಧಿ: ನೀತಾ ಬೆಲ್ದಾಳೆ



**ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:** ಶ್ರೀ ಗುರು ಬಕ್ಕಪ್ರಭುಗಳ ಮಹಿಮೆ ಅಪಾರವಾಗಿದೆ. ಬಕ್ಕಪ್ರಭುಗಳ ಮೇಲೆ ಭಕ್ತಿ, ಶ್ರದ್ಧೆ ಇಟ್ಟು ಪೂಜಿಸಿದರೆ ನಮ್ಮ ಇಷ್ಟಾರ್ಥಗಳು ಸಿದ್ಧಿಯಾಗುತ್ತವೆ ಎಂದು ಡಾ. ನೀತಾ ಶೈಲೇಂದ್ರ ಬೆಲ್ದಾಳೆ ಹೇಳಿದರು. ತಾಲೂಕಿನ ಕರಕನಳ್ಳಿ ಗ್ರಾಮದ ಶ್ರೀ ಗುರು ಗಂಗಾಧರ ಬಕ್ಕಪ್ರಭುಗಳ 212 ನೇ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಸಂಗೀತ ದರ್ಬಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಜಿಲ್ಲೆಯಲ್ಲಿಯೇ ಶ್ರೀ ಗುರು ಗಂಗಾಧರ್ ಬಕ್ಕಪ್ರಭು ದೇವಸ್ಥಾನದವರು ಜಾತ್ರಾ ಸಂದರ್ಭದಲ್ಲಿ ಸಂಗೀತ ದರ್ಬಾರ್ ಕಾರ್ಯಕ್ರಮ ಹಮ್ಮಿಕೊಂಡು ಸಂಗೀತ ಕಲೆ ಸಂರಕ್ಷಿಸಲು ಶ್ರಮಿಸುತ್ತಿರುವ ಕಾರ್ಯ ಮೆಚ್ಚುವಂತಾಗಿದೆ. ಗಂಗಾಧರ ಬಕ್ಕಪ್ರಭು ದೇವರ ಆಶೀರ್ವಾದ ಹಾಗೂ ಮತದಾರರ ಕೃಪೆಯಿಂದ ಶಾಸಕರಾಗಿದ್ದಾರೆ. ಸಾರ್ವಜನಿಕರ ಸಮಸ್ಯೆಗಳಿಗೆ ಹಾಗೂ ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸುತ್ತಾರೆ ಎಂದರು. ಭಾಲ್ಕಿ ಹಿರೇಮಠ ಸಂಸ್ಥಾನದ ಗುರುಬಸವ ಪಟ್ಟದೇವರು ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಅವರು, ಕರಕನಳ್ಳಿ ಗ್ರಾಮ ಬಕ್ಕಪ್ರಭುಗಳು ತಪಸ್ಸು ಮಾಡಿದ ಪವಿತ್ರಭೂಮಿಯಾಗಿದೆ. ಬಕ್ಕಪ್ರಭುಗಳು ಪವಾಡಪುರಷರಾಗಿದರು ಇವರ ಆದರ್ಶ ತತ್ವಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜೀವನ ಸಾಗಿಸಲು ತಿಳಿಸಿದರು. ಸಮಾಜ ಸೇವಕ ಮಹಮ್ಮದ್ ಅಸ್ಲಾಂಮಿಯಾ ಮಾತನಾಡಿ, ಬಕ್ಕಪ್ರಭು ದೇವಸ್ಥಾನ ಪುರಾತನ ದೇವಾಲಯವಾಗಿದೆ ಈ ದೇವಾಲಯಕ್ಕೆ ಸರ್ವ ಜನಾಂಗದ ಭಕ್ತರು ಆಗಮಿಸಿ ದೇವರನ್ನು ಪ್ರಾರ್ಥಿಸುತ್ತಾರೆ. ಬಕ್ಕಪ್ರಭುಗಳು ಭಕ್ತರ ಬೇಡಿದ ವರ ನೀಡುತ್ತಾರೆ ಎಂದರು. ನರನಾಳ ಶಿವಕುಮಾರ ಶಿವಾಚಾರ್ಯರು ಮಾತನಾಡಿದರು. ಚಿಟಗುಪ್ಪ ಮತ್ತು ಚಾಂಗಲೇರಾ ಹಿರೇಮಠದ ಪೂಜ್ಯ ಗುರುಲಿಂಗ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮರುಳಾರಾಧ್ಯ ಶಿವಾಚಾರ್ಯರು, ಶಿವಯೋಗಿ ಜಂಗಮಯ್ಯ ಮಹಾಸ್ವಾಮಿಗಳು, ಪಂಚಾಯತ ಅಭಿವೃದ್ಧಿ ಅಧಿಕಾರಿ ರಾಜಕುಮಾರ ಪಂಚಾಳ, ಶಿವಶರಣಪ್ಪ ವರಪುಲ, ಶೈಲೇಂದ್ರ ಕಾವಡಿ, ನವಲಿಂಗ ಪಾಟೀಲ, ಗೋಪಾಲರೆಡ್ಡಿ ನಿರ್ಣಾ, ಶಿವಶಂಕರ ಮಾಲಿ ಪಾಟೀಲ, ಜಗನ್ನಾಥರೆಡ್ಡಿ ಮಟಾಟಿ, ಲಕ್ಷ್ಮಿಕಾಂತ ಕುಲಕರ್ಣಿ ನಾಗಪ್ಪಾ ಮಕಾಜಿ ಜಗನ್ನಾಥ ಗಾರಿ, ಪ್ರಭು ಫಾಟೊಳ್ಳಿ, ಹಿರಿಯ ಕಲಾವಿದ ಧೂಳಪ್ಪ ಮುಡಬಿ, ಸಂಜುಕುಮಾರ್ ಸ್ವಾಮಿ ಸೇರಿದಂತೆ ಇತರೆ ಕಲಾವಿದರ ತಮ್ಮ ಸಂಗೀತ ಸೇವೆ ಸಲ್ಲಿಸಿದರು. ನವಲಿಂಗ ಪಾಟೀಲ್ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ಕಲಾವಿದರು ವಿವಿಧ ಭಕ್ತಿಗೀತೆಗಳು, ಜನಪದ ಭಾವಗೀತೆ ಹಾಗೂ ಭಜನೆಗಳ ಹಾಡನ್ನು ಕೇಳಿ ಸಾವಿರಾರು ಭಕ್ತರು ಆನಂದಿಸಿದರು.

# ರಾಜ್ಯ ಸರ್ಕಾರದ ಬಜೆಟ್, ಖಾಲಿ ಚೊಂಬು: ಶಾಸಕ ಪ್ರಭು ಚವ್ಹಾಣ

**ಮಲ್ಲಮ್ಮ ನುಡಿ ವಾರ್ತೆ ಔರಾದ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ರಾಜ್ಯ ಬಜೆಟ್ ಜನಸಾಮಾನ್ಯರ ನಿರೀಕ್ಷೆಗಳನ್ನು ಈಡೇರಿಸದ ಖಾಲಿ ಚೊಂಬಿನಂತಿದೆ ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ. ಚವ್ಹಾಣ ಟೀಕಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ರಾಜ್ಯದ ರೈತರು, ಯುವಕರು ಹಾಗೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಸ್ಪಷ್ಟವಾದ ಯೋಜನೆಗಳನ್ನು ಬಜೆಟ್‌ನಲ್ಲಿ ಘೋಷಿಸಿಲ್ಲ. ರಾಜ್ಯ ಸರ್ಕಾರದ ಖಜಾನೆ



ಖಾಲಿಯಾಗಿ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಹೆಣಗಾಡುತ್ತಿರುವಂತೆ ಕಾಣುತ್ತಿದೆ ಎಂದಿದ್ದಾರೆ.

ಕಳೆದ ಮೂರು ವರ್ಷಗಳಿಂದ ಅತೀವೃಷ್ಟಿಯಿಂದ ತೀವ್ರಬಾಧಿಸಿರುವ ಕಲ್ಯಾಣ ಕರ್ನಾಟಕ ಭಾಗದ ಎಲ್ಲ ರಸ್ತೆ, ಸೇತುವೆ, ಕೆರೆ-ಕಟ್ಟೆಗಳು ಒಡೆದು ವಿಪರೀತನಷ್ಟಸಂಭವಿಸಿದೆ. ಬೆಳೆನಷ್ಟವಾಗಿ ರೈತರು ಕಂಗಾಲಾಗಿದ್ದಾರೆ. ಸರ್ಕಾರ ಅವಶ್ಯಕತೆಗೆ ತಕ್ಕಂತೆ ಅನುದಾನ ಬಿಡುಗಡೆ ಮಾಡುತ್ತಿಲ್ಲ. ನಿಯಮಿತವಾಗಿ ಸಂಬಳ ಸಿಗುತ್ತಿಲ್ಲವೆಂದು ಸರ್ಕಾರಿ ನೌಕರರು ಗೋಳಾಡುತ್ತಿದ್ದಾರೆ. ಈ ಭಾಗಕ್ಕೆ ಹೊಸ ಯೋಜನೆಯನ್ನು ಘೋಷಿಸುವ ಅಗತ್ಯವಿತ್ತು. ಇದ್ಯಾವುದನ್ನೂ ಮಾಡದೇ ಸರ್ಕಾರ ಅಭಿವೃದ್ಧಿಯನ್ನು ಕೇವಲ ಭಾಷಣಗಳಿಗೆ ಸೀಮಿತಗೊಳಿಸಿದಂತೆ ತೋರುತ್ತಿದೆ. ಬೀದರ ಜಿಲ್ಲೆಯಲ್ಲಿ ಪ್ರವಾಸೋದ್ಯಮ, ನೀರಾವರಿ, ಕೈಗಾರಿಕಾ ಕ್ಷೇತ್ರಗಳಿಗೆ ವಿಶೇಷ ಅನುದಾನ ಘೋಷಿಸದೇ ಜನರ ನಿರೀಕ್ಷೆಗಳನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿದ್ದಾರೆ.

ರಾಜ್ಯದಲ್ಲಿ ನೀರಾವರಿ, ಗ್ರಾಮೀಣ ರಸ್ತೆ, ಕುಡಿಯುವ ನೀರು ಹಾಗೂ ಉದ್ಯೋಗ ಸೃಷ್ಟಿಗೆ ಸಂಬಂಧಿಸಿದಂತೆ ಜನರು ಹೆಚ್ಚಿನ ನಿರೀಕ್ಷೆ ಇಟ್ಟು-ಕೊಂಡಿದ್ದರು. ಆದರೆ ಈ ಬಜೆಟ್‌ನಲ್ಲಿ ಹೊಸದಾಗಿ ಯಾವುದೇ ಮಹತ್ವದ ಯೋಜನೆಗಳಿಲ್ಲದೆ ಕೇವಲ ಘೋಷಣೆಗಳ ಮಟ್ಟಕ್ಕೆ ಮಾತ್ರ ಸೀಮಿತವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಗೋವುಗಳು ಸೇರಿದಂತೆ ಜಾನುವಾರುಗಳ ಹಿತದೃಷ್ಟಿಯಿಂದ ಹಿಂದೆ ಬಿಜೆಪಿ ನೇತೃತ್ವದ ಸರ್ಕಾರ ಜಾರಿಗೆ ತಂದಿರುವ ಎಲ್ಲ ಜನಪ್ರಿಯ ಯೋಜನೆಗಳನ್ನು ಸ್ಥಗಿತಗೊಳಿಸಲಾಗಿದೆ. ಜಿಲ್ಲೆಗೊಂದು ಗೋಶಾಲೆ ಯೋಜನೆಗೆ ಹಣ ನೀಡುತ್ತಿಲ್ಲ. ಜಾನುವಾರುಗಳ ಆರೋಗ್ಯ ಕಾಪಾಡಲು ಜಾರಿಗೆ ತಂದಿದ್ದ ಪಶು ಸಂಜೀವಿನಿ ಎಂಬ್ಯುಲೆನ್ಸ್ ಗಳು ನಿಂತಲ್ಲೇ ತುಕ್ಕು ಹಿಡಿಯುತ್ತಿವೆ. ಇರುವ ಗೋಶಾಲೆಗಳು ಮುಚ್ಚುವ ಪರಿಸ್ಥಿತಿಗೆ ಬಂದಿವೆ. ಪುಣ್ಯಕೋಟಿ ದತ್ತು ಯೋಜನೆ ಸ್ಥಗಿತಗೊಂಡಿದೆ. ಗೋವುಗಳನ್ನು ಅಕ್ರಮವಾಗಿ ಕಸಾಯಿ ಖಾನೆಗೆ ಸಾಗಿಸುವ ಧಂಧೆ ಎಗ್ಗಿಲ್ಲದೇ ನಡೆಯುತ್ತಿದೆ. ಜಾನುವಾರುಗಳ ಸಂಖ್ಯೆ ದಿನೇ ದಿನೇ ಕುಸಿಯುತ್ತಿದೆ. ಸರ್ಕಾರ ಜಾನುವಾರು ವಿರೋಧಿಯಾಗಿ ನಡೆದುಕೊಳ್ಳುತ್ತಿದೆ ಎಂದು ಕಿಡಿ ಕಾರಿದ್ದಾರೆ.

# ರಾಜ್ಯ ಬಜೆಟ್ ಆಶೆ ಆಕಾಂಕ್ಷೆ ಪೂರೈಸುವಲ್ಲಿ ವಿಫಲ

**ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ರಾಯಚೂರು ಜಿಲ್ಲೆಯ ಜನರ ನಿರೀಕ್ಷೆಗಳನ್ನು ನಿರ್ಲಕ್ಷಿಸಿದ 2026-27 ರಾಜ್ಯ ಬಜೆಟ್ ಹಟ್ಟಿ ಚಿನ್ನದ ಗಣಿ ವಿಸ್ತರಣೆ, ನವಲಿ ಸಮಾನಾಂತರ ಜಲಾಶಯ, ಜವಳಗೇರ ಅಖಈ ನಲ್ಲಿ ವಿಶ್ವವಿದ್ಯಾಲಯ



ಘೋಷಣೆ ಮಾಡದಿರುವುದು ಮತ್ತು ಅಸಾಂಖ್ಯಾತ ಅಸಂಘಟಿತ ಕಾರ್ಮಿಕರನ್ನು ಕಡೆಗಣಿಸಿದ್ದು ಖಂಡನೀಯ!

ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ ಇಂದಿನ ಬಜೆಟ್ ರಾಯಚೂರಲ್ಲಿ ಕೃತಕ ಬುದ್ದಿಮತ್ತೆ(ಎಐ) ಸ್ಥಾಪನೆ, ರಾಯಚೂರು ಮಹಾನಗರ ಪಾಲಿಕೆ ಅಭಿವೃದ್ಧಿ, ಇಎಸ್ ಐ ಆಸ್ಪತ್ರೆ ಮೇಲ್ದರ್ಜೆಗೆ, ಟ್ರಾಮಾ ಸೆಂಟರ್ ನಿರ್ಮಾಣ, ಅಂಬಾಮಠದಲ್ಲಿ ವಸತಿಯುಕ್ತ, ಪ್ರಥಮ ದರ್ಜೆ ಕಾಲೇಜು, ಮಸ್ಕಿಗೆ ಕ್ರೀಡಾಂಗಣ, ಪಾಮನಕಲ್ಲೂರ, ಸಾಲಗುಂದ, ಜಾಲವಾಡಗಿ, ಮಾನವಿ ಯರದಿಹಾಳ ಏತ ನೀರಾವರಿ ಹಾಗೂ ಮುಖ್ಯವಾಗಿ ಜನರ ಜೀವನಾಡಿ, ತುಂಗಭದ್ರ 33 ಕ್ರಷ್ಟ ಗೇಟ್ ಹೊಸ ನಿರ್ಮಾಣ ಬಜೆಟ್ ನಲ್ಲಿ ಘೋಷಣೆ ಮಾಡಲಾಗಿದೆ ಸ್ವಾಗತವಾದುದು.

ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಮಂಡಿಸಿದ 2026-27ನೇ ಸಾಲಿನ ರಾಜ್ಯ ಬಜೆಟ್ ರಾಜ್ಯದ ದುಡಿಯುವ ಜನತೆ, ರೈತರು ಮತ್ತು ನಿರುದ್ಯೋಗ ಯುವಕರ ಆಶೆ-ಆಕಾಂಕ್ಷೆಗಳನ್ನು ಪೂರೈಸುವಲ್ಲಿ ವಿಫಲವಾಗಿದೆ ಎಂದು ಸಿಪಿಐ(ಎಂಎಲ್) ರೆಡ್ ಸ್ಟಾರ್ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸುತ್ತದೆ.

ವಿಶೇಷವಾಗಿ ರಾಯಚೂರು ಜಿಲ್ಲೆಯ ಜನರು ಹಲವು ವರ್ಷಗಳಿಂದ ಆಗ್ರಹಿಸುತ್ತಿರುವ ಪ್ರಮುಖ ಅಭಿವೃದ್ಧಿ ಯೋಜನೆಗಳ ಕುರಿತು ಬಜೆಟ್ ಸಂಪೂರ್ಣ ಮೌನವಾಗಿರುವುದು ಸರ್ಕಾರದ ಜನವಿರೋಧಿ ಧೋರಣೆಯನ್ನು ಬಯಲಿಗೆಳೆಯುತ್ತದೆ. ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಬಲ್ಲ ಹಟ್ಟಿ ಚಿನ್ನದ ಗಣಿ ವಿಸ್ತರಣೆ ಯೋಜನೆ ಕುರಿತು ಯಾವುದೇ ಘೋಷಣೆ ಇಲ್ಲದಿರುವುದು ಅತ್ಯಂತ ದುಃಖಕರ. ಈ ಯೋಜನೆ ವಿಸ್ತರಣೆಗೊಂಡಿದ್ದರೆ ರಾಯಚೂರು ಜಿಲ್ಲೆಯ ಸಾವಿರಾರು ಯುವಕರಿಗೆ ನೇರ ಹಾಗೂ ಪರೋಕ್ಷವಾಗಿ ಉದ್ಯೋಗ ಸಿಗಬಹುದಿತ್ತು.

ಅದೇ ರೀತಿ ಕೃಷಿ ಮತ್ತು ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಅತ್ಯಂತ ಅಗತ್ಯವಾಗಿರುವ ನವಲಿ ಸಮಾನಾಂತರ ಜಲಾಶಯ ನಿರ್ಮಾಣ ಯೋಜನೆಗೂ ಬಜೆಟ್‌ನಲ್ಲಿ ಹಣ ಮೀಸಲಿಡದಿರುವುದು ಜಿಲ್ಲೆಯ ರೈತರಿಗೆ ಮಾಡಿದ ದೊಡ್ಡ ಅನ್ಯಾಯವಾಗಿದೆ. ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಸಮರ್ಪಕ ಬಳಕೆ ಹಾಗೂ ಭವಿಷ್ಯದ ನೀರಿನ ಭದ್ರತೆಗಾಗಿ ಈ ಯೋಜನೆ ಅತ್ಯಂತ ಅಗತ್ಯವಾಗಿದೆ.

ಇನ್ನೊಂದೆಡೆ ರಾಯಚೂರು ಜಿಲ್ಲೆಯ ಜವಳಗೇರ ಪ್ರದೇಶದಲ್ಲಿರುವ ಸುಮಾರು 7000 ಎಕರೆ ಅಖಈ ಭೂಮಿ ಸುಮಾರು ವರ್ಷಗಳಿಂದ ಪಾಳು ಬಿದ್ದಿದೆ. ಈ ಭೂಮಿಯಲ್ಲಿ ಒಂದು ದೊಡ್ಡ ರಾಜ್ಯ ವಿಶ್ವವಿದ್ಯಾಲಯ ಸ್ಥಾಪನೆ ಮಾಡುವ ಮೂಲಕ ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಉನ್ನತ ಶಿಕ್ಷಣದ ಅವಕಾಶ ಕಲ್ಪಿಸಬಹುದಾಗಿತ್ತು. ಆದರೆ ಸರ್ಕಾರ ಅದಕ್ಕೂ ಯಾವುದೇ ಘೋಷಣೆ ಮಾಡದಿರುವುದು ಶಿಕ್ಷಣ ಮತ್ತು ಪ್ರಾದೇಶಿಕ ಅಭಿವೃದ್ಧಿ ಬಗ್ಗೆ ಸರ್ಕಾರದ ನಿರ್ಲಕ್ಷ್ಯವನ್ನು ತೋರಿಸುತ್ತದೆ.

ರಾಯಚೂರು ಜಿಲ್ಲೆಯ ಅಭಿವೃದ್ಧಿಗೆ ಅಗತ್ಯವಿರುವ ಅಸಂಘಟಿತ ಕಾರ್ಮಿಕರನ್ನು ಖಾಯಂ ಗೊಳಿಸದೇ ಕಡೆಗಣಿಸಿರುವುದು ಸೇರಿದಂತೆ ಪ್ರಮುಖ ಯೋಜನೆಗಳನ್ನು ಕಡೆಗಣಿಸುವುದು ಸರ್ಕಾರದ ಅಭಿವೃದ್ಧಿ ಘೋಷಣೆಗಳ ನಿಜಸ್ವರೂಪವನ್ನು ಬಯಲಿಗೆಳೆಯುತ್ತದೆ.

ಆದ್ದರಿಂದ ಸರ್ಕಾರ ತಕ್ಷಣವೇ ಹಟ್ಟಿ ಚಿನ್ನದ ಗಣಿ ವಿಸ್ತರಣೆ ಯೋಜನೆಗೆ ಅನುಮೋದನೆ ನೀಡಬೇಕು ನವಲಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ಅಗತ್ಯ ಹಣ ಮೀಸಲಿಡಬೇಕು. ಹಾಗೆಯೇ ಜವಳಗೇರಿ ಅಖಈ ಭೂಮಿಯಲ್ಲಿ ರಾಜ್ಯ ವಿಶ್ವವಿದ್ಯಾಲಯ ಸ್ಥಾಪನೆ ಘೋಷಿಸಬೇಕು. ಹಾಗೂ ಅಸಂಘಟಿತ ಕಾರ್ಮಿಕರನ್ನು ಖಾಯಂ ಮಾಡಬೇಕು. ಈ ಮೇಲಿನ ಪ್ರಮುಖ ಜನರ ಬೇಡಿಕೆಗಳನ್ನು ಈಡೇರಿಸದೆ ಇದ್ದಲ್ಲಿ ಸಿಪಿಐ(ಎಂಎಲ್) ರೆಡ್ ಸ್ಟಾರ್ ನೇತೃತ್ವದಲ್ಲಿ ರೈತರು, ಕಾರ್ಮಿಕರು, ಯುವಕರು ಮತ್ತು ವಿದ್ಯಾರ್ಥಿಗಳನ್ನು ಸಂಘಟಿಸಿ ಹೋರಾಟಗಳನ್ನು ಆರಂಭಿಸಲಾಗುವುದು ಎಂದು ರಾಜ್ಯ ಸಮಿತಿ ಎಚ್ಚರಿಸುತ್ತದೆ.ಎಂ ಗಂಗಾಧರ್ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದರು

# ಗರ್ಭಿಣಿ ಮಹಿಳೆಯರು ಮಧ್ಯಾಹ್ನ ಅವಧಿಯಲ್ಲಿ ಹೊರ ಹೋಗದಿರಿ: ಯಲ್ಲಾ ರಮೇಶ್ ಬಾಬು

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,** ಜಿಲ್ಲೆಯಲ್ಲಿ ಬಿಸಿಲಿನ ಪ್ರಖರತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮಧ್ಯಾಹ್ನದ ಅವಧಿಯಲ್ಲಿ ಗರ್ಭಿಣಿ ಮಹಿಳೆಯರು ಹೊರಗಡೆ ಓಡಾಡಬಾರದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.



ಶುಕ್ರವಾರ ವಿದ್ಯಾನಗರ ಬಡಾವಣೆಯ ಕರಿಮಾರೆಮ್ಮ ದೇವಸ್ಥಾನದ ಬಳಿಯ ನಮ್ಮ ಕ್ಲಿನಿಕ್ ಗೆ ಭೇಟಿ ನೀಡಿ ಸಾರ್ವಜನಿಕರೊಂದಿಗೆ ಅವರು ಮಾತನಾಡಿದರು. ದಿನದಿಂದ ದಿನಕ್ಕೆ ಜಿಲ್ಲೆಯಲ್ಲಿ ಬಿಸಿಲಿನ ಪ್ರಖರತೆಯು ಹೆಚ್ಚುತ್ತಿರುವುದರಿಂದ ಮಧ್ಯಾಹ್ನ 12 ರಿಂದ 03 ಗಂಟೆ ಅವಧಿಯಲ್ಲಿ ಬಿಸಿಲಿನ ತೀವ್ರತೆಯು ಹೆಚ್ಚು ಕಂಡುಬರುತ್ತಿರುವ ಹಿನ್ನಲೆಯಲ್ಲಿ ಗರ್ಭಿಣಿ ಮಹಿಳೆಯರು ಆದಷ್ಟು ಮನೆಯಲ್ಲಿಯೇ ಇರುವ ಮೂಲಕ ಆರೋಗ್ಯದ ಕಾಳಜಿಗೆ ಒತ್ತು ನೀಡಬೇಕು. ಕುಟುಂಬದ ಸದಸ್ಯರು ಸಹ ಮುತುವರ್ಜಿ ವಹಿಸಬೇಕು ಎಂದು ತಿಳಿಸಿದರು.

ದೇಹದಲ್ಲಿ ನೀರಿನಾಂಶದಿಂದ ಆಗಬಹುದಾದ ಅನಾನುಕೂಲತೆಗಳನ್ನು ತಡೆಗಟ್ಟಲು ಹೆಚ್ಚು ನೀರನ್ನು ಕುಡಿಯಲು ಆದ್ಯತೆ ಮಾಡಿಕೊಳ್ಳಬೇಕು. ಬೇಸಿಗೆ ಹಿನ್ನಲೆಯಲ್ಲಿ ಬಾಣಂತಿಯರು ನವಜಾತ ಶಿಶುವಿಗೆ ತಾಯಿ ಹಾಲು ಕಡಿಮೆ ಆಗಬಹುದೆಂಬ ಭಾವನೆಯಿಂದ ತಾಯಿ ಹಾಲು ಬಿಟ್ಟು ಬೇರೆ ಏನನ್ನೂ ಕೊಡಬಾರದು. ತಾಯಿ ಹಾಲಿನಲ್ಲಿ ಸಾಕಷ್ಟು ನೀರಿನಾಂಶ ಇರುವುದರಿಂದ ದಿನಕ್ಕೆ ಕನಿಷ್ಟ 10 ರಿಂದ 12 ಬಾರಿ ಅಥವಾ ಮಗು ಅತ್ತಾಗಲೆಲ್ಲಾ ಹಾಲುಣಿಸಬೇಕು ಎಂದು ತಿಳಿಸಿದರು.

ಈಗಾಗಲೇ ಆಸ್ಪತ್ರೆಗೆ ಬರುವ ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರಲ್ಲಿ ನಿರ್ಜಲೀಕರಣ ತಡೆಗಾಗಿ ಎಲ್ಲಾ ಆರೋಗ್ಯ ಕೇಂದ್ರಗಳಿಗೆ ಓ.ಆರ್.ಎಸ್. ಕಾರ್ನರ್ ಮಾಡಲು ಸೂಚಿಸಲಾಗಿದೆ. ಆಸ್ಪತ್ರೆ ಭೇಟಿ ಸಂದರ್ಭದಲ್ಲಿ ಓ.ಆರ್.ಎಸ್ ದ್ರಾವಣ ಸೇವಿಸುವ ಮೂಲಕ ದೇಹದಲ್ಲಿ ನಿರ್ಜಲೀಕರಣದಿಂದಾಗುವ ಅಪಾಯಗಳನ್ನು ತಪ್ಪಿಸಬಹುದಾಗಿದೆ ಎಂದರು. ಈಗಾಗಲೇ ಬಿಸಿಲಿನ ಶಾಖಾಘಾತದಿಂದ ಸಂಭವಿಸಬಹುದಾದ ತೊಂದರೆಯನ್ನು ತಪ್ಪಿಸಲು ತಕ್ಷಣ ಚಿಕಿತ್ಸೆ ನೀಡಲು ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಲಾ 01 ಬೆಡ್, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ 02 ಬೆಡ್, ಜಿಲ್ಲಾ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಕನಿಷ್ಟ 5 ಬೆಡ್‌ಗಳ ಕೊಠಡಿಗಳನ್ನು ಕಾಯ್ದಿರಿಸಲು ಸೂಚಿಸಲಾಗಿದೆ ಎಂದರು.

ಜಿಲ್ಲೆಯ ಗ್ರಾಮ ಮಟ್ಟದಲ್ಲಿರುವ ಆಯುಷ್ಮಾನ್ ಆರೋಗ್ಯ ಮಂದಿರ ಸೇರಿದಂತೆ ಎಲ್ಲ ಆರೋಗ್ಯ ಕೇಂದ್ರಗಲ್ಲಿ ಬಿಸಿಲಿನ ಶಾಖಾಘಾತದ ಚಿಕಿತ್ಸೆಗೆ ಸಂಬಂಧಿಸಿದಂತೆ ಅಗತ್ಯ ತುರ್ತು ಔಷಧಿಗಳು ಕೊರತೆಯಾಗದಂತೆ ದಾಸ್ತಾನು ಇರಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಮ್ಮ ಕ್ಲಿನಿಕ್ ವೈದ್ಯಾಧಿಕಾರಿ ಡಾ.ಮುಜಾಮಿಲ್ ಫಿರ್ದೊಜ್, ಸಿಬ್ಬಂದಿ ಗಂಗಾಭವಾನಿ, ಪದ್ಮಾ, ಝ್ಯುಬಾ ನಾಜ್ ಹಾಗೂ ಸಾರ್ವಜನಿಕರು ಹಾಜರಿದ್ದರು.

# ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಅಮೋಘ: ಪಂಚಾಳ

**ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:** ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಅಮೂಲ್ಯವಾಗಿದೆ ಎಂದು ತಹಶೀಲ್ದಾರ್ ಮಂಜುನಾಥ್ ಪಂಚಾಳ ಹೇಳಿದರು. ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ಹಾಗೂ ಪ್ರಾದೇಶಿಕ ಎನ್‌ಎಸ್‌ಎಸ್ ಘಟಕ ಮತ್ತು ಮೇರಾ ಭಾರತ್ ಸಹಯೋಗದಲ್ಲಿ ನಡೆದ ವಿಕಸಿತ ಭಾರತ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು. ಯುವಕರು ಅನ್ಯಾಯ ಅತ್ಯಾಚಾರ ವಿರುದ್ಧ ನ್ಯಾಯ ದೊರಕಿಸಿಕೊಡಲು ಹೋರಾಟ ಮಾಡಲು ಸಿದ್ಧರಾಗಬೇಕು. ಸರ್ಕಾರಿ ಕಚೇರಿಗಳ ಅಧಿಕಾರಿಗಳು ಸಾರ್ವಜನಿಕರ ಸೇವಕರು, ನಾವು ಅಧಿಕಾರಿಗಳು ಅಲ್ಲ ನಾವು ನಿಮ್ಮ ಸೇವರು, ನಿಮ್ಮ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳಲು ಅಂಜದೆ, ಅಳುಕದೆ ನಮ್ಮನ್ನು ನೇರವಾಗಿ ಕೇಳಬೇಕು ಎಂದರು. ಕಲ್ಯಾಣ ಕರ್ನಾಟಕ ಪ್ರದೇಶ ಹಿಂದುಳಿದ ಪಟ್ಟ ಹೋಗಲಾಡಿಸಲು ಯುವಕರು ಜಾಗೃತರಾಗಿ, ಪರಿಶ್ರಮ ಪಟ್ಟು ಅಧ್ಯಯನ ಮಾಡಬೇಕು ಎಂದು ಹೇಳಿದರು. ಸ್ಪರ್ಧಾತ್ಮಕ




ಯುಗದಲ್ಲಿ ವಿದ್ಯಾರ್ಥಿಗಳು ಕಷ್ಟ ಪಟ್ಟು ಅಧ್ಯಯನ ಮಾಡದೇ ಇಷ್ಟ ಪಟ್ಟು ಅಧ್ಯಯನ ಮಾಡಿ ತಮ್ಮ ಭವಿಷ್ಯ ಉಜ್ವಲಗೊಳ್ಳಲು ಸಹಾಯವಾಗುತ್ತದೆ ಎಂದರು. ಬೀದರ್ ವಿಶ್ವವಿದ್ಯಾಲಯದ ವಿಶೇಷ ಅಧಿಕಾರಿ ಡಾ. ರವೀಂದ್ರ ಗಬಾಡೆ ಮಾತನಾಡಿ, ಭಾರತ ಸಂವಿಧಾನದ ಮೌಲ್ಯಗಳು, ಹಕ್ಕು-ಕರ್ತವ್ಯಗಳ ಬಗ್ಗೆ ಸ್ಪಷ್ಟ ಅರಿವು ಮೂಡುತ್ತದೆ. ಹಾಗೆಯೇ ದೇಶದ ಸಮಸ್ಯೆಗಳ ಬಗ್ಗೆ ಚಿಂತನೆ ಮಾಡಿ ಪರಿಹಾರ ಸೂಚಿಸುವ ಮನೋಭಾವ ಬೆಳೆಸುತ್ತದೆ. ಜತೆಗೆ ಸಹಿಷ್ಣುತೆ ಮತ್ತು ಪರಸ್ಪರ ಗೌರವ, ವಿಭಿನ್ನ ಅಭಿಪ್ರಾಯಗಳನ್ನು ಆಲಿಸಿ ಗೌರವಿಸುವ ಸಂಸ್ಕಾರ ಬೆಳೆಸುತ್ತದೆ. ಭವಿಷ್ಯದ ನಾಯಕತ್ವಕ್ಕೆ ಪೂರಕವಾಗಿದೆ ಎಂದರು. ರಾಷ್ಟ್ರೀಯ ಸೇವಾ ಯೋಜನೆ ಯುವಕರಲ್ಲಿ ವ್ಯಕ್ತಿತ್ವ ವಿಕಸನಕ್ಕೆ ಹಾಗೂ ಸೇವಾ ಮನೋಭಾವನೆ ಒಡ ಮೂಡಿಸಲು ಸಹಾಯವಾಗುತ್ತದೆ ಎಂದರು. ಕಾಲೇಜಿನ ಪ್ರಾಂಶುಪಾಲ ಡಾ. ಜಯಕುಮಾರ್ ಸಿಂಧೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ್ಮ ದೇಶದ ಸಂವಿಧಾನ ಶ್ರೇಷ್ಠವಾದ ಸಂವಿಧಾನವಾಗಿದೆ. ಸಕಲ ಜನಾಂಗದವರಿಗೆ ಸಮಾನತೆಯ ಹಕ್ಕು ಇರುವಂತಹ ಸಂವಿಧಾನ ನಮ್ಮ ಭಾರತ ದೇಶದ ಸಂವಿಧಾನವಾಗಿದೆ ಎಂದರು. ಯುವಕರು ಸಂವಿಧಾನ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಪ್ರತಿಯೊಬ್ಬ ವಿದ್ಯಾರ್ಥಿ ಶ್ರಮಿಸಬೇಕು ಎಂದರು. ತುರ್ತು ಪರಿಸ್ಥಿತಿ ಕರಾಳ ದಿನಗಳ ಬಗ್ಗೆ ಸುಧೀರ್ಘವಾಗಿ ವಿವರಿಸಿದರು. ಇದೇ ಸಂದರ್ಭದಲ್ಲಿ ಭಾಲ್ಕಿ, ಹುಲಸೂರ್, ಬಸವಕಲ್ಯಾಣ, ಹುಮನಾಬಾದ, ಬೀದರ್, ಬೆಂಗಳೂರು, ಚಿಟಗುಪ್ಪ ಕಾಲೇಜುಗಳ ಒಟ್ಟು 118 ವಿದ್ಯಾರ್ಥಿಗಳು ಪಾಲ್ಗೊಂಡು ಮೇರಾ ಯುವ ಭಾರತ ಕುರಿತು ಮಾತನಾಡಿದರು. ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಸ್ಪರ್ಧೆಗೆ ಕಳುಹಿಸಲಾಗುವುದು ಎಂದರು. ಬೀದರ್ ಸರ್ಕಾರಿ ಪ್ರಥಮ ದರ್ಜೆ (ಮಹಿಳಾ) ಕಾಲೇಜಿನ ಆಂಗ್ಲ ಪ್ರಾಧ್ಯಾಪಕಿ ಡಾ. ವಿದ್ಯಾ ಪಾಟೀಲ್ ಮಾತನಾಡಿದರು. ಡಾ. ಚಿತ್ರಶೇಖರ್ ಚಿರಳ್ಳಿ, ಡಾ. ದೀಪಕಕುಮಾರ್, ನಿರ್ಣಾಯಕರಾಗಿ ವೀರಶೆಟ್ಟಿ ಮೈಲುರಕ್ಕರ್, ಡಾ. ರವಿ ನಾಯಕ, ಡಾ. ಶಾಂತಕುಮಾರ್ ಬನಗುಂಡಿ, ಪ್ರೋ. ಶಾಂತಕುಮಾರ ಪಾಟೀಲ್ ಇವರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಧ್ಯಾಪಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಗಣಿತ ವಿಭಾಗದ ಮುಖ್ಯಸ್ಥೆ ಡಾ. ಗೌಸಿಯಾ ಬೇಗಂ ನಿರೂಪಿಸಿದರು. ಅನೀಲಕುಮಾರ ಸಿಂಧೆ ವಂದಿಸಿದರು.

# ನಾಳೆ ನೇತ್ರಕಲಾ ಸಂಘದ 15ನೇ ವಾರ್ಷಿಕೋತ್ಸವ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ.** : ನಗರದ ಡಾ. ಜೋಳದ ರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ನಾಳೆ ನೇತ್ರಕಲಾ ಸಂಘದ 15ನೇ ವಾರ್ಷಿಕೋತ್ಸವದ

ಹಮ್ಮಿಕೊಂಡಿದ್ದು. ಸದರಿ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವನ್ನು ಪೂರ್ಣಾನಂದ ಭಾರತಿ ಮಹಾಸ್ವಾಮಿಗಳು ಮಾತಂಗ ಪರ್ವತ ಹಂಪಿ ಹಾಗೂ ಡಾ. ಶಿವಕುಮಾರ್ ತಾತನವರು ಶ್ರೀ ತಾಯಮ್ಮ ದೇವಿ ಪುಣ್ಯಶ್ರಮದ ಪೀಠದ ಅಧ್ಯಕ್ಷರು, ಕುಡದರಹಾಳು ಇವರುಗಳು ಸಾನಿಧ್ಯ ವಹಿಸಲಿದ್ದು.




ಕಾರ್ಯಕ್ರಮದ ಉದ್ಘಾಟನೆಯನ್ನು ಎಂ ಚಂದ್ರಶೇಖರ ಗೌಡ ಯುವ ಉದ್ಯಮಿಗಳು ಉದ್ಘಾಟಿಸಲಿದ್ದಾರೆ

ಕಾರ್ಯಕ್ರಮದ ಅಧ್ಯಕ್ಷತೆ ಪಿ ಗಾದೆಪ್ಪ ಮಹಾಪೌರರು ಬಳ್ಳಾರಿ ಮಹಾನಗರ ಪಾಲಿಕೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮುಂಡರಗಿ ನಾಗರಾಜ್ ಎ ಮಾನಯ್ಯ ಕನ್ನಡ ಸಾಹಿತ್ಯ ಪರಿಷತ್ತಿನ ನಿಷ್ಠೆ ರುದ್ರಪ್ಪ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಬಿ ನಾಗರಾಜ್ ಹಾಗು ಸಫಾಯಿ ಕರ್ಮಚಾರಿ ನಿಗಮದ ಮಾಜಿ ಅಧ್ಯಕ್ಷರಾದ ಹೆಚ್ ಹನುಮಂತಪ್ಪ. ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷರಾದ ಎಲ್ಲನಗೌಡ ಶಂಕರ್ ಬಂಡೆ,ಯುವ ಸಮಾಜಸೇವಕ ರಾಜೇಶ್ ಮತ್ತು ಕಲಾ ಸಂಘದ ಅಧ್ಯಕ್ಷ ದಳವಾಯಿ ಈರಣ್ಣ ಉಪಸ್ಥಿತಿ ಇರಲಿದ್ದು. ನಂತರ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ ಎಂದು ವೀರೇಶ್ ದಳವಾಯಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾರ್ವಜನಿಕ ಛತ್ರಪತಿ ಶಿವಾಜಿ ಜಯಂತಿ: ಚೇತನ ಕಪ್ಪಿಕೇರೆ

**ಮಲ್ಲಮ್ಮ ನುಡಿ ವಾರ್ತೆ ಔರಾದ.**

ಛತ್ರಪತಿ ಶಿವಾಜಿ ಮಹಾರಾಜರ ಸಾರ್ವಜನಿಕ ಜಯಂತಿ ಉತ್ಸವ ನಿಮಿತ್ತ ಪಟ್ಟಣದಲ್ಲಿ ಶನಿವಾರ ವಿವಿಧ ಕಾರ್ಯಕ್ರಮಗಳು ಜರುಗಲಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲು ಪಾಲ್ಗೊಳ್ಳುವಂತೆ ಜಯಂತಿ ಉತ್ಸವ ಸಮಿತಿ ಅಧ್ಯಕ್ಷ ಚೇತನ ಕಪ್ಪಿಕೇರೆ ಮನವಿ ಮಾಡಿಕೊಂಡಿದ್ದಾರೆ.

ಅಂದು ಬೆಳಿಗ್ಗೆ 10 ಗಂಟೆಗೆ ನಗರದ ಬಸವೇಶ್ವರ ವೃತದಲ್ಲಿ ಬಿರಾದರ



ಆಸ್ಪತ್ರೆಯ ಉಚಿತ ನೇತ್ರ ಚಿಕಿತ್ಸೆ, ವಿ-ಕೇರ ಆಸ್ಪತ್ರೆಯ ಆರೋಗ್ಯ ತಪಾಸನಾ ಶಿಬಿರ, ಶಿವಾಜಿ ಮಹಾರಾಜರ ಕೃಷಿನೀತಿ ಕುರಿತು ನಿಬಂಧ ಸ್ಪರ್ಧೆ ಸೇರಿದಂತೆ ಹಲವು ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 4 ಗಂಟೆಗೆ ಎಪಿಎಂಸಿ ವೃತದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರದ ಭವ್ಯ ಮೇರವಣಿಗೆಗೆ ತಹಸೀಲ್ದಾರ ಮಹೇಶ ಪಾಟೀಲ್ ಅವರು ಚಾಲನೆ ನೀಡಲಿದ್ದು ಸಂಜೆ 6 ಗಂಟೆಗೆ ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದು ಕಪ್ಪಿಕೇರೆ ಹೇಳಿದ್ದಾರೆ. ಕಾರ್ಯಕ್ರಮದಲ್ಲಿ ಜ್ಞಾನಶ್ರೀ ದಾದಾ ಮಹಾರಾಜ ನಗರಕರ ಪುಣೆ ಅವರ ಸಾನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಶಾಸಕ ಪ್ರಭು ಚವ್ಹಾಣ ಭಾಗವಹಿಸಲಿದ್ದು ಮುಖ್ಯಾಥಿತಿಗಳಾಗಿ ಡಿವೈಎಸ್ಪಿ ಶಿವಾನಂದ ಪವಾಡಶೆಟ್ಟಿ, ತಹಸೀಲ್ದಾರ ಮಹೇಶ ಪಾಟೀಲ್, ಇಓ ಕಿರಣ ಪಾಟೀಲ್, ರಾಜೇಂದ್ರ ಜಾಧವ ಕೆಕೆಆರ್ಟಿಸಿ, ನಾರಾಯಣ ಗಣೇಶ , ಸಿಪಿಐ ಅಮೋಲ ಕಾಳೆ, ಮುಖಂಡರಾದ ಕಿಶನರಾವ ಪಾಟೀಲ್ ಸೇರಿದಂತೆ ಹಲವರು ಉಪಸ್ಥಿತರಿರಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆ ಶಿವಾಜಿರಾವ್ ಪಾಟೀಲ್ ಮುಂಗನಾಳ ಅವರು ವಹಿಸಲಿದ್ದಾರೆ. ವೇದಿಕೆ ಕಾರ್ಯಕ್ರಮದಲ್ಲಿ ಸುನೀಲ ರಾಜೇಂದ್ರ(ಐಆರ್ಟಿಎಸ್ ಸಹಾಯಕ ವಾಣಿಜ್ಯ ಪ್ರಬಂಧಕ ಮುಂಬೈ ಅಖಒಖ) ಮತ್ತು ಮಾರುತಿ ವಾಡಿಕರ್ ಬಿಸನೇಸ್ ಎಕ್ಸಲೇನ್ಸ್ ಅವಾರ್ಡಿಗಳನ್ನು ಸನ್ಮಾನಿಸಲಾಗುವುದು. ಹೀಗಾಗಿ ಕಮಲನಗರ ಹಾಗೂ ಔರಾದ್ ತಾಲೂಕಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕಪ್ಪಿಕೇರೆ ಮನವಿ ಮಾಡಿದ್ದಾರೆ.

# ಜಿಲ್ಲೆಯ ರೈತರಿಗೆ, ಕಾರ್ಮಿಕರಿಗೆ ಬಜೆಟ್ ನಿರಾಸೆ: ತಪಲಿ

**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:**

ಬೀದರ್ ಜಿಲ್ಲೆಯ ಜೀವನಾಡಿ ಆಗಿರುವ ಬಿಎಸೆಸ್ಕ್ ಕಾರ್ಖಾನೆ ಪುನರಾಂಭಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿರುವ



ಬಜೆಟ್ ನಲ್ಲಿ ಯಾವುದೇ ಅನುದಾನ ನೀಡದೆ ಇದ್ದುದಕ್ಕೆ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಅನುರಾಧ ತಪಲಿ ಪ್ರತಿಕ್ರಿಯೆ ವ್ಯಕ್ತಪಡಿಸಿ, ಬೀದರ್ ಜಿಲ್ಲೆಯ ರೈತರಿಗೆ, ಕಾರ್ಮಿಕರಿಗೆ ಅನ್ಯಾಯ ಮಾಡಿದ್ದಾರೆ ಎಂದು ಪ್ರತಿಕ್ರಿಯೆ ವ್ಯಕ್ತ ಪಡಿಸಿದ್ದಾರೆ. ಈ ಕಾರ್ಖಾನೆ ಪುನರಾಂಭಿಸಲು ಈ ಹಿಂದೆ ಜಿಲ್ಲೆಯ ಶಾಸಕರು ಪಕ್ಷ ಭೇಧ ಮರೆತು ರೈತರ ಏಳಿಗೆಗಾಗಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಕಾರ್ಖಾನೆ ಪುನರಾಂಭಿಸಲು ಆಗ್ರಹಿಸಿದರು. ಆದರೆ ಈ ಬಜೆಟ್ ಮಂಡನೆಯಲ್ಲಿ ಕಾರ್ಖಾನೆಗೆ ಯಾವುದೇ ಅನುದಾನ ನೀಡದೆ ಇದುದ್ದಕ್ಕೆ ಬೀದರ್ ಜಿಲ್ಲೆಗೆ ಅನ್ಯಾಯ ಮಾಡಿದಾರೆ ಎಂದು ಅನುರಾಧ ತಪಲಿ ಅ ಸಮಾಧಾನ ವ್ಯಕ್ತ ಪಡಿಸಿದ್ದಾರೆ.

# ಸೈನಿಕ ಶಾಲಾ ಪ್ರವೇಶದಲ್ಲಿ ಜ್ಞಾನ ವೃಕ್ಷ ನವೋದಯ ವಿದ್ಯಾರ್ಥಿಗಳ ಮೇಲುಗೈ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್




ಗುರುಮಠಕಲ್: ಪಟ್ಟಣದ ಜ್ಞಾನ ವೃಕ್ಷ ನವೋದಯ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಅಖಿಲ ಭಾರತ ಸೈನಿಕ ಶಾಲಾ ಪ್ರವೇಶ ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಪರೀಕ್ಷೆ ಬರೆದ ಒಟ್ಟು 39 ವಿದ್ಯಾರ್ಥಿಗಳಲ್ಲಿ 34 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಸೈನಿಕ ಶಾಲೆಗೆ ಆಯ್ಕೆಯಾಗಿರುವುದು ತರಬೇತಿ ಕೇಂದ್ರಕ್ಕೆ ಹಾಗೂ ಪಟ್ಟಣಕ್ಕೆ ಹೆಮ್ಮೆಯ ವಿಷಯವಾಗಿದೆ.

2026ನೇ ಸಾಲಿನ ಅಖಿಲ ಭಾರತ ಸೈನಿಕ ಶಾಲಾ ಪ್ರವೇಶ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿ ಸೈನಿಕ ಶಾಲೆಗೆ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಪಾಲಕರು ಹಾಗೂ ಪೋಷಕರು ಸಂತೋಷ ವ್ಯಕ್ತಪಡಿಸಿದ್ದಾರೆ.

ಗುರುಮಠಕಲ್ ಪಟ್ಟಣದ ವಿದ್ಯಾರ್ಥಿ ಇಂದ್ರಕಿರಣ್ ರೆಡ್ಡಿ ಸಂಜೀವ್ ರೆಡ್ಡಿ ರಾಜ್ಯ ಮಟ್ಟದಲ್ಲಿ 9ನೇ ಸ್ಥಾನ ಪಡೆದು ವಿಶೇಷ ಸಾಧನೆ ಮಾಡಿದ್ದಾರೆ. ಇದೇ ತರಬೇತಿ ಕೇಂದ್ರದ ಮತ್ತೊಬ್ಬ ವಿದ್ಯಾರ್ಥಿನಿ ಮನುಶ್ರೀ ಮಲ್ಲಪ್ಪ ಕೇಶ್ವರ್ ಸೈನಿಕ ಶಾಲೆಗೆ ರಾಜ್ಯ ಮಟ್ಟದಲ್ಲಿ 21ನೇಯ ಸ್ಥಾನ ಪಡೆದು ಆಯ್ಕೆಯಾಗಿದ್ದಾರೆ, ಇದರ ಜೊತೆಗೆ ಇನ್ನೂ ಹಲವಾರು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ ಎಂದು ಸಂಸ್ಥೆಯ ಮುಖ್ಯಸ್ಥರಾದ ರಮೇಶ್ ಅನಸೂರ್ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಕುಟುಂಬದವರು ಹಾಗೂ ತರಬೇತಿ ಕೇಂದ್ರದ ಶಿಕ್ಷಕರು ಹರ್ಷ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳ ಪರಿಶ್ರಮ ಮತ್ತು ತರಬೇತಿ ಕೇಂದ್ರದ ಸಮರ್ಪಕ ಮಾರ್ಗದರ್ಶನದಿಂದ ಈ ಯಶಸ್ಸು ಸಾಧ್ಯವಾಗಿದೆ ಎಂದು ಪಾಲಕರು ಅಭಿಪ್ರಾಯಪಟ್ಟಿದ್ದಾರೆ.

ಈ ಸಂದರ್ಭದಲ್ಲಿ ಜ್ಞಾನ ವೃಕ್ಷ ನವೋದಯ ತರಬೇತಿ ಕೇಂದ್ರದ ಸಿಬ್ಬಂದಿಗಳು ವಿದ್ಯಾರ್ಥಿಗಳನ್ನು ಅಭಿನಂದಿಸಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಧನೆಗಳನ್ನು ಮಾಡಲು ಶುಭ ಹಾರೈಸಿದರು.



ಗುರುಮಿಠಕಲ್ ತಾಲೂಕಿನ ಜೈಗ್ರಾಮ ಗ್ರಾಮದ ಶ್ರೀ ಶ್ರೀ ಶ್ರೀ ಅಂತಪ್ಪ ತಾತನವರ ಜಾತ್ರಾ ಮಹೋತ್ಸವ ಸಮಾರಂಭಕ್ಕೆ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷರಾದ ಬಸರೆಡ್ಡಿ ಅನಪುರ ರವರಿಗೆ ಮಾಜಿ ಪಿ.ಎಲ್.ಡಿ ಅಧ್ಯಕ್ಷ ಸುದರ್ಶನ ಪಾಟೀಲ್ ಜೈಗ್ರಾಮ ರವರು ಮತ್ತು ಗ್ರಾಮಸ್ಥರು ಸೇರಿ ಸನ್ಮಾನಿಸಿ ಗೌರವಿಸಿದರು.

### ಕುರಿ ಲೆಕ್ಕಾ ಹಾಕಲು ಬರಲ್ಲ ಎಂದವರಿಗೆ

# 17.ನೇ ದಾಖಲೆ ಬಜೆಟ್ ಮಂಡಿಸಿ ವಿರೋಧಿಗಳಿಗೆ ಪ್ರತಿಯುತ್ತರ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿರುವ ಈ ಬಾರಿಯ 17.ನೇ ಬಜೆಟ್ ಜನಪರ ಮತ್ತು ಅಭಿವೃದ್ಧಿಗೆ ಅತ್ಯಂತ ಪೂರಕವಾದ ಬಜೆಟ್ ಇದಾಗಿದೆ ಎಂದು ಕುರುಬ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ ಹೇಳಿದರು. ಈ ಕುರಿತು ಪತ್ರಿಕ ಹೇಳಿಕೆ ನೀಡಿರುವ ಅವರು ರಾಜ್ಯದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಬಜೆಟ್ ಮಂಡನೆ ಮಾಡಿದ್ದು. ಈ ಹಿಂದೆ ಸಿದ್ದರಾಮಯ್ಯನವರು ಹಣಕಾಸು ಸಚಿವರಾಗಿದ್ದ ಸಂದರ್ಭದಲ್ಲಿ ಕುರಿಗಳೇ ಲೆಕ್ಕ ಹಾಕಲು ಬರುವುದಿಲ್ಲ ಇವರೇನು ಬಜೆಟ್ ಮಂಡಿಸುತ್ತಾರೆ ಎಂದು ಕೆಲವರು ವ್ಯಂಗ್ಯವಾಡಿದ್ದರು ಅವರಿಗೆ ಪ್ರತಿಯುತ್ತರವಾಗಿ 17.ನೇ ಬಜೆಟ್ ಮಂಡನೆ ಮಾಡುವ ಮೂಲಕ ದಾಖಲೆ ನಿರ್ಮಿಸಿದ್ದಾರೆ ಎಂದರು. ಈ ಬಾರಿಯೂ ಕಲ್ಯಾಣ ಕರ್ನಾಟಕಕ್ಕೆ ಉತ್ತಮವಾದ ಕೊಡುಗೆ ನೀಡಿದ್ದಾರೆ. ಕಲಬುರ್ಗಿಯಲ್ಲಿ ಸಿಲ್ಕ್ ಪಾರ್ಕ್, ಕೊಪ್ಪಳದಲ್ಲಿ ಕ್ಯಾನ್ಸರ್ ಆಸ್ಪತ್ರೆ, ಯಾದಗಿರಿ ನಗರದಲ್ಲಿ 100 ಕೋಟಿ ವೆಚ್ಚದಲ್ಲಿ ಸೂಪರ್ ಮಲ್ಟಿ ಸ್ಪೆಷಲಿಟಿ ಆಸ್ಪತ್ರೆ, ಕಕ್ಕೇರದಲ್ಲಿ ನೂತನ ಪೊಲೀಸ್ ಠಾಣೆ, ಪದವಿ ಮಹಾವಿದ್ಯಾಲಯ ನಿರ್ಮಾಣ ಜೊತೆಗೆ ಶಿಕ್ಷಣ, ಆರೋಗ್ಯ, ಕೃಷಿ, ಹೈನುಗಾರಿಕೆ, ಉದ್ಯೋಗ ಹೈನುಗಾರಿಕೆ ಸಹಕಾರಿ ಕೃಷಿ ಮೀನುಗಾರಿಕೆ ತೆ–ೂಟಗಾರಿಕೆ, ಕೃಷಿ ಕ್ಷೇತ್ರಕ್ಕೂ ಕಾರ್ಮಿಕರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನಿಡಿದ್ದಾರೆ ಸರ್ವ ಸಮುದಾಯಗಳ ಅಭಿವೃದ್ಧಿ ಪರ ಬಜೆಟ್ ಇದಾಗಿದೆ ರೈತರ ಕಲ್ಯಾಣಕ್ಕಾಗಿ ಸಸ್ಯ ಸಂಜೀವಿನಿ, ಕೃಷಿ ವಿಸ್ತಾರ, 38, ಸಾವಿರ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ವಿತರಣೆ, ಇನ್ನಿತರ 10.ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು ಇದೊಂದು ಅತ್ಯುತ್ತಮ ಬಜೆಟ್ ಆಗಿದೆ ಹಲವು ಗ್ಯಾರಂಟಿ ಯೋಜನೆಗಳ ಮಧ್ಯೆಯು ಉತ್ತಮವಾದ ಬಜೆಟ್ ಮಂಡನೆ ಮಾಡುವ ಮೂಲಕ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಾಖಲೆ ನಿರ್ಮಿಸಿದ್ದಾರೆ. ಇದೊಂದು ಐತಿಹಾಸಿಕ ಬಜೆಟ್ ಎಂದು ಕುರುಬ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಮಧ್ಯಮ ವರ್ಗ, ರೈತರಿಗೆ ನೆರವಾಗದ ಬಜೆಟ್: ಮಹೇಶ ಸ್ಥಾವರಮಠ ಆರೋಪ

• ಮಲ್ಲಮ್ಮ ನುಡಿ ಹುಣಸಗಿ



ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಮಂಡಿಸಿದ 17ನೇ ರಾಜ್ಯ ಬಜೆಟ್ ಕುರಿತು ಬಿಜೆಪಿ ಯುವ ಮುಖಂಡ ಮಹೇಶ ಸ್ಥಾವರಮಠ ತೀವ್ರ ಟೀಕೆ ವ್ಯಕ್ತಪಡಿಸಿದ್ದಾರೆ.

ಈ ಬಜೆಟ್ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾಗದೆ, ಸಾಲದ ಹೊರೆ ಹೆಚ್ಚಿಸುವ ಬಜೆಟ್ ಆಗಿದೆ ಎಂದು ಅವರು ಆರೋಪಿಸಿದರು.

ಇಂದು ಪತ್ರಿಕೆಯೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಈಗಾಗಲೇ ಸುಮಾರು 8.24 ಲಕ್ಷ ಕೋಟಿ ರೂಪಾಯಿ ಸಾಲದಲ್ಲಿ ಮುಳುಗಿದ್ದು, ಹೊಸ ಬಜೆಟ್ ಮೂಲಕ ಮತ್ತಷ್ಟು ಸಾಲದ ಹೊರೆ ರಾಜ್ಯದ ಜನರ ಮೇಲೇ ಹಾಕಲಾಗಿದೆ ಎಂದು ಹೇಳಿದರು.

ಸರ್ಕಾರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಆದ್ಯತೆ ನೀಡುವ ಬದಲು ಸಾಲದ ಅವಲಂಬನೆ ಹೆಚ್ಚಿಸುತ್ತಿದೆ ಎಂದು ಅವರು ಟೀಕಿಸಿದರು.

ವಿಶೇಷವಾಗಿ ಮಧ್ಯಮ ವರ್ಗದ ಜನರಿಗೆ ಈ ಬಜೆಟ್ ಯಾವುದೇ ರೀತಿಯ ನೆರವು ನೀಡುವಂತಿಲ್ಲ.

ದಿನೇ ದಿನೇ ಹೆಚ್ಚುತ್ತಿರುವ ಬೆಲೆ ಏರಿಕೆ, ತೆರಿಗೆ ಭಾರ ಮತ್ತು ದೈನಂದಿನ

ಜೀವನದ ಸಮಸ್ಯೆಗಳನ್ನು ಕಡಿಮೆ ಮಾಡುವಂತಹ ಕ್ರಮಗಳು ಬಜೆಟ್‌ನಲ್ಲಿ ಕಾಣಿಸುತ್ತಿಲ್ಲ. ಇದರಿಂದ ಮಧ್ಯಮ ವರ್ಗದ ಜನರು ಇನ್ನಷ್ಟು ಸಂಕಷ್ಟಕ್ಕೆ ಒಳಗಾಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇನ್ನು ರೈತರ ಸಮಸ್ಯೆಗಳಿಗೂ ಈ ಬಜೆಟ್‌ನಲ್ಲಿ ಸಮರ್ಪಕ ಪರಿಹಾರ ಕಾಣಿಸುತ್ತಿಲ್ಲ. ರೈತರ ಸಾಲಮನ್ನಾ,

ಕೃಷಿಗೆ ಅಗತ್ಯವಾದ ಅನುದಾನ ಮತ್ತು ಮೂಲಭೂತ ಸೌಲಭ್ಯಗಳ ಬಗ್ಗೆ ಸ್ಪಷ್ಟವಾದ ಯೋಜನೆಗಳ ಕೊರತೆ ಇದೆ ಎಂದು ಅವರು ಹೇಳಿದರು.

ಅದರ ಜೊತೆಗೆ ಸಂಪ್ರದಾಯದಂತೆ ಈ ಬಾರಿಯೂ ಉತ್ತರ ಕರ್ನಾಟಕ ಭಾಗವನ್ನು ನಿರ್ಲಕ್ಷ್ಯ ಮಾಡಲಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ವಿಶೇಷವಾಗಿ ಯಾದಗಿರಿ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಪ್ರಮುಖ ಯೋಜನೆಗಳು ಅಥವಾ ಘೋಷಣೆಗಳು ಬಜೆಟ್‌ನಲ್ಲಿ ಕಾಣಿಸದಿರುವುದು ಬೇಸರದ ಸಂಗತಿ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಹಾಗೂ ವಿಶೇಷ ಯೋಜನೆಗಳನ್ನು ನೀಡಬೇಕಾಗಿದ್ದರೂ ಸರ್ಕಾರ ಅದನ್ನು ಪರಿಗಣಿಸಿಲ್ಲ. ಇದರ ಪರಿಣಾಮವಾಗಿ ಈ ಭಾಗದ ಜನರಿಗೆ ಮತ್ತೊಮ್ಮೆ ಅನ್ಯಾಯವಾಗಿದೆ ಎಂದು ಮಹೇಶ ಸ್ಥಾವರಮಠ ಆರೋಪಿಸಿದರು.


ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರೈತರು, ಕಾರ್ಮಿಕರು ಹಾಗೂ ಮಧ್ಯಮ ವರ್ಗದ ಜನರಿಗೆ ಸಹಾಯವಾಗುವಂತಹ ಯೋಜನೆಗಳನ್ನು ಜಾರಿಗೆ ತರಬೇಕೆಂದು ಅವರು ಸರ್ಕಾರವನ್ನು ಆಗ್ರಹಿಸಿದರು.

# ಅತಿಥಿ ಶಿಕ್ಷಕರ ವಿವಿಧ ಬೇಡಿಕೆ ಈಡೇರಿಕೆಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘದ ವತಿಯಿಂದ ಯಾದಗಿರಿ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೂ ಹಾಗೂ ಶಿಕ್ಷಣ ಸಚಿವರಿಗೆ ಮತ್ತು ಕೆಕೆಆರ್‌ಡಿಬಿ ಡಾ. ಅಜಯ್ ಸಿಂಗ ರವರಿಗೆ ಮನವಿ ಪತ್ರ ಸಲ್ಲಿಸಿದರು. ಶಾಲೆಗಳಲ್ಲಿ ಅತಿ ಕಡಿಮೆ ವೇತನದಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಶಿಕ್ಷಕರು ಕಳೆದ ಹಲವು ವರ್ಷಗಳಿಂದ ಶಾಲೆಗಳಲ್ಲಿನ ಶಿಕ್ಷಕರ ಕೊರತೆಯನ್ನು ಸರಿದೂಗಿಸುತಿದ್ದೇವೆ ಹಾಗೂ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದೇವೆ ಆದರೆ ಅತಿಥಿ ಶಿಕ್ಷಕರಾಗಿ ಕೆಲಸ ಮಾಡುವ ಸಂದರ್ಭದಲ್ಲಿ ನಮಗೆ ಹಲವು ಸಮಸ್ಯೆಗಳು ಎದುರಾಗುತ್ತಿದಾವೆ ನಮ್ಮ ಸಂಘಟನೆ ವತಿಯಿಂದ ಅನೇಕ ಬಾರಿ ರಾಜ್ಯಾದ್ಯಂತ ಹಲವಾರು ಹೋರಾಟ ಮಾಡಿದರೂ ಕೂಡ ಅನೇಕ ಬಾರಿ ತಮಗೆ ಮನವಿ ಮಾಡಿದರು ಕೂಡ ನಮ್ಮ ಬೇಡಿಕೆಗಳಿಗೆ ಸ್ಪಂದನೆ ಸಿಗುತ್ತಿಲ್ಲ ಈ ಬಜೆಟ್ ಅಧಿವೇಶನದಲ್ಲಿ ಚರ್ಚಿಸಿ ಅತಿಥಿ ಶಿಕ್ಷಕರ ಬೇಡಿಕೆ ಈಡೇರಿಸಿ ಮತ್ತು 2025 ನವೆಂಬರ್ ನಿಂದ 2026 ಫೆಬ್ರವರಿ ನಾಲ್ಕು ತಿಂಗಳವರೆಗೆ ವೇತನ ನೀಡಿಲ್ಲ ವೇತನವಿರಲ್ಲದೆ ತಾವು ಕೊಡುವ 12000 ವೇತನ ಬೆಲೆ ಏರಿಕೆ ದುನಿಯಾದಲ್ಲಿ ಅತಿಥಿ ಶಿಕ್ಷಕರ ದಿನನಿತ್ಯ ಜೀವನ ನಿರ್ವಹಣೆಗೆ ತುಂಬಾ ಕಷ್ಟಕರವಾಗಿದೆ ದಯವಿಟ್ಟು ವೇತನ ಬಿಡುಗಡೆಗೋಳಿಸಿ ಹಾಗೂ ಕೆಳಗಿನ ನಮ್ಮ ಬೇಡಿಕೆಗಳನ್ನು ಪರಿಗಣಿಸಿ ಈಡೇರಿಸಬೇಕೆಂದು ಆಗ್ರಹಿಸಿದರು.

ಪ್ರಮುಖ ಬೇಡಿಕೆಗಳು ಪ್ರತಿ ತಿಂಗಳು 25000 ವರೆಗೆ ಗೌರವಧನವನ್ನು ನೀಡಬೇಕು, 12 ತಿಂಗಳು ಪೂರ್ಣ ಪ್ರಮಾಣದ



ಗೌರವಧನವನ್ನು ನೀಡಬೇಕು, ರಾಜ್ಯ ಸರ್ಕಾರ ಅನುಸರಿಸುವ ಮೆರಿಟ್ ಪದ್ಧತಿ ಕೈಬಿಡಬೇಕು, ಪ್ರತಿ ವರ್ಷ ಶೇ 5 ಕೃಪಾಕಗಳನ್ನು ನೀಡಬೇಕು, ಅತಿಥಿ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸಬೇಕು, ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅತಿಥಿ ಶಿಕ್ಷಕರಿಗೆ ಸರ್ಕಾರದ ನೇಮಕಾತಿಯಲ್ಲಿ ಆದ್ಯತೆ ನೀಡಬೇಕು, ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಶಾಲೆಗಳಲ್ಲಿ ಒದಗಿಸಬೇಕು, ಅತಿಥಿ ಶಿಕ್ಷಕಿಯರಿಗೆ ಹೆರಿಗೆ ರಜೆ ಹಾಗೂ ಋತುಚಕ್ರದ ವೇಳೆ ಪ್ರತಿ ತಿಂಗಳ ರಜೆ ಅನ್ವಯಿಸಬೇಕು, ಕೆಕೆಆರ್‌ಡಿಪಿಯಲ್ಲಿ ಕಾರ್ಯ ನಿರ್ವಹಿಸುವ ಎಲ್ ಕೆ ಜಿ ಮತ್ತು ಯು ಕೆ ಜಿ ಅತಿಥಿ ಶಿಕ್ಷಕರಿಗೆ ವೇತನ ತಾರತಮ್ಯ ಸರಿದೂಗಿಸಬೇಕು ಆದ್ದರಿಂದ ಮೇಲ್ಕಂಡ ಸಮಸ್ಯೆಗಳು ಹಾಗೂ ಬೇಡಿಕೆಗಳನ್ನು ಪರಿಗಣಿಸಿ, ಅತಿಥಿ ಶಿಕ್ಷಕರಿಗೆ ನ್ಯಾಯ ಒದಗಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ತಿಪ್ಪಣ್ಣ ಹತ್ತಿಗೋಡುರು, ವಡಗೇರಾ ತಾಲೂಕ ಅಧ್ಯಕ್ಷ ವೀರೇಶ್ ಕೊಂಕಲ್, ಶಹಾಪುರ ತಾಲೂಕ ಅಧ್ಯಕ್ಷ ಮಲ್ಲಿಕಾರ್ಜುನ ರಸ್ತಾಪುರ, ತಾಯಪ್ಪ ಲಿಂಗೇರಿ, ಮಲ್ಲಿಕಾರ್ಜುನ್ ಹಳಿಸಗರ, ಹುಸೇನಸಾಬ ರೊಟ್ನಡಗಿ, ಶರಣಮ್ಮ ನಾಯ್ಕಲ್, ಸುರೇಶ್ ಬಿಳಾರ, ಪ್ರಭು ಬೆಂಡೆಬೆಬಳಿ, ಶಿಕ್ಷಕಿಯರಾದ ಸರಸ್ವತಿ ಹಳಿಸಗರ, ಮಧುಶ್ರೀ, ಅಂಜುಳಾದೇವಿ, ನಿರ್ಮಲಾ ಬಿಳಾರ, ಮುಂತಾದವರು ಉಪಸ್ಥಿತರಿದ್ದರು.

# ಘೋಷಣೆಗೆ ಸೀಮಿತವಾದ ಯಾದಗಿರಿಆಲಮಟ್ಟಿ ರೈಲ್ವೆ

• ಮಲ್ಲಮ್ಮ ನುಡಿ ಹುಣಸಗಿ



ದಶಕಗಳ ಕನಸಾಗಿ ಉಳಿದಿರುವ ಯಾದಗಿರಿಆಲಮಟ್ಟಿ ರೈಲ್ವೆ ಯೋಜನೆ ಇನ್ನೂ ಘೋಷಣೆಯಲ್ಲೇ ಸೀಮಿತವಾಗಿರುವುದು ಈ ಭಾಗದ ಜನರಲ್ಲಿ ಆತಂಕ ಮೂಡಿಸಿದೆ. ಕಲ್ಯಾಣ ಕರ್ನಾಟಕ ಹಾಗೂ ಮುಂಬೈ ಕರ್ನಾಟಕ ಭಾಗಗಳನ್ನು ಸಂಪರ್ಕಿಸುವ ಪ್ರಮುಖ ಯೋಜನೆಯಾಗಿದ್ದರೂ ಇದುವರೆಗೆ ಕಾರ್ಯರೂಪಕ್ಕೆ ಬಾರದಿರುವುದು ಜನರ ಅಸಮಾಧಾನಕ್ಕೆ ಕಾರಣವಾಗಿದೆ.

ಆಲಮಟ್ಟಿಯಾದಗಿರಿ ರೈಲು ಮಾರ್ಗ ಈ ಭಾಗದ ಅಭಿವೃದ್ಧಿಗೆ ಮಹತ್ವದ ಕೊಂಡಿಯಾಗಿದ್ದು, ಕಲ್ಯಾಣ ಕರ್ನಾಟಕ ಹಾಗೂ ಮುಂಬೈ ಕರ್ನಾಟಕ ಪ್ರದೇಶಗಳನ್ನು ಜೋಡಿಸುವ ಪ್ರಮುಖ ಯೋಜನೆಯಾಗಿದೆ. ಈ ರೈಲು ಮಾರ್ಗ ನಿರ್ಮಾಣವಾದರೆ ಈ ಭಾಗದ ಜನರಿಗೆ ದೂರದ ಬೆಂಗಳೂರು, ಹೈದ್ರಾಬಾದ್ ಹಾಗೂ ಮುಂಬೈ ನಗರಗಳಿಗೆ ಸಂಚಾರ ಮಾಡಲು ಹೆಚ್ಚಿನ ಅನುಕೂಲವಾಗಲಿದೆ.

ಈ ಯೋಜನೆಗೆ ಮೊದಲ ಹಂತದ ಸರ್ವೇಗೆ ಆದೇಶ ಹಾಗೂ ಅನುಮತಿ ದೊರೆತಿದ್ದರೂ, ಅಂತಿಮವಾಗಿ ಯೋಜನೆ ನಿಜವಾಗಿಯೂ ಕಾರ್ಯರೂಪಕ್ಕೆ ಬರುತ್ತದೆ–ಯೇ ಎಂಬುದು ಇನ್ನೂ ದೊಡ್ಡ ಪ್ರಶ್ನೆಯಾಗಿಯೇ ಉಳಿದಿದೆ. ಈ ಹಿನ್ನೆಲೆಯಲ್ಲಿ ಈ ಭಾಗದ ಪ್ರಗತಿಪರ ಸಂಘಟನೆಗಳು, ಅಧಿಕಾರಿಗಳು, ರಾಜಕಾರಣಿಗಳು ಹಾಗೂ ಜನಪ್ರತಿನಿಧಿಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿ ಲೋಕಸಭಾ ಸದಸ್ಯರ ಮೂಲಕ ಕೇಂದ್ರ ರೈಲ್ವೆ ಸಚಿವರ ಗಮನಕ್ಕೆ ಈ ವಿಷಯವನ್ನು ಮತ್ತೊಮ್ಮೆ ತರುವ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತವಾಗಿದೆ.

ಈ ಕುರಿತು ಮಾತನಾಡಿದ ಯಾದಗಿರಿಆಲಮಟ್ಟಿ ರೈಲು ಹೋರಾಟ ಸಮಿತಿ, ಹುಣಸಗಿ ಪ್ರಧಾನ ಕಾರ್ಯದರ್ಶಿ ಚನ್ನಕುಮಾರ ಬ್ಯಾ–ಕೋಡ, ಆಲಮಟಿಯಾದಗಿರಿ ರೈಲು ಮಾರ್ಗದ ಅಂತಿಮ ಸ್ಥಳ ಸಮೀಕ್ಷೆಗೆ (ಈಐಖ) ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತು ಹತ್ತು ತಿಂಗಳಿಗೂ ಹೆಚ್ಚು ಕಾಲ ಕಳೆದಿದ್ದರೂ ಸಮೀಕ್ಷೆ ಇನ್ನೂ ಪ್ರಾರಂಭವಾಗಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಕ್ಷಣ ಗಮನಹರಿಸಿ ಸಮೀಕ್ಷೆ ಪ್ರಾರಂಭಿಸಿ ಯೋಜನೆಗೆ ವೇಗ ನೀಡಬೇಕು. ಈ ಕುರಿತು ಕೇಂದ್ರ ಹಾಗೂ ರಾಜ್ಯ ರೈಲ್ವೆ ಸಚಿವರ ಗಮನಕ್ಕೆ ಮತ್ತೊಮ್ಮೆ ತರಲು ಪ್ರಯತ್ನ ಮಾಡಲಾಗುವುದು ಎಂದು ಅವರು ಹೇಳಿದರು.

ಸ್ವಾತಂತ್ರ್ಯಕ್ಕೆ 75 ವರ್ಷಗಳಾದರೂ ಈ ಭಾಗದ ರೈಲು ಯೋಜನೆ ಇನ್ನೂ ಕನಸಾಗಿಯೇ ಉಳಿದಿರುವುದು ವಿಷಾದಕರ ಸಂಗತಿ. ಆದ್ದರಿಂದ ಸರ್ಕಾರಗಳು ಶೀಘ್ರ ಕ್ರಮ ಕೈಗೊಂಡು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು. ಯೋಜನೆ ಜಾರಿಯಾಗುವವರೆಗೆ ಹೋರಾಟ ನಿರಂತರವಾಗಿ ಮುಂದುವರಿಸಲಾಗುವುದು ಎಂದು ಚನ್ನಕುಮಾರ ಬ್ಯಾಕೋಡ ತಿಳಿಸಿದ್ದಾರೆ.

# ಅವಿಷ್ಕಾರ 2026 ಉತ್ಸವಕ್ಕೆ ಚಾಲನೆ




• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಪಟ್ಟಣದ ಫ್ರಂಟ್ ಲೈನ್ ಶಿಕ್ಷಣ ಸಂಸ್ಥೆಯ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ಇಂದು ಬಸ್ ನಿಲ್ದಾಣದ ಮುಂಭಾಗದಲ್ಲಿ "ಅವಿಷ್ಕಾರ 2026" ಉತ್ಸವಕ್ಕೆ ಭರ್ಜರಿ ಚಾಲನೆ ನೀಡಲಾಯಿತು.

ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ರವೀಂದ್ರರೆಡ್ಡಿ ಮಾಲಿ ಪಾಟೀಲ್ ಹಾಗೂ ಅಖಿಲೇಶ್ ರೆಡ್ಡಿ ಕಾರ್ಯಕ್ರಮವನ್ನು ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು.

ಕಾರ್ಯಕ್ರಮದ ಅಂಗವಾಗಿ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಹಾಗೂ ಮನೋರಂಜನಾ ಕಾರ್ಯಕ್ರಮಗಳು ನಡೆಯಿತು.

ವಿದ್ಯಾರ್ಥಿಗಳ ನೃತ್ಯ, ನಾಟಕ ಹಾಗೂ ಪ್ರತಿಭಾ ಪ್ರದರ್ಶನಗಳು ನೆರೆದಿದ್ದ ಸಾರ್ವಜನಿಕರ ಮನಸೆಳೆಯುವಂತೆ ಮಾಡಿತು. ಕಾರ್ಯಕ್ರಮವನ್ನು ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರು ಹಾಗೂ ಸಾರ್ವಜನಿಕರು ಆಗಮಿಸಿದ್ದರು.

ಈ ಸಂದರ್ಭದಲ್ಲಿ ಸಂಸ್ಥೆಯ ಶಿಕ್ಷಕರು, ಸಿಬ್ಬಂದಿ ಹಾಗೂ ಪೋಷಕರು ಉಪಸ್ಥಿತರಿದ್ದರು.

# ವಚನ ವಿಶ್ವವಿದ್ಯಾಲಯಕ್ಕೆ ಜಮೀನು ಮಂಜೂರು

• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ



2026–27ನೇ ಸಾಲಿನ ದಾಖಲೆ ಕರ್ನಾಟಕ ಬಜೆಟ್ ಮಂಡನೆ ಮಾಡುತ್ತಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯ ರವರಿಗೆ ವಿಶೇಷವಾಗಿ ಬಸವಕಲ್ಯಾಣದಲ್ಲಿ ವಚನ ವಿಶ್ವವಿದ್ಯಾಲಯ ನಿರ್ಮಾಣಕ್ಕೆ ಬಜೆಟನಲ್ಲಿ 25 ಎಕರೆ ಜಮೀನು ಮಂಜೂರು ಮಾಡಿರುವ ನಮ್ಮ ಕಾಂಗ್ರೆಸ್ ಸರ್ಕಾರಕ್ಕೆ ತುಂಬು ಹೃದಯದ ಧನ್ಯವಾದಗಳು ಸಲ್ಲಿಸುತ್ತೇನೆ.

ಸಮಾಜದ ಎಲ್ಲಾ ವರ್ಗಗಳ ಆಶಯಗಳನ್ನು ಪೂರೈಸುವಂತೆ ರೂಪುಗೊಂಡಿರುವ ಈ ಬಜೆಟ್ ರೈತರು, ಮಹಿಳೆಯರು, ಯುವಕರು, ಕಾರ್ಮಿಕರು, ಮಧ್ಯಮ ವರ್ಗ ಸೇರಿದಂತೆ ಪ್ರತಿಯೊಬ್ಬರ ಬದುಕಿಗೆ ಆಶಾವಾದವನ್ನು ಮೂಡಿಸುತ್ತದೆ

ರಾಜ್ಯದ ಆರ್ಥಿಕ ಬೆಳವಣಿಗೆಯ ಜೊತೆಗೆ ಸಾಮಾಜಿಕ ನ್ಯಾಯ, ಕಲ್ಯಾಣ ಮತ್ತು ಅಭಿವೃದ್ಧಿಯನ್ನು ಸಮತೋಲನಗೊಳಿಸುವ ಈ ಜನಪರ ಬಜೆಟ್ ಕರ್ನಾಟಕದ ಭವಿಷ್ಯವನ್ನು ಇನ್ನಷ್ಟು ಬಲಪಡಿಸುವ ವಿಶ್ವಾಸ ನೀಡುತ್ತದೆ.

ಈ ಮಹತ್ವದ ಸಾಧನೆಗೆ ನಮ್ಮ ರಾಜ್ಯ ಸರ್ಕಾರಕ್ಕೆ ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ ಯವರು ಅಭಿನಂದನೆಗಳು ತಿಳಿಸಿದ್ದಾರೆ.

# ಜನಪರ ಜೀವಪರ ಬಜೆಟ್

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ ರಾಜ್ಯ ಸರ್ಕಾರದ ಮಹತ್ವದ ಬಜೆಟ್ ಜನಪರ ಮತ್ತು ಜೀವಪರವಿದ್ದು, ಕಾಂಗ್ರೆಸ್ ಸರ್ಕಾರದ ನಡೆ ಜನರ ಕಡೆ ಎಂಬ ನಿಟ್ಟಿನಲ್ಲಿ ಬಜೆಟ್ ಮಂಡಿಸಿದ್ದಾರೆ.

ವಿಶೇಷವಾಗಿ ಸಮಸ್ತ ಯಾದಗಿರಿ ಜಿಲ್ಲೆ ಜನರ ಆರೋಗ್ಯ ದೃಷ್ಟಿಯಿಂದ ಯಿಮ್ಸ್ ಆವರಣದಲ್ಲಿ 200 ಹಾಸಿಗೆಯ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆ ಮಂಜೂರು ಮಾಡಿದ್ದು ಐತಿಹಾಸಿಕವಾಗಿದೆ. ಇನ್ನೊಂದು ಪ್ರಮುಖ ಬೇಡಿಕೆಯಾಗಿದ್ದ ಯಾದಗಿರಿ ನಗರಕ್ಕೆ ಯುಡಿಜಿ ಕಾಮಗಾರಿ ಮಂಜೂರು ಮಾಡಿದ್ದು ಸಹ ಈ ಸರ್ಕಾರ ಗಿರಿಜಿಲ್ಲೆಗೆ ಕೊಟ್ಟ ದೊಡ್ಡ ಕಾಣಿಕೆಯಾಗಿದೆ. ಇದಕ್ಕೆ ನಮ್ಮ ಜಿಲ್ಲೆಯ ಸಚಿವ, ಶಾಸಕರ ಪ್ರಯತ್ನವೂ ಇದ್ದು, ಅವರಿಗೂ, ಸಿಎಂ ಸಿದ್ದರಾಮಯ್ಯ ಅವರಿಗೆ ಅಭಿನಂದನೆಗಳು ಸಲ್ಲಿಸಿ ಹರ್ಷ ವ್ಯಕ್ತಪಡಿಸಿದರು.

• ಕೃಷ್ಣಾ ದಾಸನಕೇರಿ ಯುವ ಮುಖಂಡರು ಕಾಂಗ್ರೆಸ್ ಪಕ್ಷ ಯಾದಗಿರಿ.

# ಸಾಮಾನ್ಯ ಜನರ ಕಷ್ಟಕ್ಕೆ ಸ್ಪಂದಿಸದ ಬಜೆಟ್

• ಮಲ್ಲಮ್ಮ ನುಡಿ, ಹುಣಸಗಿ



ರಾಜ್ಯ ಸರ್ಕಾರ ಮಂಡಿಸಿದ ಬಜೆಟ್ ರೈತರು, ಕಾರ್ಮಿಕರು, ಮಧ್ಯಮ ವರ್ಗದ ಜನರು ಹಾಗೂ ಸಾಮಾನ್ಯರ ಹಿತಾಸಕ್ತಿಗೆ ಪೂರಕವಾಗಿಲ್ಲ ಎಂದು ಬಿಜೆಪಿ ಮುಖಂಡ ವಿರೇಶ ಸಾಹುಕಾರ ಚಿಂಚೋಳಿ ಹೇಳಿದ್ದಾರೆ.

ಈ ಬಜೆಟ್‌ನಲ್ಲಿ ರೈತರ ಸಾಲಮನ್ನಾ ಕುರಿತು ಯಾವುದೇ ಘೋಷಣೆ ಮಾಡಲಾಗಿಲ್ಲ. ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಾದ ವಿಶೇಷ ಯೋಜನೆಗಳು ಕಾಣಿಸದಿರುವುದು ರೈತ ಸಮುದಾಯದಲ್ಲಿ ನಿರಾಸೆ ಮೂಡಿಸಿದೆ. ಕೈಗಾರಿಕಾ ಹೂಡಿಕೆಗಳನ್ನು ಆಕರ್ಷಿಸಲು ಸರ್ಕಾರದಿಂದ ಯಾವುದೇ ಪ್ರೋತ್ಸಾಹ ಪ್ಯಾಕೇಜ್ ಘೋಷಿಸದಿರುವುದು ಸಹ ಅಭಿವೃದ್ಧಿಗೆ ಅಡ್ಡಿಯಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಗ್ರಾಮೀಣ ಪ್ರದೇಶಗಳ ಮೂಲಭೂತ ಸೌಲಭ್ಯಗಳಾದ ರಸ್ತೆ ಅಭಿವೃದ್ಧಿ ಹಾಗೂ ಕುಡಿಯುವ ನೀರಿನ ಯೋಜನೆಗಳಿಗೆ ಕಡಿಮೆ ಅನುದಾನ ನೀಡಿರುವುದು ಗ್ರಾಮೀಣ ಜನರ ಸಮಸ್ಯೆಗಳನ್ನು ಮತ್ತಷ್ಟು ಹೆಚ್ಚಿಸಲಿದೆ. ಬೆಲೆ ಏರಿಕೆಯನ್ನು ನಿಯಂತ್ರಿಸಲು ಸ್ಪಷ್ಟವಾದ ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಕಟಿಸದಿರುವುದು ಸಾಮಾನ್ಯ ಜನರಿಗೆ ಸಂಕಷ್ಟ ಉಂಟುಮಾಡಲಿದೆ ಎಂದು ಅವರು ಹೇಳಿದರು.

ಕಾಗದದ ಮೇಲೆ ಚೆನ್ನಾಗಿ ಕಾಣುವ ಈ ಬಜೆಟ್ ನೆಲಮಟ್ಟದ ಜನರಿಗೆ ಹೆಚ್ಚಿನ ಪ್ರಯೋಜನ ತರುವುದಿಲ್ಲ. ಸರ್ಕಾರ ಮುಂದಿನ ದಿನಗಳಲ್ಲಿ ರೈತರು, ಕಾರ್ಮಿಕರು ಹಾಗೂ ಮಧ್ಯಮ ವರ್ಗದ ಜನರ ಸಮಸ್ಯೆಗಳನ್ನು ಮನಗಂಡು ಅವರಿಗೆ ಅನುಕೂಲವಾಗುವಂತಹ ಬಜೆಟ್ ರೂಪಿಸಬೇಕು ಎಂದು ವಿರೇಶ ಸಾಹುಕಾರ ಚಿಂಚೋಳಿ ಆಗ್ರಹಿಸಿದರು.

# ಅತಿಥಿ ಶಿಕ್ಷಕರಿಗೆ ಈ ಬಜೆಟ್ ನಿರಾಸೆ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರಾದ ಸಿದ್ದರಾಮಯ್ಯನವರು ಮಂಡಿಸಿದ ಪ್ರಸಕ್ತ ಸಾಲಿನ ಸರ್ಕಾರದ ಬಜೆಟ್ ನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸುಮಾರು 13ವರ್ಷಗಳಿಂದ ಪ್ರಸ್ತುತ 51,000 ಅತಿಥಿ ಶಿಕ್ಷಕರು ಸೇವೆ ಸಲ್ಲಿಸುತ್ತಾ ಕೃಪಾಕ ನೀಡಿಕೆ ಕಾಯಂ ಶಿಕ್ಷಕರ ನೇಮಕಾತಿ ಸಂದರ್ಭದಲ್ಲಿ ಅತಿಥಿ ಶಿಕ್ಷಕರಿಗೆ ಆದ್ಯತೆ ಗೌರವದನ ಹೆಚ್ಚಳ ಸೇವಾ ಪ್ರಮಾಣ ಪತ್ರ ಸೇರಿದಂತೆ ಹಲವಾರು ಬೇಡಿಕೆಗಳ ಈಡೇರಿಕೆ ಬಗ್ಗೆ ನಿರೀಕ್ಷಿಸಲಾಗಿತ್ತು ಆದರೆ ಯಾವ ಬೇಡಿಕೆಗಳನ್ನು ಕೂಡ ಪ್ರಸ್ತಾಪ ಮಾಡದೆ ಇರುವುದು ಅತಿಥಿ ಶಿಕ್ಷಕರ ವರ್ಗಕ್ಕೆ ಈ ಬಜೆಟ್ ನಿರಾಸೆ ತಂದಿದೆ



**ಎಸ್ ರಾಮಪ್ಪ**
**ಅಧ್ಯಕ್ಷರು ಮತ್ತು ಕೋಶಾಧಿಕಾರಿ**
**ಕುರುಗೋಡು ತಾಲೂಕು ಮತ್ತು ಬಳ್ಳಾರಿ ಜಿಲ್ಲಾ ಅತಿಥಿ ಶಿಕ್ಷಕರ ಸಂಘ**

# ಸಂಭ್ರಮದ ಬಂಡೇ ರಂಗನಾಥೇಶ್ವರ ಬ್ಯಾಟಿ ಗಿಡ ಉತ್ಸವ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ತಂಬ್ರಹಳ್ಳಿಯ ಇತಿಹಾಸ ಪ್ರಸಿದ್ಧ ಶ್ರೀ ಬಂಡೆ ರಂಗನಾಥ ಸ್ವಾಮಿ ರಥೋತ್ಸವ ಹಾಗೂ ಜಾತ್ರಾ ಮಹೋತ್ಸವ ನಿಮಿತ್ಯವಾಗಿ ನಡೆದ ಬ್ಯಾಟಿಗಿಡ ಉತ್ಸವ ಬುಧವಾರ ಸಂಭ್ರಮದಿಂದ ಜರುಗಿತು.

ತುಂಗಭದ್ರ ಹಿನ್ನೀರಿನ ದಂಡೆಯ ಮೇಲೆ ನೆಲೆಸಿರುವ ಶ್ರೀ ಬಂಡೆ ರಂಗನಾಥ ಸ್ವಾಮಿ ಹಾಗೂ ಲಕ್ಷ್ಮಿ ದೇವಿಗೆ ಕಳೆದ ಒಂದು ವಾರದಿಂದ ಪೂಜೆ ಹೋಮ ಹವನ ಇತ್ಯಾದಿ ಆಚರಣೆಗಳು ಆರ್ಚಕರಿಂದ ಶಾಸ್ತ್ರೋಕ್ತವಾಗಿ ಜರುಗಿದವು.

ಬಂಡೇ ರಂಗನಾಥೇಶ್ವರ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಯಿತು. ಮೆರವಣಿಗೆ ಮುಖಾಂತರ ಗ್ರಾಮದ ಹೊರವಲಯದ ಹತ್ತಿರದಲ್ಲಿ (ಮುಳ್ಳುಕಂಟಿಗಿಡ )ಬ್ಯಾಟಿ ಗಿಡ ತೆಗೆದುಕೊಂಡು ಬಂದು ಪೂಜಿಸಲಾಯಿತು.

ಬೆಟ್ಟದ ಕೆಳಗಡೆ ಇರುವ. ತೇರು ಬೀದಿಯಲ್ಲಿ ಮೆರವಣಿಗೆ ಮೂಲಕ ತರಲಾಯಿತು. ಬ್ಯಾಟಿ ಗಿಡವನ್ನು ವಾಲ್ಮೀಕಿ ಸಮುದಾಯದ ಯುವಕರು ಹೊತ್ತುಕೊಂಡು ಮೇಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಕುಣಿಯುತ್ತಿದ್ದು ಭಕ್ತರನ್ನು ಭಾವಪರವಶಗೊಳಿಸಿದರು. ನೆರೆದ ಭಕ್ತರು ಬಾಳೆಹಣ್ಣು ಉತ್ತುತ್ತಿ ದವನ ಹೂವು ಅರ್ಪಿಸಿ ಧನ್ಯತೆ ಮೆರೆದರು. ನಂತರ ಬ್ಯಾಟಿ ಗಿಡವನ್ನು ಬೆಟ್ಟದ ಮೇಲೆ ತೆಗೆದುಕೊಂಡು ಹೋದರು.

ವಿವಿಧ ಕಡೆಯಿಂದ. ಜಾತ್ರಾ ಮಹೋತ್ಸವಕ್ಕೆ ಈ ಭಾರಿ ಭೃಹತ್ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು. ಬೆಟ್ಟದ ಮೇಲೆ ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದರು. ತಂಬ್ರಹಳ್ಳಿ ಪೋಲಿಸ್ ಠಾಣೆಯ ಸಿಬ್ಬಂದಿಯವರು ಸೂಕ್ತ ಬಂದೋಬಸ್ತ ವ್ಯವಸ್ಥೆ ಕಲ್ಪಸಿದ್ದರು.

ಈ ಸಂದರ್ಭದಲ್ಲಿ ದೇವಸ್ಥಾನ ಆಡಳಿತಮಂಡಳಿಯ. ಪದಾಧಿಕಾರಿಗಳು ಮುಖಂಡರು ಹಾಗೂ ಸುತ್ತಲಿನ. ಹತ್ತಾರು ಹಳ್ಳಿಗಳ ಭಕ್ತರು ಪಾಲ್ಗೊಂಡಿದ್ದರು.

# ವಿದ್ಯುತ್ ಸಂಪರ್ಕ ಕಲ್ಪಿಸಿ ದೀಪ ಬೆಳಗಿಸಿ ಶಾಸಕರಿಂದ ಚಾಲನೆ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ತಾಲ್ಲೂಕಿನ ಹನಗೋಡು ಹೋಬಳಿ ಹೆಮ್ಮಿಗೆ ಹಾಡಿಯಲ್ಲಿ ಗಿರಿಜನರ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ದೀಪ ಬೆಳಗಿಸಿ ಮೂಲಕ ಶಾಸಕ ಜಿ.ಡಿ. ಹರೀಶ್ ಗೌಡ ಚಾಲನೆ ನೀಡಿ

ನಂತರ ಮಾತನಾಡಿ, ಆದಿವಾಸಿ ಗಿರಿಜನರು ನೆಲೆ ಕಟ್ಟಿಕೊಂಡಿರುವ ಅರಣ್ಯದಂಚಿನ ಹೆಮ್ಮಿಗೆ ಹಾಡಿಗೆ 40 ವರ್ಷಗಳಿಂದ ವಿದ್ಯುತ್ ಸಂಪರ್ಕ ವಿಲ್ಲದೆ ಜೀವನ ನಡೆಸುತ್ತಿದ್ದು, ಭರವಸೆಯಂತೆ ಈಗ ಗ್ರಾಮಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿ ಜನರ ಜೀವನ ಚಟುವಟಿಕೆಗೆ ಬೆಳಕು ನೀಡಲಾಗಿದೆ' ಎಂದು ಹೇಳಿದರು.

ವಿಧಾನಸಭಾ ಚುನಾವಣೆ ಸಮಯದಲ್ಲಿ ಹಾಡಿಯ ಮತದಾರರನ್ನು ಭೇಟಿ ಮಾಡುವ ಸಮಯದಲ್ಲಿ ಮತದಾರರು ಹಾಡಿಗೆ ವಿದ್ಯುತ್ ಕಲ್ಪಿಸಬೇಕು ಎಂಬ ಬೇಡಿಕೆಗೆ ಸ್ಪಂದಿಸುವ ಭರವಸೆ ನೀಡಿದೆ.

3 ವರ್ಷಗಳ ಹಿಂದೆ ಸೋಲಾರ್ ದೀಪ ಇದ್ದರೂ ಸಮರ್ಪಕವಾ- ಗಿರಲಿಲ್ಲ ನೀಡಿದ್ದ ಭರವಸೆ ಈಗ ಈಡೇರಿಸಿದಂತಾ-ಗಿದೆ ಎಂದರು.

ಕ್ಷೇತ್ರದಲ್ಲಿ ಹಲವು ಜ್ವಲಂತ ಸಮಸ್ಯೆಗಳಿದ್ದು, ಅವುಗಳಿಗೆ ಸ್ಪಂದಿಸುವ ಇಚ್ಛಾಶಕ್ತಿ ಇದ್ದರೂ ಸರ್ಕಾರ ವಿರೋಧ ಪಕ್ಷದ ಶಾಸಕರ ಕ್ಷೇತ್ರಕ್ಕೆ ಅನುದಾನ ನೀಡದೆ ಅಭಿವೃದ್ಧಿಗೆ ಅಡ್ಡವಾಗಿದೆ. ಈಗಾಗಲೇ ಹಲವು ಕ್ಷೇತ್ರದ ಶಾಸಕರು ಬೀದಿಗಿಳಿದು ಹೋರಾಟ ನಡೆಸಿದ್ದಾರೆ.

ಇಷ್ಟಲ್ಲದೆ ಗ್ಯಾರಂಟಿ ಹೆಸರಿನಲ್ಲಿ ಅಭಿವೃದ್ಧಿ ಕುಂಠಿತಗೊಂಡಿದ್ದು, ರಾಜ್ಯದ ತೆರಿಗೆ ಹಣ ಪಕ್ಷದ ಭರವಸೆ ಕಾರ್ಯಕ್ರಮಕ್ಕೆ ಬಳಸಿ ಶ್ರೀಸಾಮಾನ್ಯರಿಗೆ ಮೂಲಭೂತ ಸವಲತ್ತು ಕಲ್ಪಿಸಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ಹೊರಹಾಕಿದರು.

ಕಾರ್ಯಕ್ರಮದಲ್ಲಿ. ಆದಿವಾಸಿ ಗಿರಿಜನ ಮುಖಂಡ ಮತ್ತು ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಹರ್ಷ

ಸೆಸ್ಕ್ ಇಲಾಖೆ ಅಧಿಕಾರಿ ಜಗದೀಶ್, ಗ್ರಾಮದ ಹಿರಿಯ ಚಿಕ್ಕರಾಮಯ್ಯ, ಸುಭಾಷ್, ಜೆಡಿಎಸ್ ತಾ.ಘಟಕದ ಅಧ್ಯಕ್ಷ ಸುರೇಂದ್ರ ಹಾಜರಿದ್ದರು.

# ಮಾತೆಯರಿಂದ ಕಾಮಣ್ಣನ ದಹನಕ್ಕೆ ಅಗ್ನಿ ಸ್ಪರ್ಶ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ


ಪಟ್ಟಣದ ಕೆ.ಎಚ್.ಬಿ. ಬಡಾವಣೆ ಹನುಮಾನ ನಗರದಲ್ಲಿ, ಸೇರಿದಂತೆ ವಿವಿದೆಡೆ ಹೋಳಿ ಹುಣ್ಣಿಮೆ ದಿನದಂದು ಕಾಮಣ್ಣನ ದಹನಕ್ಕೆ ಪೂಜೆ ಸಲ್ಲಿಸಿ ಅಗ್ನಿ ಸ್ಪರ್ಶ ಮಾಡಿ, ಶೃದ್ಧೆ, ಭಕ್ತಿ, ನಿಷ್ಠೆ ಮತ್ತು ಸಡಗರ ಸಂಭ್ರಮದಿಂದ ಹೋಳಿ ಹುಣ್ಣಿಮೆ ಆಚರಿಸಲಾಯಿತು.

ಪಟ್ಟಣದ ಕೆ.ಎಚ್.ಬಿ ಕಾಲೋನಿ, ಹನುಮಾನ ನಗರದಲ್ಲಿ ಹೋಳಿ ಹುಣ್ಣಿಮೆ ದಿನದಂದು ದಿ ಅರ್ಬನ್ ಕೋ-ಆಪರೇಟಿವ ಬ್ಯಾಂಕ್ ನಿರ್ದೇಶಕಿ ಶೃತಿ ಸಂತೋಷ ಪಾಟೀಲರು ಕಾಮಣ್ಣನ ದಹನಕ್ಕೆ ಪೂಜೆ ಸಲ್ಲಿಸಿ ಅಗ್ನಿ ಸ್ಪರ್ಶ ಮಾಡಿ, ಮಾತನಾಡಿದ ಅವರು, ಪ್ರತಿಯೊಂದು ಸಂಪ್ರದಾಯದಲ್ಲಿ ತನ್ನದೆಯಾದ ಮೌಲ್ಯವಿದೆ. ಕಾಮ ದಹನ ಮಾಡುವುದು ಪ್ರಾಚೀನ ಕಾಲದಿಂದಲೂ ನಡೆದು ಬಂದ ಪರಂಪರೆಯಾಗಿದೆ. ಕಾಮ ದಹನದ ಮೂಲ ಉದ್ದೇಶ ದುಷ್ಟ ಗುಣಗಳನ್ನು ಕಾಮಣ್ಣನ ಬೆಂಕಿ ಸುಟ್ಟು ಹಾಕಲಿ ಹಾಗೂ ಶಿಷ್ಟರ ರಕ್ಷಣೆ ಕಾಮಣ್ಣನಿಂದ ಆಗಲಿ ಎನ್ನುತ ಹಿಂದೂ ಸಂಪ್ರಂದಾಯದಂತೆ ನಮ್ಮ ಹಿಂದೂ ಧರ್ಮದ ವರ್ಷದ ಕೊನೆ ಹಬ್ಬ ಇದಾಗಿದೆ ಬರುವ ಯುಗಾದಿ ನಮ್ಮ ಹಿಂದು ಧರ್ಮದ ಮೊದಲ ಹಬ್ಬ ಹೊಸ ವರ್ಷ ಎಂದು ಹೇಳಿದರು.

ಈ ಸಂದರ್ಭದಲ್ಲಿ ಓಣೆಯ ಮಹಿಳಾ ಶಕ್ತಿಯರು ಕೆಲವು ಸ್ಲೋಗನ ಹೇಳಿ, ಬೊಬ್ಬೆ ಹೊಡೆಯುವ ಮೂಲಕ ಹೋಳಿ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಸಂಗೀತಾ ನಿಟ್ಟೂರೆ, ದೇವಿಕಾ ಭಾಲ್ಕೆ, ಪ್ರತಿಭಾ ಪಾಟೀಲ, ದೀಪಾ ಚಿಟಗುಪ್ಪೆ, ಸುವರ್ಣಾ ಡಿಗ್ಗೆ, ಡಾ॥ ಸ್ನೇಹಾ ಪಾಟೀಲ, ಗೀತಾ ಪಾಟೀಲ, ಝುರನಮ್ಮ, ದಾಕ್ಷಾಯಣಿ, ಬಿರಾದಾರ, ಗೀತಾ ಮಲ್ಲೆಶಿ,, ಪೂಜಾ ಪಾಟೀಲಮ ಸುನಿತಾ ಲಾಮಚಕ್ರ, ಮಹಾದೇವಿ ಬಿರಾದಾರ ಓಣೆ-ಯ ಹತ್ತಾರು ಮಕ್ಕಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಹೊಸ ಕಂದಾಯ ಗ್ರಾಮಗಳ ಸೇರ್ಪಡೆಗೆ ಒತ್ತಾಯಿಸಿ ಮನವಿ

• ಮಲ್ಲಮ್ಮ ನುಡಿ ವಾರ್ತೆ ಕುಷ್ಟಗಿ



ಸರ್ಕಾರದ 6ನೇ ಗ್ಯಾರಂಟಿ ಯೋಜನೆ ಭೂ ಗ್ಯಾರಂಟಿ ಯೋಜನೆಯಲ್ಲಿ ಕುಷ್ಟಗಿ ತಾಲೂಕಿನ ಹನುಮಸಾಗರ ಹಾಗೂ ಹನುಮನಾಳ ಹೋಬಳಿ ವ್ಯಾಪ್ತಿಯಲ್ಲಿ ಬರುವಂತಹ ಕೆಲವು ಗ್ರಾಮಗಳನ್ನು ಹೊಸ ಕಂದಾಯ ಗ್ರಾಮಗಳನ್ನಾಗಿ ಮಾಡಿ ಹಕ್ಕುಪತ್ರ ನೀಡಬೇಕು ಎಂದು ಕರ್ನಾಟಕ ಜನದರ್ಶನ ವೇದಿಕೆ ರಾಜ್ಯಾಧ್ಯಕ್ಷ ದೇವಪ್ಪ ಮೆಣಸಗಿ ಹೇಳಿದರು. ಪಟ್ಟಣದ ತಹಸೀಲ್ದಾರ್ ಕಾರ್ಯಾಲಯದಲ್ಲಿ ಕರ್ನಾಟಕ ಜನದರ್ಶನ ವೇದಿಕೆ ಮೂಲಕ ಕಂದಾಯ ಸಚಿವರಿಗೆ, ಮುಖ್ಯಮಂತ್ರಿಗೆ ಹೊಸ ಕಂದಾಯ ಗ್ರಾಮಗಳ ಸೇರ್ಪಡೆಗೆ ಒತ್ತಾಯಿಸಿ ಮನವಿ ಸಲ್ಲಿಸಿ ಅವರು ಮಾತನಾಡಿದರು.

ಕುಷ್ಟಗಿ ತಾಲೂಕಿನ ಹನುಮಸಾಗರ ಮತ್ತು ಹನುಮನಾಳ ಹೋಬಳಿ ವ್ಯಾಪ್ತಿಯಲ್ಲಿ ಬರುವ ಮಾವಿನಇಟಗಿ ತಾಂಡಾ, ಯರಗೇರಾ, ಗುಡದೂರಕಲ್ ತಾಂಡಾ, ಚಂದ್ರಗಿರಿ, ಗೊರೆಬಿಹಾಳ ಇನ್ನಿತರ ಗ್ರಾಮಗಳನ್ನು ಕಂದಾಯ ಗ್ರಾಮಗಳ ಸೇರ್ಪಡೆ ಮಾಡಬೇಕು, ಇದರ ಜತೆಗೆ ಫಲಾನುಭವಿಗಳಿಗೆ ಹಕ್ಕುಪತ್ರ ಕೊಡಬೇಕು ಎಂದು ಹೇಳಿದರು. ಸಂಘಟನೆಯ ಪ್ರಮುಖರಾದ ಹನುಮಂತಪ್ಪ ಸುಂಕದ, ಸಂಗಪ್ಪ ಸಜ್ಜನ, ರವಿಕುಮಾರ ಈಳಗೇರ, ಮಲ್ಲಪ್ಪ ಮೆಣಸಗಿ, ಶರಣಪ್ಪ ಮಲಕಾಪುರ, ಸಂಗಪ್ಪ ಸಜ್ಜನ, ಮಹಾಂತೇಶ ವಾಲಿಕಾರ ಇದ್ದರು. ಶಿರಸ್ತೇದಾರ್ ಮಂಜುನಾಥ ಮನವಿ ಸ್ವೀಕರಿಸಿದರು.

# ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಸಮಾಜಕಲ್ಯಾಣ ಇಲಾಖೆಯಿಂದ 2026-27ನೇ ಸಾಲಿಗೆ ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ 6ನೇ ತರಗತಿಗೆ ಶಾಲೆಗಳಿಗೆ ಪ್ರವೇಶಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು, ಇಲಾಖೆಯ ವೈಬ್‌ಸೈಟ್ ವಿಳಾಸ: www.sw.kar.nic.in ನಲ್ಲಿ ದಿನಾಂಕ: 15-04-2026 ರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ದಿನಾಂಕ:04-05-2026 ರಂದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಸಿಲು ಹೆಚ್ಚಳ ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ಆಗದಂತೆ ಕ್ರಮ ಕೈಗೊಳ್ಳಿ: ಜಿಲ್ಲಾಧಿಕಾರಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ



ಜಿಲ್ಲೆಯಲ್ಲಿ ದಿನೇ ದಿನೇ ಬೇಸಿಗೆ ತಾಪಮಾನ ಹೆಚ್ಚಾಗುತ್ತಿದ್ದು, ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ 'ಕುಡಿಯುವ ನೀರಿನ ಸಮಸ್ಯೆ, ನಿರ್ವಹಣೆ' ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಾದ್ಯಂತ ಮುಂದಿನ ದಿನಗಳಲ್ಲಿ ತೀವ್ರ ನೀರಿನ ಸಮಸ್ಯೆ ಎದುರಿಸುವ ಗ್ರಾಮಗಳ ಪಟ್ಟಿ ಮಾಡಲಾಗಿದ್ದು, ಇದರಲ್ಲಿ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ 16 ಗ್ರಾಮ ಪಂಚಾಯತಿಯಲ್ಲಿ 24 ಗ್ರಾಮ, ಕೊಟ್ಟೂರು ತಾಲ್ಲೂಕಿನ 5 ಗ್ರಾಮ ಪಂಚಾಯತಿಯಲ್ಲಿ 58, ಹರಪನಹಳ್ಳಿ ತಾಲ್ಲೂಕಿನ 32 ಗ್ರಾಮ ಪಂಚಾಯತಿಗಳಲ್ಲಿ 58, ಹೊಸಪೇಟೆ ತಾಲ್ಲೂಕಿನ 13 ಗ್ರಾಮ ಪಂಚಾಯತಿಗಳ ಪೈಕಿ 19, ಕೂಡ್ಲಿಗಿ ತಾಲ್ಲೂಕಿನ 19 ಗ್ರಾಂ.ಪಂನಲ್ಲಿ 24 ಗ್ರಾಮಗಳಲ್ಲಿ ತೀವ್ರ ಕುಡಿಯುವ ನೀರಿನ ಬರ ಎದುರಿಸಲಿರುವ ಗ್ರಾಮಗಳು ಎಂದು ಗುರುತಿಸಲಾಗಿದೆ.

ಈ ನಿಟ್ಟಿನಲ್ಲಿ ಅಧಿಕಾರಿಗಳು ನೀರಿನ ಕೊರತೆಯುಂಟಾಗುವ ಗ್ರಾಮಗಳನ್ನು ಗುರುತಿಸಿ, ಅಂತಹ ಗ್ರಾಮಗಳಿಗೆ ಯಾವುದೇ ರೀತಿಯಲ್ಲಿ ನೀರಿನ ಸಮಸ್ಯೆಯಾಗದಂತೆ ಮುಂಜಾಗ್ರತಾ ಕ್ರಮವಹಿಸಬೇಕು. ಗ್ರಾಮೀಣ ಭಾಗದಲ್ಲಿ ಸರ್ಕಾರಿ ಕೊಳವೆಬಾವಿಗಳು ಬತ್ತಿ ಹೋಗಿದ್ದರೆ, ತಕ್ಷಣವೇ ಗ್ರಾಮದ ಸುತ್ತಮುತ್ತಲಿರುವ ಖಾಸಗಿ ಕೊಳವೆಬಾವಿಗಳನ್ನು ಗುರುತಿಸಿ, ಬಾಡಿಗೆ ಆಧಾರದ ಮೇಲೆ ಪಡೆದು ಸಾರ್ವಜನಿಕರಿಗೆ ಸಮರ್ಪಕವಾಗಿ ನೀರು ಪೂರೈಸಬೇಕು. ಒಂದು ವೇಳೆ ಕೊಳವೆ ಬಾವಿ ಲಭ್ಯವಿಲ್ಲದಿದ್ದಲ್ಲಿ ನೀರಿನ ತೀವ್ರ ಅಭಾವವಿರುವ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಶುದ್ಧ ಕುಡಿಯುವ ನೀರನ್ನು ಪೂರೈಸಬೇಕು. ಮೋಟಾರ್ ಪಂಪ್ ದುರಸ್ಥಿ ಅಥವಾ ಪೈಪ್‌ಲೈನ್ ಸೋರಿಕೆಯಂತಹ ತಾಂತ್ರಿಕ ಸಮಸ್ಯೆಗಳು ಕಂಡು ಬಂದರೆ ತಕ್ಷಣವೇ ದುರಸ್ಥಿಗೊಳಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಮುಂದಿನ ಏಪ್ರಿಲ್ ಮೇ ತಿಂಗಳಲ್ಲಿ ತಾಪಮಾನ ಮತ್ತಷ್ಟು ಹೆಚ್ಚಾಗಲಿದೆ. ಈ ನಿಟ್ಟಿನಲ್ಲಿ ಜಾನುವಾರುಗಳಿಗಾಗಿ ನೀರಿನ ತೊಟ್ಟಿ ನಿರ್ಮಿಸಲಾಗಿದೆ. ಆಯಕಟ್ಟಿನ ತೊಟ್ಟಿಗಳಲ್ಲಿ ಸದಾ ನೀರು ತುಂಬಿರುವಂತೆ ನೋಡಿಕೊಳ್ಳಬೇಕು. ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಎಪಿಎಂಸಿ ಮಾರುಕಟ್ಟೆಗಳಲ್ಲಿ ಸಾರ್ವಜನಿಕರಿಗಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಅದರಲ್ಲೂ ಪ್ರಮುಖವಾಗಿ ಹಂಪಿ ಪ್ರವಾಸಿ ತಾಣವಾಗಿದ್ದು, ದೇಶ ವಿದೇಶಗಳಿಂದ ಪ್ರವಾಸಿಗರು ಆಗಮಿಸುವರು. ಆದ್ದರಿಂದ ವಿರುಪಾಕ್ಷೇಶ್ವರ ದೇವಸ್ಥಾನ, ವಿಜಯ ವಿಠ್ಠಲ ದೇವಸ್ಥಾನ, ಮಹಾನವಮಿ ದಿಬ್ಬ ಸೇರಿದಂತೆ ಇನ್ನಿತರೆ ಪ್ರಮುಖ ಸ್ಥಳಗಳಲ್ಲಿ ಕುಡಿಯುವ ನೀರು ಮತ್ತು ಸಾಧ್ಯವಾದಲ್ಲಿ ವಿಶ್ರಾಂತಿ ಪಡೆಯಲು ನೆರಳಿನ ವ್ಯವಸ್ಥೆ ಮಾಡುವಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಗಳಿಗೆ ತಿಳಿಸಿದ ಅವರು, ಹಂಪಿ ಪ್ರವಾಸಿ ತಾಣ ವ್ಯಾಪ್ತಿಯಲ್ಲಿ ಸಿಬ್ಬಂದಿ ಸಹಿತ ಅಂಬುಲೆನ್ಸ್ ನಿಯೋಜಿಸುವಂತೆ ಡಿಹೆಚ್‌ಓ ಅವರಿಗೆ ತಿಳಿಸಿದರು. ಬಿಸಿಲಿನ ತಾಪ ಹೆಚ್ಚಾಗುವುದರಿಂದ ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮ ಬೀರಲಿದೆ. ಆದ್ದರಿಂದ ಆರೋಗ್ಯ ಇಲಾಖೆ ವತಿಯಿಂದ ಸಾರ್ವಜನಿಕರಲ್ಲಿ ಈ ಬಗ್ಗೆ ಅರಿವು ಮೂಡಿಸಬೇಕು. ನಗರ ಮತ್ತು ಗ್ರಾಮೀಣ ಭಾಗದ ಸ್ಥಳೀಯ ಆಡಳಿತ ಸಂಸ್ಥೆಗಳಿಂದ ಸ್ವಚ್ಛವಾಹಿನಿಗಳಲ್ಲಿ ಆಡಿಯೋ ಪ್ಲೇ ಮಾಡುವ ಮೂಲಕ ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ತಾಕೀತು ಮಾಡಿದರು. ಇದಕ್ಕೆ ಅವರು ಸಕರಾತ್ಮಕವಾಗಿ ಸ್ಪಂದಿಸಿದರು.

ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ ಮಾತನಾಡಿ, ಹೊಸದಾಗಿ ಕೊಳವೆ ಬಾವಿ ಕೊರೆಯಿಸಲು ಯಾವುದೇ ಅನುದಾನ ಲಭ್ಯವಿರುವುದಿಲ್ಲ. ಹಾಗಾಗಿ ಮೇಲಾಧಿಕಾರಿಗಳ ಪೂರ್ವಾನುಮತಿ ಇಲ್ಲದೇ ಕೊಳವೆ ಬಾವಿ ಕೊರೆಸುವಂತಿಲ್ಲ. ಒಂದು ವೇಳೆ ತೀರ ಅಗತ್ಯವಿದ್ದಲ್ಲಿ ಈ ಬಗ್ಗೆ ವರದಿ ಸಿದ್ದಪಡಿಸಿ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ಬಗ್ಗೆ ಅಧಿಕಾರಿಗಳಿಗೆ ಯಾವುದೇ ರೀತಿಯ ಗೊಂದಲ ಅಥವಾ ಸಮಸ್ಯೆಗಳು ಉಂಟಾದಲ್ಲಿ ಮೇಲಾಧಿಕಾರಿಗಳನ್ನು ಸಂಪರ್ಕಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಉಪವಿಭಾಗಾಧಿಕಾರಿ ವಿವೇಕಾನಂದ, ನಗರಸಭೆ ಪೌರಾಯುಕ್ತ ಶಿವಕುಮಾರ್, ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಮನೋಹರ್, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.

# ಪಾದಯಾತ್ರಿಗಳಿಗೆ 28ನೇ ವರ್ಷದ ದಾಸೋಹ ಸೇವೆ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ



ಭಕ್ತಿ ಮತ್ತು ಸೇವೆಯ ಸಂಗಮವಾಗಿರುವ ಇಲ್ಲಿನ ಸಂಜೀವನಗರ ಬಡಾವಣೆಯಲ್ಲಿ ಶ್ರೀಶೈಲ ಮಲ್ಲಿಕಾರ್ಜುನನ ದರ್ಶನಕ್ಕೆ ತೆರಳುವ ಪಾದಯಾತ್ರಿಗಳಿಗಾಗಿ ಹಮ್ಮಿಕೊಳ್ಳಲಾದ ದಾಸೋಹ ಸೇವೆ ಯಶಸ್ವಿಯಾಗಿ ಜರುಗಿತು.

ಈ ದಾಸೋಹ ಕೈಂಕರ್ಯವು ಸತತ 28 ವರ್ಷಗಳಿಂದ ಅವಿರತವಾಗಿ ನಡೆದುಕೊಂಡು ಬರುತ್ತಿರುವುದು ವಿಶೇಷ.

ಪ್ರತಿವರ್ಷದಂತೆ ಈ ಬಾರಿಯೂ ಮನ್ರುಪ್, ತೇಲಗಾಂವ್, ಕಗ್ಗೋಡ್, ಹೊನ್ನಟಗಿ, ಹಡಗಲಿ, ಶಿವಣಗಿ ಕಲಕೇರಿ, ದೇವರಹಿಪ್ಪರಗಿ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆ ಹಾಗೂ ಮಹಾರಾಷ್ಟದಿಂದ ಆಗಮಿಸುವ ಸಾವಿರಾರು ಪಾದಯಾತ್ರಿಗಳಿಗೆ ಇಲ್ಲಿನ ಸಂಜೀವಾಂಜನೆಯ ದೇವಸ್ಥಾನದಲ್ಲಿ ಆಶ್ರಯ ಹಾಗೂ ಅನ್ನದಾಸೋಹದ ವ್ಯವಸ್ಥೆ ಮಾಡಲಾಗಿತ್ತು. ಶಿವಣ್ಣ ಬಳಬಟ್ಟಿ, ಶರಣಪ್ಪ ಸಾಹು ತಳವಾರಗೇರಿ, ಆನಂದರಾವ್ ಕುಲ್ಕರ್ಣಿ ಸೇರಿದಂತೆ ಬಡಾವಣೆಯ ಪ್ರಮುಖರ ನೇತೃತ್ವದಲ್ಲಿ ಈ ಸೇವಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡ ಶಿವಣ್ಣ ಬಳಬಟ್ಟಿ ಅವರು, ಕಳೆದ 28 ವರ್ಷಗಳಿಂದ ಬಡಾವಣೆಯ ಸರ್ವರ ಸಹಕಾರದೊಂದಿಗೆ ಈ ದಾಸೋಹ ಕಾರ್ಯವನ್ನು ನಡೆಸಿಕೊಂಡು ಬರುತ್ತಿದ್ದೇವೆ. ಪಾದಯಾತ್ರಿಗಳ ಸೇವೆ ಮಾಡುವುದು ನಮಗೆ ಅತೀವ ತೃಪ್ತಿ ನೀಡುತ್ತದೆ. ಮಲ್ಲಿಕಾರ್ಜುನನ ಭಕ್ತರಿಗೆ ಸೇವೆ ಮಾಡುವ ಭಾಗ್ಯ ಲಭಿಸಿರುವುದು ನಮ್ಮ ಪುಣ್ಯ ಎಂದು ಭಾವುಕರಾಗಿ ನುಡಿದರು.

ನಿವೃತ್ತ ಶಿಕ್ಷಕ ಶಿವಾನಂದಯ್ಯ ಸ್ವಾಮಿ ಹಿರೇಮಠ, ಸಿದ್ದನಗೌಡ ಕಾಚಾಪುರ, ಮಲ್ಲಣ್ಣ ಅಸಂತಾಪುರ, ಗೊಲ್ಲಾಳಪ್ಪ ಸಾಹು ಗುಗ್ಗರಿ, ಉದಯ ಕುಲ್ಕರ್ಣಿ, ಸಿದ್ದಣ್ಣ ಕರಡಕಲ್, ವಿರುಪಾಕ್ಷಪ್ಪಗೌಡ ರೋಡಲಬಂಡಾ, ಮಲ್ಕಣ್ಣ ದುಮ್ಮದ್ರಿ, ಶ್ರೀಶೈಲ ಚಟ್ಟನಹಳ್ಳಿ, ಪ್ರಭುಗೌಡ ನಂದೆಳ್ಳಿ ಸೇರಿದಂತೆ ಹಲವರು ಇದ್ದರು.

# ಹಿರಿಯರ ಸ್ಮರಣೆಗಾಗಿ ಪರಿಷತ್ತಿಗೆ ನೀಡಿದ ದತ್ತಿ ಸಾರ್ಥಕೆ; ರಂಗನಾಥರಾವ್



ಬಳ್ಳಾರಿ. : ಕನ್ನಡ ಗ್ರಾಮೀಣ ಪರಿಸರ ಮತ್ತು ಕೃಷಿ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡುತ್ತಾ ತಂದೆ ತಾಯಿಗಳನ್ನು ಸಾಕಲಾರದ ಅಸಂಸ್ಕೃತ ವಾತಾವರಣ ಸೃಷ್ಟಿಯಾಗುತ್ತಿರುವುದು ವರ್ತಮಾನದ ತಲ್ಲಣಗಳಲ್ಲಿ ಒಂದಾಗಿದೆ ಎಂದು ಯರ್ರಗುಡಿ ನಾರಾಯಣರಾವ್ ತಿಳಿಸಿದರು.

ಅವರು ಇಂದು ನಗರದಲ್ಲಿ ಕ.ಸಾ.ಪ ಬಳ್ಳಾರಿ ಗ್ರಾಮೀಣ ಘಟಕವು ಹಗರಿ ಕೃಷಿ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸುಮಿತ್ರಮ್ಮ ದತ್ತಿ, ದಿ. ಎನ್. ಮುರುಗೇಂದ್ರಪ್ಪ ಮತ್ತು ಎನ್. ಸರ್ವಮಂಗಮ್ಮ ದತ್ತಿ, ದಿ. ಚಿಲಕರಾಯ ಬಸವನಗೌಡ ದತ್ತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಾನವ ವೈಜ್ಞಾನಿಕವಾಗಿ ಎಷ್ಟೇ ಪ್ರಗತಿ ಸಾಧಿಸಿದರು ಮಾನವೀಯ ಮೌಲ್ಯಗಳನ್ನು ಮರೆಯಬಾರದೆಂದು ಎಂದು ರಂಗನಾಥರಾವ್ ನುಡಿದರು.

ಕೃಷಿ ಮಹಾವಿದ್ಯಾಲಯದ ಪ್ರಭಾರ ಅಧಿಕಾರಿಗಳಾದ ಡಾ. ಜಿ. ರವಿಶಂಕರ್ ಅವರು ಮಾತನಾಡಿ ಕೃಷಿ ಕಾಲೇಜಿನಲ್ಲಿ ಕನ್ನಡ ಕಾರ್ಯಕ್ರಮ ಹಮ್ಮಿಕೊಂಡಿರುವುದು ಹೆಮ್ಮೆಯ ಸಂಗತಿ ಎಂದರು.

ದತ್ತಿ ದಾನಿಗಳಾದ ಎನ್. ವಿ. ವಿವೇಕಾನಂದಸ್ವಾಮಿ ಮತ್ತು ಪ್ರಾಧ್ಯಾಪಕ ಡಾ. ಬಿ.ಕೆ. ರಮೇಶ್ ಮಾತನಾಡಿದರು.

ವೇದಿಕೆಯಲ್ಲಿ ಕಪ್ಪಗಲ್ಲು ಬಿ. ಚಂದ್ರಶೇಖರ ಆಚಾರ್, ಚಿತ್ರ ಕಲಾವಿದರಾದ ಮಂಜುನಾಥ ಗೋವಿಂದವಾಡ ಮತ್ತಿತರರು ವೇದಿಕೆಯಲ್ಲಿದ್ದರು.

ಕ.ಸಾ.ಪ. ಗ್ರಾಮೀಣ ಘಟಕದ ಅಧ್ಯಕ್ಷ ಎ. ಎರ್ರಿಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಡಾ. ನಾಗೇಶ್ ಬಿ. ಜಾನೇಕಲ್ ಸ್ವಾಗತಿಸಿದರು.



**ಹುಣಸೂರು ನಗರದ ನಗರಸಭೆಯ 2024-25 ನೇ ಸಾಲಿನ ಎಸ್ ಎಫ್ ಸಿ ಶೇಕಡಾ 24.10 ಅನುದಾನದಲ್ಲಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿಯ ಬಡ ರೋಗಿಗಳಿಗೆ ಹಳೆಯ ಆಡಳಿತ ಮಂಡಳಿಯ ಅವಧಿಯಲ್ಲಿ ಆಯ್ಕೆಯಾಗಿದ ಪಲಾನುಭವಿಗಳಿಗೆ ಶಾಸಕರಾದ ಜಿ ಡಿ ಹರೀಶ್ ಗೌಡರ ಸೂಚನೆಯಂತೆ ತಲಾ ರೂ. 25000 ಗಳಂತೆ ಸಹಾಯಧನ ನೀಡಲಾಯಿತು ನಿಕಟಪೂರ್ವ ನಗರಸಭಾ ಸದಸ್ಯರು ಹೆಚ್ ಪಿ ಸತೀಶ್ ಕುಮಾರ್ ಹಾಗೂ ಪೌರ್ಯಾಯುಕ್ತರು ಮಾನಸ ಹಾಗೂ ಸಂಬಂಧಪಟ್ಟ ಅಧಿಕಾರಿ ಲೀಲು ಸುಂದರ್ ರವರು ಫಲಾನುಭವಿಗಳು ಚೆಕ್ಕನ್ನು ವಿತರಿಸಿದರು**

# ವೈಜ್ಞಾನಿಕ ಮನೋಭಾವ ಅಗತ್ಯ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಜೀವನದ ಎಲ್ಲ ರಂಗಗಳಲ್ಲೂ ವಿಜ್ಞಾನ ಅತಿ ಮಹತ್ವದ್ದಾಗಿದ್ದು ನಾವೆಲ್ಲರೂ ವೈಜ್ಞಾನಿಕ ಮನೋಭಾವನೆಯನ್ನು ಹೊಂದಿದ್ದರೆ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ವಿಜ್ಞಾನ ಮಾನವ ಬದುಕಿನ ಉನ್ನತಿಯ ಗುರಿಯನ್ನು ಹೊಂದಿದ್ದಲ್ಲದೆ ಎಲ್ಲ ಸಮಸ್ಯೆಗಳಿಗೂ ಪರಿಹಾರವನ್ನು ಕೊಡುವಂತದ್ದು ಆದ್ದರಿಂ ದ ನಾವೆಲ್ಲರೂ ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಳ್ಳಬೇಕೆಂದು ಪ್ರಾಚಾರ್ಯರಾದ ಶ್ರೀಲತಾ ಹೇಳಿದರು.

ತಾಲೂಕಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ ಆಯೋಜಿಸಲಾದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಭೌತಶಾಸ್ತ್ರದ ಅಧ್ಯಾಪಕರಾದ ನಸೀವ್ ಪ್ರಾಸ್ತವಿಕವಾಗಿ ಮಾತನಾಡಿ ರಾಮನ್ ಎಫೆಕ್ಟ್ ಹೇಗೆ ಇರುತ್ತದೆ ಎಂಬುದನ್ನು ಪ್ರಾತ್ಯಕ್ಷೀಕರಣದ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ಅನೇಕರು ಉಪಸ್ಥಿತರಿದ್ದರು. ನಿರೂಪಣೆ ನಯನ ಮತ್ತು ಅನುಷ್ಕಾ. ಮೀನಾದೇವಿ ಸ್ವಾಗತಿಸಿದರು. ವಿಜಯಲಕ್ಷ್ಮಿ ವಂದಿಸಿದರು.

ಕಾರ್ಯಕ್ರಮದ ನಂತರ ವಿಜ್ಞಾನದ ವಸ್ತು ಪ್ರದರ್ಶನವನ್ನು ಪ್ರಕಾಶ್ ಶಹಾ, ವಿಜ್ಞಾನ ಶಿಕ್ಷಕರು, ವಿಜಯಕುಮಾರ ಸಿಂಧೆ ಏರ್ಪಡಿಸಲಾಗಿತ್ತು.

ಅನೇಕ ಮಕ್ಕಳು ತಾವೇ ಮಾಡಿದ ವಸ್ತು ಪ್ರದರ್ಶನಗಳೊಂದಿಗೆ ನಿಂತು ಪ್ರದರ್ಶಕರಿಗೆ ಅವುಗಳ ವಿವರಣೆ ನೀಡುವುದು ಅತ್ಯಂತ ಆಕರ್ಷಕವಾಗಿತ್ತು.

# ರಮಜಾನ್ ಸೌಹಾರ್ದತೆಯ ಸಂಕೇತ: ಅಸ್ಕಿ



• ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ

> "ಕಳೆದ ಎಂಟು ವರ್ಷಗಳಿಂದ ರಮಜಾನ್ ಮಾಸದಲ್ಲಿ ಎರಡೂ ತಾಲೂಕಿನಲ್ಲಿ ಸರ್ವಧರ್ಮೀಯರಿಗಾಗಿ ಸೌಹಾರ್ದ ಇಫ್ತಾರ ಕೂಟಗಳನ್ನು ಫೌಂಡೇಶನ್ ದಿಂದ ಹಮ್ಮಿಕೊಳ್ಳ ಲಾಗುತ್ತಿದೆ ಸಮಾಜದಲ್ಲಿ ಸಾಮ ರಸ್ಯ ಮೂಡಿಸುವುದು ಇದರ ಉದ್ದೇಶವಾಗಿದೆ.
> ಸಿ.ಬಿ.ಅಸ್ಕಿ ಫೌಂಡೇಶನ್ ಅಧ್ಯಕ್ಷ.

ಮುಸ್ಲಿಂ ಬಾಂಧವರು ಪವಿತ್ರ ರಮಜಾನ್ ಮಾಸದಲ್ಲಿ ಉಪವಾಸ ವೃತ ಹಾಗೂ ವಿಶೇಷ ಆರಾಧನೆಗಳನ್ನು ಆಚರಿಸುವ ಮೂಲಕ ಭಗವಂತನ ಸಂಪ್ರೀತಿಗೆ ಪಾತ್ರರಾಗುತ್ತಾರೆ. ಇದು ಎಲ್ಲ ಧರ್ಮೀಯರ ಮಧ್ಯೆ ಪ್ರೀತಿ ಮತ್ತು ಸಾಮರಸ್ಯವನ್ನು ಬೆಳೆಸುವ ಮಾಸಾಗಿದೆ ಎಂದು ಅಸ್ಕಿ ಫೌಂಡೇಶನ್ ಕೊಣ್ಣೂರದ ಅಧ್ಯಕ್ಷ ಸಿ.ಬಿ.ಅಸ್ಕಿ ಹೇಳಿದರು. ತಾಲೂಕಿನ ಕೊಣ್ಣೂರ ಗ್ರಾಮದಲ್ಲಿ ಪವಿತ್ರ ರಮಜಾನ್ ಮಾಸದ ಅಂಗವಾಗಿ ಫೌಂಡೇಶನ್ ವತಿಯಿಂದ ಗುರುವಾರ ಸಂಜೆ ಹಮ್ಮಿಕೊಂಡ "ಇಫ್ತಾರ ಸೌಹಾರ್ದ ಕೂಟ" ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಳೆದ 8 ವರ್ಷಗಳಿಂದ ಇಂತಹ ಸೌಹಾರ್ದ ಭೋಜನ ಕೂಟಗಳನ್ನು ಎರಡೂ ತಾಲೂಕುಗಳಲ್ಲಿ ಆಯೋಜಿಸುತ್ತಾ ಬಂದಿದ್ದೇನೆ ಇದಕ್ಕೆ ಎಲ್ಲಾ ಸಮಾಜ ಬಾಂಧವರ ಸಹಕಾರ ನನಗಿದೆ ನಾವೆಲ್ಲರೂ ಒಂದಾಗಿ ಪ್ರೀತಿ ವಿಶ್ವಾಸದಿಂದ ಬಾಳುತ್ತಾ ದೇಶ ಕಟ್ಟುವ ಕೆಲಸವನ್ನು ಮಾಡಬೇಕಾಗಿದೆ ಎಂದರು. ಗ್ರಾಮದ ಗಣ್ಯರಾದ ಬಸನಗೌಡ ಹಡಲಗೇರಿ ಹಾಗೂ ಮುಸ್ಲಿಂ ಸಮಾಜದ ಮುಖಂಡ ಮಡಿಕೇಶ್ವರ ಅವರು ಮಾತನಾಡಿ ಸಿ.ಬಿ.ಅಸ್ಕಿ ಅವರು ಜಾತಿ ಮತ ಭೇದವಿಲ್ಲದೆ ಎಲ್ಲರನ್ನೂ ಪ್ರೀತಿಸುವ ಹಾಗೂ ಸಹಕರಿಸುವ ವ್ಯಕ್ತಿಯಾಗಿದ್ದಾರೆ ಅವರು ಮಾಡುತ್ತಿರುವ ಸಮಾಜ ಸೇವಾ ಕಾರ್ಯಗಳು ನಮಗೆಲ್ಲರಿಗೂ ಮಾದರಿ ಯೋಗ್ಯವಾಗಿವೆ ಅವರಿಗೆ ನಾವು ಸಹಕರಿಸೋಣ. ನಾವೆಲ್ಲರೂ ಒಂದು ನಾವೆಲ್ಲರೂ ಭಾರತೀಯರು ಎಂಬ ಭಾವನೆ ಎಲ್ಲರಲ್ಲೂ ಬೆಳೆಯಬೇಕಾಗಿದೆ. ಇಂತಹ ಸೌಹಾರ್ದ ಭೋಜನ ಕೂಟಗಳು ಸಮಾಜದಲ್ಲಿ ಹೆಚ್ಚಾಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಭೋಜನ ಕೂಟದಲ್ಲಿ ಸರ್ವ ಸಮಾಜದ ನೂರಾರು ಜನರು ಭಾಗವಹಿಸಿ ಭಾವೈಕ್ಯತೆಯನ್ನು ಮೆರೆದರು. ಇದೇ ಸಂದರ್ಭದಲ್ಲಿ ಕೊಣ್ಣೂರ ಮುಸ್ಲಿಂ ಸಮಾಜದ ವತಿಯಿಂದ ಸಮಾಜ ಸೇವಕ ಅಸ್ಕಿ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಮದ ಗಣ್ಯರಾದ ಶಂಕರಗೌಡ ಹಿಪ್ಪರಗಿ, ವಿವೇಕಾನಂದ ದ್ಯಾಪೂರ, ಜಿ.ಜಿ.ಅಸ್ಕಿ, ಅಂಜುಮನ್ ಕಮಿಟಿ ಅಧ್ಯಕ್ಷ ಬಂದೇನವಾಜ ಕಡಕೋಳ, ಜಿ.ಎಸ್. ಹಡಲಗೇರಿ, ಆರ್.ಸಿ.ಪಾಟೀಲ, ಗುರಣ್ಣ ಹತ್ತೂರ, ಅಬ್ದುಲ್ ರೆಹ್ಮಾನ ಅವಟಿ, ಮುದೇಗೌಡ ಹಡಲಗೇರಿ, ಆರ್.ಬಿ.ಬಿರಾದಾರ, ಮಹಮ್ಮದ್ ರಫೀಕ ಚಬ ನೂರ, ಡಿ.ಬಿ.ಬಿರಾದಾರ, ತಿಪ್ಪಣ್ಣ ಬಡಿಗೇರ, ಎಸ್.ಎಸ್.ಹಡಲಗೇರಿ ಬಸಣ್ಣ ನಾಯ್ಕೋಡಿ ಹಾಗೂ ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು. ಪತ್ರಕರ್ತ ಅಬ್ದುಲ್ ಗನಿ ಮಕಾನದಾರ ಕಾರ್ಯಕ್ರಮ ನಿರ್ವಹಿಸಿದರು.

# ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ ಅಕ್ಷೇಪಣೆ ಸಲ್ಲಿಕೆಗೆ ಅವಕಾಶ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ನಗರದ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಛೇರಿಯಲ್ಲಿ ಖಾಲಿ ಉಳಿದಿದ್ದ ಒಂದು ಅಕೌಂಟೆಂಟ್ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿ, ಕಾಯ್ದಿರಿಸಿದ ಪಟ್ಟಿ, ಅರ್ಹ ಅಭ್ಯರ್ಥಿಗಳ ಪಟ್ಟಿ ಮತ್ತು ತಿರಸ್ಕರಿಸಿದ ಪಟ್ಟಿಯನ್ನು ಓಖಅ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಈ ಬಗ್ಗೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಲಿಖಿತ ರೂಪದಲ್ಲಿ ಇದೇ ಮಾರ್ಚ್ 12 ರೊಳಗಾಗಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳ ಕಚೇರಿಗೆ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ನಗರದ 110/11ಕೆವಿ ಸಂಕ್ಲಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಮಾರ್ಚ್ 8 ರಂದು ಬೆಳ್ಳಗೆ 9 ರಿಂದ ಮಧ್ಯಾಹ್ನ 3 ರವರೆಗೆ ತುರ್ತು ನಿರ್ವಹಣಾ ಕಾಮಗಾರಿ ಮತ್ತು ಇತರೆ ದುರಸ್ಥಿ ಕಾರ್ಯ ಕೈಗೊಳ್ಳಲಾಗಿದೆ.

ಆದ್ದರಿಂದ ಈ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲ 11ಕೆವಿ ಫೀಡರ್ ಗಳಾದ ಎಫ್–1 ರಾಮ, ಎಫ್ –9 ಎನ್‌ಸಿ ಕಾಲೋನಿ, ಎಫ್–10 ವಿಜಯನಗರ, ಎಫ್ 11 ಟಿಎಸ್‌ಪಿ, ಎಫ್ –15 ಜಂಬುನಾಥ ಗುಡಿ, ಎಫ್–5 ಬಸವನದುರ್ಗ ವ್ಯಾಪ್ತಿಗೆ ಒಳಪಡುವ ವಾಲ್ಮೀಕಿ ನಗರ, ಸಂಡೂರು ರೋಡ್, ರಾಮಾ ಟಾಕೀಸ್ ಏರಿಯಾ, ಚಲುವಾದಿ ಕೆರೆ, ಉಕ್ಕಡಕೆರೆ, ಚಿತ್ತರಕೆರೆ, ಮ್ಯಾಸಕೆರೆ, ಬಾಣದಕೆರೆ, ಎನ್.ಸಿ ಕಾಲೋನಿ, ಗಾಂಧಿಕಾಲೋನಿ, ವಿವೇಕಾನಂದ ನಗರ, ಎ.ಪಿ.ಎಮ್.ಸಿ. ಏರಿಯಾ, ಹರಿಹರ ರೋಡ್, ಜಿಲ್ಲಾಧಿಕಾರಿಗಳ ಕಚೇರಿ, ಎಸ್.ಪಿ.ಕಚೇರಿ, ಸಾಯಿಬಾಬ ಸರ್ಕಲ್, ಚಪ್ಪರದಹಳ್ಳಿ, 100 ಹಾಸಿಗೆ ಆಸ್ಪತ್ರೆ, ಎಂ.ಜೆ.ನಗರ, ಎಸ್.ಆರ್ ನಗರ, ಭಗತ್ ಸಿಂಗ್ ನಗರ, ನಗರಸಭೆ ವ್ಯಾಪ್ತಿಯ ಎಲ್ಲಾ ಕುಡಿಯುವ ನೀರಿನ ಘಟಕ, ಗೋಕುಲ ನಗರ, ನಿಶಾನಿ ಕ್ಯಾಂಪ್, ಪಿಎಲ್‌ಸಿ ಕ್ಯಾಂಪ್, ಸೋನಿಯಾ ನಗರ, ಡ್ರೆಸ್ ಕ್ಯಾಂಪ್, ಇಂದಿರಾ ನಗರ, ಇ.ವಿ.ಕ್ಯಾಂಪ್, ಜಂಬುನಾಥ ಗುಡಿ ರೋಡ್, ಮಾರುತಿ ಕಾಲೋನಿ, ದೂಲ್ ಪೇಟ್ ಏರಿಯಾ, ಜಂಬುನಾಥಹಳ್ಳಿ, ಆದರ್ಶ ಶಾಲೆ, ಎನ್.ಹೆಚ್.ರಸ್ತೆ, ಆರ್.ಕೆ. ಕೊಟೇಜ್ ಲೇಔಟ್ ಸಂಕ್ಲಾಪುರ, ನಾಗೇನಹಳ್ಳಿ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಬಸವನದುರ್ಗ, ಹೊಸುರು ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಇಪ್ಪಿತ್ತೇರಿ ಮಾಗಣಿ, ನರಸಾಪುರ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಆದ್ದರಿಂದ ಸಾರ್ವಜನಿಕರು ಸಹಕರಿಸಬೇಕೆಂದು ಜೆಸ್ಕಾಂ ಸಹಾಯಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿದ್ದರಾಮಯ್ಯ ಅವರ ಅಭಿವೃದ್ಧಿಯ ಬಜೆಟ್

• ಮಲ್ಲಮ್ಮ ನುಡಿ ವಾರ್ತೆ ಔರಾದ




ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿದ 2026–27ನೇ ಸಾಲಿನ ರಾಜ್ಯ ಬಜೆಟ್ ಅನ್ನು ಔರಾದ್ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ಭೀಮಸೇನರಾವ್ ಶಿಂದೆ ಅವರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಇದು ಕೇವಲ ಅಂಕಿ–ಅಂಶಗಳ ಬಜೆಟ್ ಅಲ್ಲ, ಬದಲಾಗಿ ಬಡವರು, ರೈತರು ಮತ್ತು ದೀನದಲಿತರ ಬದುಕನ್ನು ಹಸನು ಮಾಡುವ "ಅಭಿವೃದ್ಧಿಯ ದಿಕ್ಸೂಚಿ" ಎಂದು ಅವರು ಬಣ್ಣಿಸಿದ್ದಾರೆ.11ಉ ಮಾದರಿ ಮತ್ತು ಗ್ಯಾರಂಟಿ ಯೋಜನೆಗಳು, ಉದ್ಯೋಗ ಸೃಷ್ಟಿಗೆ ಆದ್ಯತೆ ಸೇರಿದಂತೆ ರೈತರ ಹಿತರಕ್ಷಣೆಗಾಗಿ ಕೃಷಿ ವಲಯಕ್ಕೆ ಹೆಚ್ಚಿನ ಅನುದಾನ ನೀಡಲಾಗಿದ್ದು, ಬೀದರ್ ಜಿಲ್ಲೆಯ ರೈತರಿಗೂ ಇದರಿಂದ ಹೆಚ್ಚಿನ ಅನುಕೂಲವಾಗಲಿದೆ. ವಿಶೇಷವಾಗಿ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ನೀಡಿರುವ ಒತ್ತು ಶ್ಲಾಘನೀಯ ಎಂದರು.

# ಗುತ್ತಿಗೆದಾರರ ಕೈಗೊಂಬೆಯಾದ ಕೆಲವು ಅಧಿಕಾರಿಗಳು: ಚೆನ್ನಯ್ಯ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ



ಬಳ್ಳಾರಿ ಜಿಲ್ಲೆ ಕಂಪ್ಲಿ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿನ 5 ನೇ ಮತ್ತು 18 ನೇ ವಾರ್ಡಿನಲ್ಲಿರುವ ಕುಡಿಯುವ ನೀರು ಮತ್ತು ಇತರೆ ಬಳಕೆಗೆ ನೀರಿನ ಟ್ಯಾಂಕನ್ನು ಈ ಹಿಂದೆಯೇ ಅಳವಡಿಸಿದ್ದು ಅದು ಸೋರುತ್ತಿದೆ ಎಂಬ ನೆಪವನ್ನು ಮುಂದಿಟ್ಟುಕೊಂಡು ಪ್ಲಾಸ್ಟಿಂಗ್ ಮಾಡುವ ಬದಲು ಹೊಸ ಸಿಮೆಂಟ್ ಟ್ಯಾಂಕನ್ನು ಅಳವಡಿಸಲು ಅನುಮೋದನೆ ಪಡೆದು ಎರಡು ಸಿಮೆಂಟ್ ಟ್ಯಾಂಕನ್ನು ಬದಲಾವಣೆ ಮಾಡಲು ಒಂದು ಲಕ್ಷ ಕ್ರಿಯಾ ಯೋಜನೆಯನ್ನು ತಯಾರಿಸಿ ಹೊಸಪೇಟೆಯ ಗುತ್ತಿಗೆದಾರನಿಗೆ ಕಾಮಗಾರಿ ಮಾಡಲು ನೀಡಿದರು ಗುತ್ತಿಗೆದಾರನು ಕಾಮಗಾರಿಯನ್ನು ಸಂಪೂರ್ಣವಾಗಿ ಮಾಡದೆ ಬೇಕಾಬಿಟ್ಟಿ ಕಾಮಗಾರಿ ಮಾಡಿ ಟ್ಯಾಂಕನ್ನು ಹೊಡೆದು ಅದರ ತ್ಯಾಜ್ಯ ಮತ್ತು ಕಲ್ಲು ಮಣ್ಣು ಇನ್ನಿತರ ತ್ಯಾಜ್ಯವನ್ನು ಅಲ್ಲಿಯೇ ಬಿಟ್ಟು ಕಾಮಗಾರಿಯ ಮೊತ್ತವನ್ನು ಪಡೆದು ಹೊಸಪೇಟೆಗೆ ಹೋಗಿ ಕುಳಿತಿದ್ದಾನೆ.

ಇದರ ಬಗ್ಗೆ 5 ಮತ್ತು 18 ನೇ ವಾರ್ಡಿನ ಸಾರ್ವಜನಿಕರ ಪರವಾಗಿ ವೇದಿಕೆ ಮುಖಾಂತರ ತ್ಯಾಜ್ಯವನ್ನು ತೆಗಿಸಲು ಮೌಖಿಕವಾಗಿ ಮನವಿ ಸಲ್ಲಿಸಿದರೆ ಮಾನ್ಯ ಮುಖ್ಯ ಅಧಿಕಾರಿಗಳು ಗುತ್ತಿಗೆದಾರನಿಗೆ ಕರೆ ಮಾಡಿ ಈ ತ್ಯಾಜ್ಯವನ್ನು ತೆಗೆಯಲು ತಿಳಿಸಿದರೆ.

ಕ್ರಿಯಾಯೋಜನೆ ಪ್ರಕಾರ 2 ವಾರ್ಡಿನ ಟ್ಯಾಂಕುಗಳನ್ನು ಬದಲಾಯಿಸಿದ್ದೇನೆ ತ್ಯಾಜ್ಯ ಇನ್ನಿತರೆ ವಸ್ತುಗಳನ್ನು ತೆಗೆಯಲು ಮತ್ತೊಮ್ಮೆ ಕ್ರಿಯಾ ಯೋಜನೆ ತಯಾರಿಸಿ ಹಣ ನೀಡಿದ ನಂತರ ತೆಗೆಯುತ್ತೇನೆ ಎಂದು ಕಡ ಖಂಡಿತವಾಗಿ ಹೇಳಿದ ಈ ಗುತ್ತಿಗೆದಾರನ ಮೇಲೆ ಕಾನೂನು ಕ್ರಮ ಜರುಗಿಸಿ ಆತನ ಪರವಾನಿಗೆಯನ್ನು ಕಪ್ಪುಪೆಟ್ಟಿಗೆ ಸೇರಿಸಿ ಎಂದು ದಕ್ಷತೆಗೆ ಹೆಸರಾದ ತಮಗೆ ವೇದಿಕೆಯ ರಾಜ್ಯಾಧ್ಯಕ್ಷರಾದ ಚೆನ್ನಯ್ಯ ವಸ್ತದ್ ರಾಜ್ಯ ಕಾರ್ಯಧ್ಯಕ್ಷರಾದ ಟಿ ಎಚ್ ರಾಜಕುಮಾರ್ ಪ್ರಧಾನ ಕಾರ್ಯದರ್ಶಿಯಾದ ರಾಮಕೃಷ್ಣ ಸಂಘಟನಾ ಕಾರ್ಯದರ್ಶಿಯಾದ ಮನೋಜ್ ರಾಜ್ಯ ಪದಾಧಿಕಾರಿಗಳು ಮತ್ತು ಜಿಲ್ಲಾ ಹಾಗೂ ತಾಲೂಕು ಪದಾಧಿಕಾರಿಗಳ ಜೊತೆಗೆ 5 ಮತ್ತು 18 ನೇ ವಾರ್ಡಿನ ಸಾರ್ವಜನಿಕರ ಪರವಾಗಿ ದೂರಿನ ಮುಖಾಂತರ ಮನವಿಯನ್ನು ಸಲ್ಲಿಸಿದ್ದು ಮುಂದಿನ ಕ್ರಮಕ್ಕಾಗಿ ಕಾದು ನೋಡಬೇಕಿದೆ.

# ಬಸವ ಜನ್ಮಭೂಮಿಯಲ್ಲಿ ರಂಗಪಂಚಮಿ



• ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ

> "ಇದೇ ಸಂದರ್ಭದಲ್ಲಿ ಶ್ರೀ ಬಸವೇಶ್ವರ ಸೇವಾ ಸಮಿತಿಗೆ ಪಟ್ಟಣದ ಔಷಧಿ ವ್ಯಾಪಾರಿ ರಮೇಶ ಯಳಮೇಲಿ, ಸಮಾಜ ಸೇವಕ ರವಿಗೌಡ ಚಿಕ್ಕೊಂಡ, ವಿವೇಕ್ ಬ್ರಿಗೇಡ್ ಮುಖ್ಯ ವಿನೂತ ಕಲ್ಲೂರ ಸೇರಿದಂತೆ 10 ಗಣ್ಯರನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಯಿತು.

ಮಾ.8ರಂದು ಪಟ್ಟಣದಲ್ಲಿ ರಂಗ ಪಂಚಮಿ ಆಚರಿಸುವ ಹಿನ್ನಲೆಯಲ್ಲಿ ಶ್ರೀ ಬಸವೇಶ್ವರ ಸೇವಾ ಸಮಿತಿಯ ಪದಾಧಿಕಾರಿಗಳು ಪೂರ್ವಭಾವಿ ಸಭೆ ಕರೆದು ಪಟ್ಟಣದ ವಿವಿಧ ಸಂಘಟನೆಗಳ ಮುಖ್ಯಸ್ಥರು ಹಾಗೂ ಗಣ್ಯರನ್ನು, ಮುಖಂಡರಿಂದ ಅಭಿಪ್ರಾಯ ಸಂಗ್ರಹಿಸಿದರು.

ಸೇವಾ ಸಮಿತಿ ಅಧ್ಯಕ್ಷ ಈರಣ್ಣ. ಚ ಪಟ್ಟಣಶೆಟ್ಟಿ ಮಾತನಾಡಿ, ಪಟ್ಟಣದ ಸರ್ವ ಸಮಾಜದವರು ಈ ಬಾರಿ ರಂಗಪಂಚಮಿಯಲ್ಲಿ ಭಾಗವಹಿಸುವುದರ ಮೂಲಕ ಖುಷಿ ಖುಷಿಯಾಗಿರೋಣ. ಯಾವುದೇ ಅಹಿತಕರ ಘಟನೆ ಜರುಗದಂತೆ ನಾವೆಲ್ಲರೂ ಎಚ್ಚರವಹಿಸೋಣ ಎಂದರು.

ನಿ.ಶಿಕ್ಷಕಿ ಎಂ.ಜಿ ಆದಿಗೊಂಡ ಮಾತನಾಡಿ, ಕಳೆದ ವರ್ಷ ಹಲಗೆ ಮೇಳ ಆಚರಿಸಿದ ಸಮಿತಿಯು ಈ ಬಾರಿ ರಂಗ ಪಂಚಮಿ ಆಚರಿಸಲು ಮುಂದಾಗಿದೆ. ಎಂದರು. ಪಟ್ಟಣದ ಸಿದ್ದಲಿಂಗಸ್ವಾಮೀಜಿ ಮಾತನಾಡಿದರು.

ವಿವೇಕ್ ಬ್ರಿಗೇಡ್ ಮುಖ್ಯಸ್ಥ ವಿನೂತ ಕಲ್ಲೂರ, ಪರಶುರಾಮ ಜಮಖಂಡಿ, ಡಾ. ಬಸವರಾಜ ಚವ್ಹಾಣ, ಡಾ. ಕರುಣಾಕರ ಚೌಧರಿ, ಶಬ್ಬೀರ್, ಜಗದೀಶ ಕೊಟ್ರಶೆಟ್ಟಿ, ಜಗದೇವಿ ಗುಂಡಳ್ಳಿ ರಂಗ ಪಂಚಮಿಯನ್ನು ವಿಶೇಷವಾಗಿ ಸರ್ವರೂ ಆಚರಿಸಲು ಸಹಕರಿಸೋಣ ಎಂದರು.

ಈ ಸಂದರ್ಭದಲ್ಲಿ ಸಂಗಣ್ಣ ಕಲ್ಲೂರ, ಬಸವರಾಜ ಗೊಳಸಂಗಿ, ವ್ಹಿ.ಕೆ ಕಲ್ಯಾಣಶೆಟ್ಟಿ, ಸಿ.ಎಸ್ ಪಾಟೀಲ, ರವಿ ರಾಠೋಡ, ಸಿದ್ದಣ್ಣ ಕಲ್ಲೂರ, ಸಂಗಯ್ಯ ಕಾಳಹಸ್ತೇಶ್ವರಮಠ, ಮುಂಜಾನೆ, ಶಿವಪುತ್ರ ಕೆಂಭಾವಿ, ಜಟ್ಟಿಂಗರಾಯ ಮಾಲಗಾರ, ಎನ್. ಎಸ್ ಹೂಗಾರ, ಕೆ.ಎಸ್ ಅವಟಿ, ಮಹಾದೇವಿ ಬಿರಾದಾರ, ಸಂಗಮೇಶ ಓಲೇಕಾರ, ಸೇರಿದಂತೆ ಪಟ್ಟಣದ ಅನೇಕ ಸಂಘಟನೆಗಳ ಮುಖ್ಯಸ್ಥರು, ಮುಖಂಡರು ಹಾಜರಿದ್ದರು.

ಸಮಿತಿಗೆ ನೇಮಕ: ಶ್ರೀ ಬಸವೇಶ್ವರ ಸೇವಾ ಸಮಿತಿಗೆ ನೂತನವಾಗಿ ನಿರ್ದೇಶಕರನ್ನಾಗಿ ಗೋಪಾಲ ಅಗರವಾಲ, ಸುರೇಶಗೌಡ ಪಾಟೀಲ, ಸಂಕನಗೌಡ ಪಾಟೀಲ, ಉಮೇಶ ಹಾರಿವಾಳ, ಎಸ್.ಆರ್ ಗೊಳಸಂಗಿ, ರವಿ ಚಿಕ್ಕೊಂಡ, ವಿನೂತ ಕಲ್ಲೂರ, ಡಾ.ಬಸವರಾಜ ಕೋಟಿ ಜಗದೇವಿ ಗುಂಡಳ್ಳಿ ಹಾಗೂ ರಮೇಶ ಯಳಿಮೇಲಿ ಅವರನ್ನು ಆಯ್ಕೆ ಮಾಡಿ ಸನ್ಮಾನಿಸಲಾಯಿತು.

# ಶ್ರೀಶೈಲ ಮಲ್ಲಯ್ಯ ಪಾದಯಾತ್ರಿಕರಿಗೆ ಉಚಿತ ಸೇವೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದ ಶ್ರೀನಿವಾಸ ಔಷಧ ಅಂಗಡಿ ಮಾಲೀಕ ರಾಘವೇಂದ್ರ ಸುರಪುರ ಅವರು ಶ್ರೀ ಶೈಲ ಮಲ್ಲಯ್ಯಸ್ವಾಮಿ ಧರ್ಶನಕ್ಕೆ ಪಾದಯಾತ್ರಿಕರಿಗೆ ಪ್ರತಿ ವರ್ಷದಂತೆ ಈ ವರ್ಷ ಕೂಡ ಉಚಿತವಾಗಿ ದ್ರಾಕ್ಷಿ, ಬಾಳೆ ಹಣ್ಣು, ಮಜ್ಜಿಗೆ, ರಸನಾ, ಶರಬತ್, ನೀರು, ಕೆಲವು ಚಿಕಿತ್ಸೆಯ ಔಷಧಿ ಸೇರಿದಂತೆ ವಿವಿಧ ತಂಪು ಪಾನೀಯಗಳನ್ನು ವಿತರಣೆ ಮಾಡಿದರು.

ಯುಗಾದಿ ಹಬ್ಬ ಪ್ರಯುಕ್ತ ಐದು ದಿನಗಳ ಕಾಲ ಶ್ರೀಶೈಲ ಮಲ್ಲಯ್ಯಸ್ವಾಮಿ ಪಾದಯಾತ್ರಿಗಳ ಉಚಿತ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾಜ್ಯದ ಮೂಲೆ ಮೂಲೆಗಳಿಂದ ಸಹಸ್ರಾರು ಭಕ್ತಾದಿಗಳು ಶ್ರೀಶೈಲ ಮಲ್ಲಯ್ಯ ಸ್ವಾಮಿ ದರ್ಶನ ಪಡೆಯಲು ಪಾದಯಾತ್ರೆ ಕೈಗೊಂಡ ಭಕ್ತರಿಗೆ ಈ ಸೇವೆ ಅನುಕೂಲಕರವಾಗಿದೆ. ಪಾದಯಾತ್ರೆಯಲ್ಲಿ ವಿಶ್ರಾಂತಿಗಾಗಿ ಹಾಗೂ ದಾಹ ನೀಗಿಸುವ ನಿಟ್ಟಿನಲ್ಲಿ ತಂಪು ಪಾನೀಗಳನ್ನು ಹಾಗೂ ಹಣ್ಣುಗಳ ಉಚಿತ ಪೂರೈಕೆಯನ್ನು ಸತತ 17 ವರ್ಷದಿಂದ ಈ ಸೇವೆ ಜರುಗುತ್ತದೆ. ಪಾದಯಾತ್ರಿಗಳ ಸೇವೆಯಿಂದ ನಮ್ಮ ಮನಸ್ಸಿಗೆ ಆನಂದವಾಗಿದೆ ಎಂದು ಸೇವಾರ್ಥಿಗಳ ಅನಿಸಿಕೆಯಾಗಿದೆ. ಸೇವೆಯು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಪಾದಯಾತ್ರಿಕರೂ ಸೇವೆಗೆಯುತ್ತಿರುವ ಹರಸಿ ಸದಾ ಹೀಗೆ ಇರಲಿ ಎಂದು ಶುಭ ಹಾರೈಸಿದರು.

ಟಿ.ವಿ ಬದ್ರಿನಾಥ್, ಡಾ!ಬಸವರಾಜ್ ಜೆರ್ಕಲ್, ಬಾಳಪ್ಪ ಆರ್ಯರು, ಪಾಷಾ ಎಲೆಕ್ಟ್ರಿಕಲ್, ವಿರುಪಾಕ್ಷ ಹೂಗಾರ, ಶ್ರೀಲೇಶ ಜೀನಗಾರ, ಮಂಜುನಾಥ ವಂದಾಲಿ, ಹಾರ್ಡ್ವೇರ ಅನಂತ, ಸಂದೀಪ್ ಪಾಟೀಲ್ ಸೇರಿದಂತೆ ಇತರರಿದ್ದರು.

# ಸ್ಮರಣೀಯ ಸೇವೆಗೆ ಆತ್ಮೀಯ ಬೀಳ್ಕೊಡುಗೆ: ಜಗದೀಶ ನಾಯಕ



• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ ಅಂಕೋಲಾ ವತಿಯಿಂದ ವಯೋನಿವೃತ್ತಿಯನ್ನು ಹೊಂದಿದ ಶಿಕ್ಷಕಿಯರನ್ನು ಗೌರವಿಸಿ, ಬೀಳ್ಕೊಡುವ ಕಾರ್ಯಕ್ರಮ ಅಗಸೂರಿನ ಶಿಕ್ಷಕಿ ರಮಾ ನಾಯಕರ ಮನೆಯಂಗಳದಲ್ಲಿ ನಡೆಯಿತು. ಕೆಪಿಎಸ್ ಅಗಸೂರು (ಪ್ರಾಥಮಿಕ ವಿಭಾಗ) ದ ಮುಖ್ಯಾಧ್ಯಾಪಕರಾಗಿ ಸೇವೆ ಸಲ್ಲಿಸಿ ವಯೋನಿವೃತ್ತಿಯನ್ನು ಹೊಂದಿದ ರಮಾ ಹಮ್ಮಣ್ಣ ನಾಯಕ ಹಾಗೂ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಒಕ್ಕಲಕೇರಿ ಹಾರವಾಡದಲ್ಲಿ ವಯೋ ನಿವೃತ್ತಿಯನ್ನು ಹೊಂದಿದ ಆಶಾಲತಾ ವರ್ಣೇಕರ ರವರನ್ನು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಅಂಕೋಲಾ ಘಟಕದಿಂದ ಸನ್ಮಾನಿಸಿ, ಗೌರವಿಸಿ ಬೀಳ್ಕೊಡಲಾಯಿತು.

ವಿಶ್ರಾಂತ ಶಿಕ್ಷಕಿಯರನ್ನು ಗೌರವಿಸಿ ಮಾತನಾಡಿದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಅಂಕೋಲಾ ತಾಲೂಕು ಘಟಕದ ಅಧ್ಯಕ್ಷ ಜಗದೀಶ ಜಿ ನಾಯಕ ಹೊಸ್ಕೇರಿ ವಯೋನಿವೃತ್ತಿಯನ್ನು ಹೊಂದಿರುವ ಪ್ರತಿಭಾವಂತ ಶಿಕ್ಷಕಿಯರಿರ್ವರನ್ನು ಇಂದು ಸಂಘದಿಂದ ಸನ್ಮಾನಿಸಿ, ಬಿಳ್ಕೊಡುತ್ತಿದ್ದೇವೆ. ಇವರ ಸೇವೆ ಶಿಕ್ಷಣ ಕ್ಷೇತ್ರದಲ್ಲಿ ಸ್ಮರಣೀಯವಾದುದು. ಸುದೀರ್ಘ ವಸಂತಗಳ ಕಾಲ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನದ ಬೆಳಕನ್ನು ನೀಡಿ ಅವರು ಬದುಕು ಕಟ್ಟಿಕೊಳ್ಳುವಂತೆ ಪ್ರೇರೇಪಿಸಿ ವಯೋನಿವೃತ್ತಿಯನ್ನು ಹೊಂದಿದ್ದಾರೆ. ತಮ್ಮ ಶಿಕ್ಷಕ ವೃತ್ತಿಯಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದ ಇವರು ಕರ್ತವ್ಯವೇ ದೇವರೆಂದು ಭಾವಿಸಿದವರು. ನೋವಿನಲ್ಲೂ ನಗುವನ್ನು ಹಂಚಿದವರು. ಇವರ ವೃತ್ತಿ ನಿಷ್ಠೆ ಶಿಕ್ಷಕರಿಗೆ ಮಾದರಿಯಾದುದು ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕೇ.ಪಿ.ಎಸ್. ಅಗಸೂರು (ಪ್ರಾಥಮಿಕ ವಿಭಾಗ)ದ ವಿಶ್ರಾಂತ ಮುಖ್ಯಾಧ್ಯಾಪಕಿ ರಮಾ ಹಮ್ಮಣ್ಣ ನಾಯಕ ಹಾಗೂ ಹಾರವಾಡ ಒಕ್ಕಲಕೇರಿ ಕಿರಿಯ ಪ್ರಾಥಮಿಕ ಶಾಲೆಯ ವಿಶ್ರಾಂತ ಶಿಕ್ಷಕಿ ಆಶಾಲತಾ ವರ್ಣೇಕರ ಮಾತನಾಡಿ ಶಿಕ್ಷಕ ವೃತ್ತಿಯಲ್ಲಿ ನಾವು ಸಲ್ಲಿಸಿದ ಸೇವೆ ನಮಗೆ ತೃಪ್ತಿಯನ್ನು ತಂದಿದೆ. ಎಲ್ಲ ವೃತ್ತಿ ಗಿಂತ ಶ್ರೇಷ್ಠವಾದ ವೃತ್ತಿ ಶಿಕ್ಷಕರ ವೃತ್ತಿ. ನಿಷ್ಠೆಯಿಂದ ಕೆಲಸ ಮಾಡಿದ ಆತ್ಮ ತೃಪ್ತಿ ತಮಗಿದೆ. ನಮ್ಮ ಬಳಗದವರು ನಮ್ಮನ್ನು ಸನ್ಮಾನಿಸಿ, ಗೌರವಿಸಿ, ಬೀಳ್ಕೊಟ್ಟಿರುವುದು ನಮ್ಮ ಜೀವನದಲ್ಲಿ ಮರೆಯಲಾಗದ ಸುಂದರವಾದ ಕ್ಷಣವಾಗಿದೆ. ವೃತ್ತಿ ಸಾರ್ಥಕತೆಯನ್ನು ತಂದಿದೆ. ನಮ್ಮ ಸಂಘದ ಇಂತಹ ವಿಧೇಯಕ ಕಾರ್ಯಗಳು ನಿರಂತರವಾಗಿ ಮುಂದುವರೆಯಲಿ ಎಂದರು.

ಹಿರಿಯ ಶಿಕ್ಷಕರಾದ ಶ್ರೀನಿವಾಸ ಎಚ್ ನಾಯಕ, ವೇಲಾಯುದ ನಾಯರ, ಜಯಶೀಲ ಆಗೇರ ಶಾಲಾ ಶಿಕ್ಷಣ ಇಲಾಖೆಯ ನೌಕರರ ಸಂಘದ ತಾಲೂಕು ಕಾರ್ಯದರ್ಶಿ ನಮ್ರತಾ ನಾಯಕ ಅಭಿನಂದಿಸಿ ಮಾತನಾಡಿದರು. ಶಿಕ್ಷಕರ ಸಂಘದ ಪದಾಧಿಕಾರಿಗಳಾದ ದಿವಾಕರ ದೇವನಮನೆ, ತುಕಾರಾಮ ಬಂಟ, ವೆಂಕಮ್ಮ ಬಿ. ನಾಯಕ, ವಿನಾಯಕ ಪಿ. ನಾಯ್ಕ, ಆನಂದು ವಿ. ನಾಯ್ಕ, ಶಿಕ್ಷಕರಾದ ಅಶೋಕ ಬಲೆಗಾರ, ಸಣ್ಣಪ್ಪ ನಾಯಕ, ಕೆ.ಪಿ.ಎಸ್. ಶಾಲಾ ಶಿಕ್ಷಕ ಶ್ರೀನಿವಾಸ ನಾಯಕ, ಚಂದ್ರು ಎಮ್ ಗೌಡ, ಸಂತೋಷ ಎನ್. ನಾಯಕ, ರೋಹಿದಾಸ ಬಂಟ ಮುಂತಾದವರು ಉಪಸ್ಥಿತರಿದ್ದರು.

ಅಂಕೋಲಾ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ರಾಜು ಎಚ್. ನಾಯಕ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಸಂಘದ ಉಪಾಧ್ಯಕ್ಷ ಮಂಜುನಾಥ ವೆಂಕಟರಮಣ ನಾಯಕ ಅಭಿನಂದನಾ ಮಾತುಗಳೊಂದಿಗೆ ವಂದಿಸಿದರು. ವಿಶ್ರಾಂತ ಶಿಕ್ಷಕರಾದ ಬೀರಣ್ಣ ನಾಯಕ, ರಂಜನಾ ಬಿ. ನಾಯಕ ಸಹಕರಿಸಿದರು.

## ಬಾಲ್ಯವಿವಾಹ ತಡೆಗೆ ಜಾಗೃತಿ ಕಾರ್ಯಕ್ರಮ

# 25 ವಿವಿಧ ಇಲಾಖೆ ಮಳಿಗೆಗಳ ಪ್ರದರ್ಶನ 7 ರಂದು ಕಾನೂನು ಸಾಕ್ಷರತೆ, ಆರೋಗ್ಯ ಶಿಬಿರ : ನ್ಯಾ.ವಿಜಯ್

- ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ



ಬಾಗಲಕೋಟೆಯನ್ನು ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸುವ ನಿಟ್ಟಿನಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಮಾರ್ಚ 7 ರಂದು ಇಳಕಲ್ಲಿನಲ್ಲಿ ಬೃಹತ್ ಪ್ರಮಾಣದ ಕಾನೂನು ಸಾಕ್ಷರತಾ ಹಾಗೂ ಮೇಗಾ ಆರೋಗ್ಯ ಶಿಬಿರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎನ್.ವಿ.ವಿಜಯ್ ಹೇಳಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿಯಲ್ಲಿ ಶುಕ್ರವಾರ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಬಾಲ್ಯವಿವಾಹ ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಇದನ್ನು ಸಂಪೂರ್ಣವಾಗಿ ತಡೆಯುವ ನಿಟ್ಟಿನಲ್ಲಿ ಜನರಲ್ಲಿ ಕಾನೂನು ಸಾಕ್ಷರತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇಲಕಲ್ಲಿನಲ್ಲಿನ ಬಾಬುಜಗಜೀವನರಾಂ ಸಭಾಭವನದಲ್ಲಿ ಕಾರ್ಯಕ್ರಮ ಜರುಗಲಿದ್ದು, ಕರ್ನಾಟಕ ಹೈಕೋರ್ಟನ ಮುಖ್ಯ ನ್ಯಾಯಮೂರ್ತಿ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಧಾನ ಪೋಷಕರಾದ ವಿಭು ಬಕ್ರು ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ಹೈಕೋರ್ಟನ ನ್ಯಾಯಮೂರ್ತಿಗಳು ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರಾದ ಅನು ಶಿವರಾಮನ್, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಬಾಗಲಕೋಟೆ ಜಿಲ್ಲೆಯ ಆಡಳಿತ ನ್ಯಾಯಾಧೀಶರಾದ ಜ್ಯೋತಿ ಎಂ ಹಾಗೂ ಕರ್ನಾಟಕ ಹೈಕೋರ್ಟನ ನ್ಯಾಯಾಧೀಶರಾದ ಹಂಚಾಟಿ ಸಂಜೀವಕುಮಾರ ಪಾಲ್ಗೊಳ್ಳಲಿದ್ದಾರೆ. 25 ವಿವಿಧ ಮಳಿಗೆಗಳನ್ನು ಹಾಕಲಾಗುತ್ತಿದೆ. ಇದರ ಜೊತೆಗೆ ಆರೋಗ್ಯ ಶಿಬಿರ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಶಿಧರ ಶೆಟ್ಟಿ ಮಾತನಾಡಿ ಜನರಲ್ಲಿ ಕಾನೂನು ಅರಿವು ಮತ್ತು ಸರಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಮುಟ್ಟಿಸುವ ನಿಟ್ಟಿನಲ್ಲಿ ರಾಜ್ಯ ಮಟ್ಟದ ಕಾರ್ಯಕ್ರಮವನ್ನು ಇಲಕಲ್ಲಿನಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ವಿವಿಧ ಇಲಾಖೆಯ ಮಹಿಳೆಗಳ ಪ್ರದರ್ಶನ ಮೂಲಕ ಸರಕಾರದ ಯೋಜನೆಗಳ ಮಾಹಿತಿ ಹಾಗೂ ಸವಲತ್ತು ಕೊಡಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಜಿಲ್ಲೆಯ ಚಾಡಕಮಲದಿನ್ನಿ, ಚಿಕ್ಕ ಸಿಂಗನಗುತ್ತಿ, ಇಸ್ಲಾಂಪೂರ ಹಾಗೂ ಗೋಪಶ್ಯಾಣಿ ಗ್ರಾಮದಲ್ಲಿರುವ ಒಟ್ಟು 791 ಕುಟುಂಬಗಳ ಸರ್ವೆ ಕಾರ್ಯವನ್ನು ಕಾನೂನು ವಿದ್ಯಾರ್ಥಿಗಳಿಂದ ಮಾಡಿಸಲಾಗಿದೆ. ಪ್ರತಿಯೊಂದು ಕುಟುಂಬಸ್ಥರಿಗೆ ಕಾನೂನು ಅರಿವು ಮೂಡಿಸುವ ಮೂಲಕ ಸರಕಾರದಿಂದ ದೊರೆಯುವ ಸೌಲಭ್ಯಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮುಖ್ಯವಾಗಿ ರೇಷನ್ ಕಾರ್ಡ, ಜನನ ಪ್ರಮಾಣ ಪತ್ರ, ಮರಣ ಪ್ರಮಾಣ ಪತ್ರ, ವೃದ್ಧಾಪ್ಯ ವೇತನ, ವಿಧವಾ ವೇತನ ಹಾಗೂ ಆರೋಗ್ಯ ಕಾರ್ಡ ನಂತರ ಸೌಲಭ್ಯಗಳ ಪಟ್ಟಿ ಮಾಡಿ ಸಂಬಂಧಿಸಿದ ಇಲಖೆಗಳಿಗೆ ಕಳುಹಿಸಿ ಸೌಲಭ್ಯ ಕೊಡಿಸುವ ಕೆಲಸ ಕಾನೂನು ಸೇವಾ ಪ್ರಾಧಿಕಾರದ ಮೂಲಕ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಮೋಹನರಾವ ನೆಲವಡೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ ಉಪಸ್ಥಿತರಿದ್ದರು.

# ಏರ್ ಬಸ್ ಇಂಡಿಯಾ ಟೆಕ್ನಾಲಜಿ ಸೆಂಟರ್ ಉದ್ಘಾಟನೆ

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ನಗರದ ಕಾಡುಗೋಡಿ ಸಮೀಪದ ಟೈಟಾನಿಯಂ ಟೆಕ್ ಪಾರ್ಕ್ ಪ್ರದೇಶದಲ್ಲಿ ಏರ್ ಬಸ್ ಕಂಪನಿ ನಿರ್ಮಿಸಿರುವ ಅತ್ಯಾಧುನಿಕ 'ಏರ್ ಬಸ್ ಇಂಡಿಯಾ ಟೆಕ್ನಾಲಜಿ ಸೆಂಟರ್' ಅನ್ನು ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ವರ್ಚುವಲ್ ಮೂಲಕ ಹಾಜರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಪಾಟೀಲ ಅವರು, ಏರ್–ಬಸ್ ಅಭಿವೃದ್ಧಿಪಡಿಸಿರುವ ಈ ಕೇಂದ್ರದಲ್ಲಿ 5 ಸಾವಿರಕ್ಕಿಂತಲೂ ಹೆಚ್ಚು ಜನರು ಕೆಲಸ ಮಾಡಲು ಅವಕಾಶವಿದೆ. ಇದು ಕಂಪನಿಯ ಎರಡನೇ ಅತಿದೊಡ್ಡ ಡಿಜಿಟಲ್ ಕೇಂದ್ರವಾಗಿದ್ದು, ಜಾಗತಿಕ ಮಟ್ಟದಲ್ಲಿ ಅದರ ಮೂರನೆಯ ನಾವೀನ್ಯತಾ ಕೇಂದ್ರವಾಗಿದೆ. ಇದು ರಾಜ್ಯದಲ್ಲಿ ವೈಮಾಂತರಿಕ್ಷ ಮತ್ತು ರಕ್ಷಣೆ ಹಾಗೂ ಮಾಹಿತಿ ತಂತ್ರಜ್ಞಾನ ವಲಯಗಳ ಬೆಳವಣಿಗೆಗೆ ಮೌಲಿಕ ಕೊಡುಗೆ ನೀಡಲಿದೆ' ಎಂದಿದ್ದಾರೆ.

ರಾಜ್ಯವು ದೇಶದ ವೈಮಾಂತರಿಕ್ಷ ಮತ್ತು ರಕ್ಷಣಾ ವಲಯಗಳಿಗೆ ಶೇಕಡ 60ರಷ್ಟು ಕೊಡುಗೆ ನೀಡುತ್ತಿದ್ದು, ಅಗ್ರಸ್ಥಾನದಲ್ಲಿದೆ. ನಮ್ಮಲ್ಲಿ 400ಕ್ಕೂ ಹೆಚ್ಚು ವೈಮಾಂತರಿಕ್ಷ ಮತ್ತು ರಕ್ಷಣಾ ಕಂಪನಿಗಳಿವೆ. ಏರ್ ಬಸ್ ಕಂಪನಿಯು ಭಾರತದ ಜೊತೆ ವರ್ಷಕ್ಕೆ 1.5 ಬಿಲಿಯನ್ ಡಾಲರ್ ವಹಿವಾಟು ನಡೆಸುತ್ತಿದೆ. ಹಾಗೆಯೇ, ಜಾಗತಿಕ ವಲಯದಲ್ಲಿ ಭಾರತದ 100 ಕಂಪನಿಗಳು ಮುಂಚೂಣಿಯಲ್ಲಿವೆ. ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಇತ್ತೀಚೆಗೆ ಆರಂಭವಾಗಿರುವ ಹೆಲಿಕಾಪ್ಟರ್ ಜೋಡಣೆ ಘಟಕವು 2027ರ ಮಧ್ಯಭಾಗದ ಹೊತ್ತಿಗೆ ತನ್ನ ಪ್ರಪ್ರಥಮ ಹೆಲಿಕಾಪ್ಟರನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ ಎಂದು ಅವರು ಹೇಳಿದ್ದಾರೆ.

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣ ತಾ॥ ಬಸವಕಲ್ಯಾಣ ಜಿ॥ ಬೀದರ

ಸಂಖ್ಯೆಃಪ್ರಾಕೃಪಸಸಬಸವಕಲ್ಯಾಣ/ / 2026 ದಿನಾಂಕ: 28/02/2026

### ಪತ್ರಿಕೆ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣ ತಾ॥ ಬಸವಕಲ್ಯಾಣ ಜಿ॥ ಬೀದರ ಸಂಘದ ಆವರಣದಲ್ಲಿ ನಿರ್ಮಿಸಿರುವ ಮಳಿಗೆಗಳು ಮತ್ತು ಬಸವ ಗಂಜನ ಗೋದಾಮು ಬಹಿರಂಗ ಹರಾಜು ಮೂಲಕ ಬಾಡಿಗೆ ನೀಡಲು ಸಂಘದ ಆಡಳಿತಾಧಿಕಾರಿಗಳು ಪ್ರಕಟಣೆ ನೀಡಿರುತ್ತಾರೆ, ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ನಿಗದಿತ ದಿನಾಂಕದಂದು, ಅಂದರೆ 12-03-2026 ರಂದು 11:00 ಗಂಟೆಗೆ ಸರಿಯಾಗಿ ಹಾಜರಿದ್ದು ಈ ಸಂಘವು ನಿಗದಿಪಡಿಸಿದ ಷರ್ತಿಗೊಳಪಟ್ಟು ಬಹಿರಂಗ ಹರಾಜಿನಲ್ಲಿ ಭಾಗಿಯಾಗಿ ಬಾಡಿಗೆ ಪಡೆಯುವುದು, ಈ ಕುರಿತು ಮಾಹಿತಿಯು ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ | ಬಾಡಿಗೆ ನೀಡುವ ಮಳಿಗೆಗಳ ಸ್ಥಳ | ಬಹಿರಂಗ ಹರಾಜು ಮೂಲಕ ಬಾಡಿಗೆ ನೀಡುವ ಮಳಿಗೆಗಳ/ ಗೋದಾಮು ವಿಸ್ತೀರ್ಣ | ಬಾಡಿಗೆ ನೀಡುವ ಮಳಿಗೆ ಸಂಖ್ಯೆ | ಬಹಿರಂಗ ಹರಾಜಿನ ಸ್ಥಳ, ದಿನಾಂಕ & ಸಮಯ |
|---|---|---|---|---|
| 1 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣದ ಬಸವೇಶ್ವರ ವೃತ್ತದಲ್ಲಿರುವ ಮಳಿಗೆಗಳು | 1. ನೆಲ ಮಹಡಿಯ ಅಂಗಡಿಗಳ ವಿಸ್ತೀರ್ಣ 12x18 ಚ ಅಡಿ | 61,62 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣ ಕಛೇರಿಯ ಆವರಣದಲ್ಲಿ ದಿನಾಂಕ: 12/03/2026 ಸಮಯ: 11:00 ಮುಂಜಾನೆ |
| | | 05x18 ಚ ಅಡಿ | 63,64 | |
| | | 2. ಮೊದಲನೆ ಮಹಡಿಯ ಅಂಗಡಿಗಳ ವಿಸ್ತೀರ್ಣ 12x18 ಚ ಅಡಿ | 36,37,38,42,48,49 ,50,51,52,53,54, 55,56,57,58,59,60 | |
| 2 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣದ ಬಸವ ಗಂಜಿನ ಆವರಣದಲ್ಲಿರುವ ಗೋದಾಮು | 30x120 ಚ ಅಡಿ ಗೋದಾಮು | ನಗರಸಭೆ ನಂ. 27-146(Old) 27-154 (New) | |
| 3. | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಸವಕಲ್ಯಾಣದ ಬೇಟಬಾಲಕುಂದ ಗ್ರಾಮದ ಗೋದಾಮ | 13x24 ಚ ಅಡಿ ಗೋದಾಮು | | |

ಷರತ್ತುಗಳುಃ-

1. ಬಾಡಿಗೆ ಕುರಿತು ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ರೂ. 25,000 /- ಠೇವಣಿಯನ್ನು ಸಂಘದ ಹೆಸರಿನಲ್ಲಿ ಡಿ.ಡಿ/ನಗದು ಹಣ ದಿನಾಂಕ :05/03/2026 ರಿಂದ ದಿನಾಂಕ : 12/03/2026 ರ ಬೆಳ್ಳಿಗೆ 10:00 ಗಂಟೆಯೊಳಗೆ ರಶೀದಿಯನ್ನು ಪಡೆದು ಬಹಿರಂಗ ಹರಾಜಿನಲ್ಲಿ ಭಾಗವಹಿಸುವುದು..
2. ನೆಲಮಹಡಿ/ಮೊದಲನೇ ಮಹಡಿ/ಗೋದಾಮ ಮಗಳಿಗೆಗಳು ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಬಿಡ್ಡಿನ ಮೊತ್ತದ 25% ಹರಾಜಿನ ದಿನಾಂಕದಂದು ಪಾವತಿಸಿ ಉಳಿದ ಹಣವನ್ನು ಹರಾಜು ಆದ ನಂತರ 03 ದಿವಸಗಳ ಒಳಗೆ ಸಂಘಕ್ಕೆ ಪಾವತಿಸಬೇಕು, ಒಂದು ವೇಳೆ ಹರಾಜಿನ ಬಿಡ್ಡ ಮೊತ್ತವನ್ನು ನಿಗದಿತ ದಿನಾಂಕದಂದು ಮರು ಪಾವತಿಸಲು ವಿಫಲವಾದಲ್ಲಿ ತಾವು ಕೊಟ್ಟಿರುವ ಠೇವಣಿ ಮೊತ್ತವನ್ನು ಮುಟ್ಟುಗೊಲು ಹಾಕಿಕೊಳ್ಳಲಾಗುವುದು.
3. ಈ ಮಳಿಗೆಗಳಲ್ಲಿ ಮೌಂಸದ ಅಂಗಡಿ, ಮಧ್ಯದ ಅಂಗಡಿ ಮತ್ತು ಪತ್ತಿನ ಸಹಕಾರಿ ಸಂಘ ಸಂಸ್ಥೆಗಳನ್ನು ಹೊರತುಪಡಿಸಿ ಇತರರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು.
4. ಈ ಮಳಿಗೆಗಳನ್ನು ಬಹಿರಂಗ ಹರಾಜು ಮಾಡುವುದು ಮತ್ತು ಮುಂದೂಡುವುದು ಹಾಗೂ ರದ್ದು ಪಡಿಸುವುದು ಅಂತಿಮ ಅಧಿಕಾರ ಆಡಳಿತ ಅಧಿಕಾರಿಯವರು ಹೊಂದಿರುತ್ತಾರೆ.
5. ಇನ್ನಿತರ ಷರತ್ತುಗಳು ಲೀಲಾವಿನ ಸಮಯದಲ್ಲಿ ಓದಿ ಹೇಳಲಾಗುವುದು.

ತಮ್ಮ ವಿಶ್ವಾಸಿ,

ಆಡಳಿತಾಧಿಕಾರಿಗಳು,
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.
ಬಸವಕಲ್ಯಾಣ ತಾ॥ ಬಸವಕಲ್ಯಾಣ ಜಿ॥ ಬೀದರ

ಮುಖ್ಯ ಕಾರ್ಯನಿರ್ವಾಹಕರು,
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.
ಬಸವಕಲ್ಯಾಣ ತಾ॥ ಬಸವಕಲ್ಯಾಣ ಜಿ॥ ಬೀದರ

# ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ 1500 ಕೋಟಿ: ಖಂಡ್ರೆ



ಬೆಂಗಳೂರು, 2026–27ನೇ ಸಾಲಿನ ಬಜೆಟ್ ನಲ್ಲಿ ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಿಸಲು 1500 ಕೋಟಿ ರೂ. ಘೋಷಿಸಿದ್ದು, ಈ ವರ್ಷ 269 ಕೋಟಿ ಮೀಸಲಿಟ್ಟಿರುವುದನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸ್ವಾಗತಿಸಿದ್ದಾರೆ.

ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ದಾಖಲೆಯ 17 ನೇ ಬಜೆಟ್ ಸರ್ವಸ್ಪರ್ಶಿಯಾಗಿದ್ದು, ಬಡವರ, ಮಧ್ಯಮವರ್ಗದವರ ಏಳಿಗೆಗೆ ಸಮರ್ಪಿತವಾಗಿದೆ. ಮಿಗಿಲ್ಲಿ ವನ್ಯಜೀವಿ ಮಾನವ ಸಂಘರ್ಷ ನಿಗ್ರಹಕ್ಕೆ ಒತ್ತು ನೀಡಿದೆ. ಇದರ ಜೊತೆಗೆ ಈಗಾಗಲೇ ಗ್ರೇಟರ್ ಹೆಸರುಘಟ್ಟ ಸಂರಕ್ಷಿತ ಹುಲ್ಲುಗಾವಲು ಎಂದು ಘೋಷಿಸಿರುವ ಪ್ರದೇಶದ ಅಭಿವೃದ್ಧಿಗೆ ಕ್ರಮ ಕೈಗೊಂಡಿರುವುದು, ಬೆಂಗಳೂರು ಮಹಾನಗರದಲ್ಲಿ ಶ್ವಾಸತಾಣ ಸಂರಕ್ಷಣೆಯ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಚಿರತೆಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರು ಹೊರವಲಯದ ಬನ್ನೇರುಘಟ್ಟದಲ್ಲಿ 5 ಕೋಟಿ ವೆಚ್ಚದಲ್ಲಿ ಚಿರತೆ ಪುನರ್ವಸತಿ ಕೇಂದ್ರ ಸ್ಥಾಪಿಸುತ್ತಿರುವುದೂ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ ಎಂದು ತಿಳಿಸಿದ್ದಾರೆ.

2026–27ರ ಸಾಲಿನಲ್ಲಿ ಅರಣ್ಯ ಇಲಾಖೆಯ ವಿವಿಧ ವೃಂದದಲ್ಲಿ ಖಾಲಿ ಇರುವ ಸುಮಾರು 2,000 ಹುದ್ದೆಗಳ ಭರ್ತಿ ಮಾಡಲಾಗುತ್ತಿದ್ದು, ಇದು ಕೂಡ ಇಲಾಖೆಯ ಸಮಗ್ರ ಕಾರ್ಯವೈಖರಿಯ ಸುಧಾರಣೆಗೆ ಚೈತನ್ಯ ತುಂಬಲಿದೆ ಎಂದು ತಿಳಿಸಿದ್ದಾರೆ.

ವಿಶ್ವವಿಖ್ಯಾತ ಮೈಸೂರು ಚಾಮರಾಜೇಂದ್ರ ಮೃಗಾಲಯ ಮತ್ತು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಪ್ರಕೃತಿ ನಿರೂಪಣಾ ಕೇಂದ್ರ ಸ್ಥಾಪನೆಯ ಕ್ರಮವೂ ಸ್ವಾಗತಾರ್ಹವಾಗಿದೆ ಎಂದರು.

ಜಾಗತಿಕ ತಾಪಮಾನ ಏರಿಕೆ ಹಾಗೂ ಹವಾಮಾನ ಬದಲಾವಣೆಯ ಪ್ರತೀಕೂಲ ಪರಿಣಾಮ ಎದುರಿಸುತ್ತಿರುವ ಪ್ರಸಕ್ತ ಸನ್ನಿವೇಶದಲ್ಲಿ ಶೇ.10ಕ್ಕಿಂತ ಕಡಿಮೆ ಅರಣ್ಯ ಇರುವ ಜಿಲ್ಲೆಗಳಲ್ಲಿ ಸುಮಾರು 75,000 ಹೆಕ್ಟೇರ್ ನಲ್ಲಿ ಅರಣ್ಯೀಕರಣ ಚಟುವಟಿಕೆಗಳಿಗೆ ಕೆ.ಕೆ.ಆರ್.ಡಿ.ಬಿ.ಯ 50 ಕೋಟಿ ರೂ. ಸೇರಿದಂತೆ 150 ಕೋಟಿ ರೂ. ಹಂಚಿಕೆ ಮಾಡಿರುವುದನ್ನು ಈಶ್ವರ ಖಂಡ್ರೆ ಸ್ವಾಗತಿಸಿದ್ದಾರೆ.

ರಾಜ್ಯದ ಜನರಿಗೆ ಶುದ್ಧ ಗಾಳಿಯ ಖಾತ್ರಿಗಾಗಿ ಕರ್ನಾಟಕದಾದ್ಯಂತ 15 ಹೊಸ ಪರಿವೇಷ್ಠಿಕ ನಿರಂತರ ವಾಯು ಗುಣಮಟ್ಟದ ಮಾಪನ ಕೇಂದ್ರಗಳನ್ನು ಸ್ಥಾಪಿಸುತ್ತಿರುವುದು ಅತ್ಯಂತ ಅಗತ್ಯ ಹಾಗೂ ಮಹತ್ವದ ಹೆಜ್ಜೆಯಾಗಿದೆ ಎಂದೂ ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಮಾಗಡಿಯ ಹುಲಿಕಲ್–ಕುದೂರು ಗ್ರಾಮದಲ್ಲಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಸ್ಮಾರಕ ನಿರ್ಮಿಸುತ್ತಿರುವುದು ಪರಿಸರ ಪ್ರೇಮಿಗಳಿಗೆ ಸ್ಫೂರ್ತಿಯ ತಾಣವಾಗಲಿದೆ ಎಂದು ಅವರು ತಿಳಿಸಿದ್ದಾರೆ.

# ಹೊಸಪೇಟೆಯಲ್ಲಿ ರಸ್ತೆ ಅಪಘಾತ ಬೈಕ್ ಸವಾರ ಸಾವು

- ಮಲ್ಲಮ್ಮ ನುಡಿ ವಾರ್ತೆ ವಿಜಯನಗರ



ಹೋಳಿ ಹಬ್ಬ ಸಂಭ್ರಮಿಸಿದ ಆಚರಣೆ ದಿನದಂದು ಬುಧವಾರ ಎರಡು ಬೈಕ್ ನಡುವೆ ಭೀಕರ ರಸ್ತೆ ಅಪಘಾತ ಸಂಭವಿಸಿ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಹೊಸಪೇಟೆ ತಾಲೂಕಿನ ಗೋಪಿನಾಥ್ ಸ್ಕೂಲ್ ಪಕ್ಕದ ಹೈವೇ ರಸ್ತೆ ಕನಕ ವೃತ್ತದಿಂದ ಹುಡಾ ಕಛೇರಿ ಮಧ್ಯ ಭಾಗದಲ್ಲಿ ಬಳಿ ನಡೆದಿದೆ.


ವಿಜಯನಗರ ಜಿಲ್ಲೆಯ ಹೊಸಪೇಟೆ ಪಟ್ಟಣದ ನಿವಾಸಿ ವೀರಾಂಜಿನೇಯ ಅಪಘಾತದಲ್ಲಿ ಮೃತಪಟ್ಟವರು. ಹಾಗೂ ಕೆ.ಟಿ,ಎಂ ಮೊಟಾರ್ ಸೈಕಲ್ ಮಂಜುನಾಥ ಹಿಂದೆ ಕುಮಾರ್ ಎಂಬುವವರನ್ನು ಕೂಡಿಸಿಕೊಂಡು ತನ್ನ ಮೊಟಾರ್ ಸೈಕಲ್ ನ್ನು ಅತಿವೇಗ ಹಾಗು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ವಿರಾಂಜೀನೇಯ ರವರ ಸ್ಕೂಟರ್ ಗೆ ಡಿಕ್ಕಿ ಹೊಡಿಸಿ ಅಪಘಾತ ಪಡಿಸಿದ್ದರಿಂದ ಎರಡೂ ಬೈಕ್ ನಲ್ಲಿದ್ದವರು ಕೆಳಗೆ ಬಿದ್ದು ಅಪಘಾತವಾಗಿದ್ದು ಈ ಅಪಘಾತದಿಂದ ಸ್ಕೈಟರ್ ಚಾಲಕ ವಿರಾಂಜೀನೇಯ ರವರಿಗೆ ತಲೆಗೆ ಭಾರಿ ರಕ್ತಗಾಯವಾಗಿ ಮೂಗಿನಲ್ಲಿ ರಕ್ತ ಬಂದು ಎಡಪಕ್ಕೆಗೆ ತೆರೆಚಿದ ಗಾಯವಾಗಿದ್ದು, ಅಪಘಾತಪಡಿದ ಮಂಜುನಾಥ ನಿಗೆ ಬಲಕಾಲಿಗೆ ರಕ್ತಗಾಯವಾಗಿದ್ದು, ಹಿಂದೆ ಕುಳಿತ್ತಿದ್ದ ಕುಮಾರ್ ರವರಿಗೆ ತಲೆಗೆ ರಕ್ತಗಾಯವಾಗಿದ್ದು, ಈ ಅಪಘಾತದಿಂದ ಎರಡೂ ಮೊಟಾರ್ ಸೈಕಲ್ ಗಳು ಜಖಂ ಆಗಿದ್ದು, ನಂತರ ಅಪಘಾತ ನೋಡಿದ ಪೆನ್ನ ಓಬಳೇಶ ಮತ್ತು ಹೊನ್ನೂರಪ್ಪ ಸೇರಿ ಗಾಯಗೊಂಡವರನ್ನು ಒಂದು ಅಟೋದಲ್ಲಿ ಹಾಕಿಕೊಂಡು ಹೊಸಪೇಟೆ ಸರ್ಕಾರಿಅಸ್ಪತ್ರೆಗೆ ಸಂಜೆ 4–00 ಗಂಟೆಗೆ ಕರೆದುಕೊಂಡು ಹೋಗಿ ತೋರಿಸಲು ವೈದ್ಯರು ಪರೀಕ್ಷಿಸಿ ವಿರಾಂಜೀನೇಯ ರವರು ದಾರಿಮದ್ಯದಲ್ಲಿ ಮೃತಪಟ್ಟಿರುತ್ತಾರೆಂದು ತಿಳಿಸಿದ್ದರು ಗಾಯಾಳುಗಳು ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು. ದೂರುದಾರರು ಅವರ ಮನೆಯವರೊಂದಿಗೆ ಮಾತನಾಡಿಕೊಂಡು, ನಂತರ ಠಾಣೆಗೆ ಬಂದು ವಿರಾಂಜೀನೇಯ ರವರಿಗೆ ಬೈಕ್ ಅಪಘಾತ ಪಡಿಸಿ ಅವರ ಸಾವಿಗೆ ಕಾರಣರಾದ ಆರೋಪಿ ಮಂಜುನಾಥ ರವರ ವಿರುದ್ಧ ದೂರು ನೀಡಿದ ಮೇರೆಗೆ ಹೊಸಪೇಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಿಲಿಸಿ ಕ್ರಮ ಕೈಗೊಂಡಿದೆ.

# ಮದ್ಯ ಮಾರಾಟ ನಿಷೇಧ

- ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ಜಿಲ್ಲೆಯ ಹಡಗಲಿ ಪಟ್ಟಣದಲ್ಲಿ ಮಾರ್ಚ್ 7 ರಿಂದ ಮಾರ್ಚ್ 10ರವರೆಗೆ ಶ್ರೀ ಯಮನೂರು ಸ್ವಾಮಿ ಹಜರತ್ ರಾಜ್‌ಬಾಗ್ ಸವಾರ್ ಉರುಸ್ ನಡೆಯಲಿದೆ. ಈ ಪ್ರಯುಕ್ತ ಪಟ್ಟಣದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ಜರುಗದಂತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಠಿಯಿಂದ ಮಾರ್ಚ್ 7 ರ ಬೆಳಿಗ್ಗೆ 6 ಗಂಟೆಯಿಂದ ಮಾರ್ಚ್ 10ರಂದು ಬೆಳಗ್ಗೆ 6 ರವರೆಗೆ ಮದ್ಯ ಮಾರಾಟ ಮತ್ತು ಸಾಗಾಣೆ ಮಾಡದಂತೆ ಹಾಗೂ ಮದ್ಯದಂಗಡಿ ಮುಚ್ಚುವಂತೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಆದೇಶೀಸಿದ್ದಾರೆ.

# ಕಾಕುಬಾಳನಲ್ಲಿ ಅಕ್ರಮ ಪಡಿತರ ಅಕ್ಕಿ ವಶ



- ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಬಡವರ ಹೊಟ್ಟೆ ತುಂಬಿಸಲು ಜಾರಿಗೆ ತಂದ ಅನ್ನಭಾಗ್ಯ ಯೋಜನೆಯ ಅಕ್ಕಿ ದಂಧೆಕೋರರು ಅಕ್ರಮವಾಗಿ ಸಂಗ್ರಹಿಸಿದ್ದ ಪಡಿತರ ಅಕ್ಕಿಯನ್ನು ಆಹಾರ ನಿರೀಕ್ಷಕರು ಅಧಿಕಾರಿಗಳು ವಶಕ್ಕೆ ಪಡೆದು–ಕೊಂಡಿದ್ದಾರೆ.

ಹೊಸಪೇಟೆ ತಾಲ್ಲೂಕ ಕಾಕುಬಾಳು ಗ್ರಾಮದ ಹುಲಿಗೆಮ್ಮನವರ ಮನೆಯ ಮುಂದೆ 152 ಬಿಳಿ ಬಣ್ಣದ ಪ್ಲಾಸ್ಟಿಕ್. ಪ್ಲಾಸ್ಟೀಕ್ ಚೀಲಗಳಲ್ಲಿ ತುಂಬಿದ್ದ ರೂ–2,10,368/– ಮೌಲ್ಯದ 6080 ಕೆ.ಜಿ. ಪಡಿತರ ಅಕ್ಕಿಯನ್ನು ಹಾಗೂ ಸದರಿ ಮುದ್ದೆ ಮಾಲಿನ ಪೈಕಿ 1 ಕೆ.ಜಿಯಷ್ಟು ಸ್ಯಾಂಪಲ್ ಅಕ್ಕಿಯನ್ನು ಪಂಚನಾಮೆ ಮೂಲಕ ಜಪ್ತಿ ಮಾಡಿದ್ದಾರೆ.

ಕಾಕುಬಾಳ್ ಗ್ರಾಮದ ಜೋಗದ ರಸ್ತೆಯಲ್ಲಿರುವ ಕರಿಯಮ್ಮನಗುಡಿ ಹತ್ತಿರ ಮನೆಯ ಹತ್ತಿರ ಆರೋಪಿಗಳು, ಸಾರ್ವಜನಿಕರಿಗೆ ಸರ್ಕಾರದ ವತಿಯಿಂದ ವಿವಿಧ ಯೋಜನೆಗಳಡಿಯಲ್ಲಿ ಉಚಿತವಾಗಿ ವಿತರಣೆ ಮಾಡುವ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿರುತ್ತಾರೆಂದು ಖಚಿತ ಭಾತ್ಮೀ ಮಾಹಿತಿ ನೀಡಿದ ಮೇರೆಗೆ ಠಾಣೆಗೆ ಬಂದು ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ನೀಡಿದ ದೂರು ಸಾರಾಂಶದ ಮೇರೆಗೆ ಗ್ರಾಮೀಣ ಪೊಲೀಸ್ ಠಾಣೆ, ಹೊಸಪೇಟೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

# ರೂ.1,085 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ

ಇತಿಹಾಸದಲ್ಲೇ ಹಿಂದೆಂದೂ ಕಂಡರಿಯದ ರೀತಿಯಲ್ಲಿ ರೂ.1,085 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅಡಿಗಲ್ಲು ಹಾಗೂ ಲೋಕಾರ್ಪಣೆ ಸಮಾರಂಭವನ್ನು ಪಟ್ಟಣದ ಮಳಖೇಡ ರಸ್ತೆಯ ಸೇಂದಿ ಡಿಪೋ ಮೈದಾನದಲ್ಲಿ ಮಾ.8 ರಂದು ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಈ ಸಮಾರಂಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಕಾರ್ಯಕ್ರಮಕ್ಕೆ ಬರಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಹಾಗೂ ಪಿ ಎಲ್ ಡಿ ಬ್ಯಾಂಕ್ ಅಧ್ಯಕ್ಷ ಭೀಮಣ್ಣ ಸಾಲಿ ಹೇಳಿದರು.

ಪಟ್ಟಣದ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ಶಾಸಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಲ್ಬುರ್ಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಮಾರಂಭಕ್ಕೆ ರಾಜ್ಯಸಭಾ ವಿಪಕ್ಷ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆಗಮಿಸಲಿದ್ದಾರೆ. ಈ



ಸಮಾರಂಭದಲ್ಲಿ ಸುಮಾರು 15 ಸಾವಿರ ಜನರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಅಲ್ಲದೇ ಕಲಬುರಗಿ ಜಿಲ್ಲೆಯ ಶಾಸಕರು, ನಿಗಮ ಮಂಡಳಿಯ ಅಧ್ಯಕ್ಷರುಗಳು ಮತ್ತು ಮುಖಂಡರು ಭಾಗವಹಿಸುತ್ತಾರೆ. ಹೀಗಾಗಿ ಚಿತ್ತಾಪುರ ಕ್ಷೇತ್ರದ ಪ್ರತಿಯೊಂದು ಹಳ್ಳಿಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಮೇಶ್ ಮರಗೋಳ ಮಾತನಾಡಿ, ಸಚಿವ ಪ್ರಿಯಾಂಕ್ ಖರ್ಗೆ ಅವರು ಕ್ಷೇತ್ರದ ಅಭಿವೃದ್ಧಿಗೆ 1085 ಕೋಟಿ ಅನುದಾನ ತಂದಿದ್ದು, ಇದರಲ್ಲಿ ರೂ.1,000 ಕೋಟಿ ವೆಚ್ಚದ ಹೊಸ ಕಾಮಗಾರಿಗಳಿಗೆ ಅಡಿಗಲ್ಲು ಹಾಕುವ ಮೂಲಕ ಕ್ಷೇತ್ರದ ಚಿತ್ರಣವನ್ನೇ ಬದಲಾಯಿಸಲಿದ್ದಾರೆ ಹಾಗೂ ರೂ.85 ಕೋಟಿ ಮೊತ್ತದ ವಿವಿಧ ಜನಪರ ಯೋಜನೆಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ. ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಲಿದ್ದು ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಬೇಕು ಎಂದು ಹೇಳಿದರು.

ಕೆಪಿಸಿಸಿ ಸದಸ್ಯ ನಾಗರೆಡ್ಡಿ ಪಾಟೀಲ ಕರದಾಳ ಮಾತನಾಡಿ, ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಗೆ ಸಚಿವರು ಸುಮಾರು 500 ಕೋಟಿ ರೂ. ಮೊತ್ತದ ಅನುದಾನ ಬಿಡುಗಡೆ ಮಾಡಿದ್ದಾರೆ. ಹಾಗೂ ದಂಡೋತಿ ಕಾಗಿಣಾ ನದಿ ಬ್ರಿಜ್, ಹೊನಗುಂಟಿ ಬ್ರಿಜ್ ಅಡಿಗಲು, ಸರ್ಕಾರಿ ಕನ್ಯಾ ಮಾದರಿ ಪ್ರಾಥಮಿಕ ಹಾಗೂ ಪ್ರೌಢಶಾಲೆ ಮತ್ತು ವಿಜ್ಞಾನ ಕೇಂದ್ರ ಸೇರಿದಂತೆ ಹತ್ತಾರು ಕಾಮಗಾರಿಗಳ ಅಡಿಗಲ್ಲು ಹಾಗೂ ಲೋಕಾರ್ಪಣೆ ಸಮಾರಂಭ ನಡೆಯಲಿದೆ. ರೂ.1085 ಕೋಟಿ ಇಷ್ಟು ದೊಡ್ಡ ಮೊತ್ತದ ಅನುದಾನ ಬಿಡುಗಡೆ ಮಾಡಿ ಚಿತ್ತಾಪುರ ಕ್ಷೇತ್ರದ ಅಭಿವೃದ್ಧಿಯ ನಕ್ಷೆಯನ್ನು ಬದಲಾಯಿಸಿದ ಕೀರ್ತಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಸುನೀಲ್ ದೊಡ್ಡಮನಿ, ಜಿಪಂ ಮಾಜಿ ಸದಸ್ಯರಾದ ಶಿವಾನಂದ ಪಾಟೀಲ್, ಶಿವರುದ್ರಪ್ಪ ಭೀಣ್ಣಿ, ಪ್ರಮುಖರಾದ ಜಗಣ್ಣಗೌಡ ರಾಮತೀರ್ಥ, ನಾಗರೆಡ್ಡಿ ಗೋಪಸೇನ್, ವೀರುಪಾಕ್ಷಪ್ಪ ಗಡ್ಡದ್, ಚಂದ್ರಶೇಖರ ಕಾಶಿ, ಶಾಂತಣ್ಣ ಚಾಳೀಕಾರ, ನಾಗಯ್ಯ ಗುತ್ತೇದಾರ, ಮಲ್ಲಪ್ಪ ಹೊಸಮನಿ, ಮಹಾಂತಗೌಡ ದಂಡಗುಂಡ, ಶರಣಪ್ಪ ನಾಟಿ–ಕಾರ್, ದೇವು ಯಾಬಾಳ, ಸಂಜಯ ಬುಳಕರ್, ಮಾನೇಶ್ ದಂಡಗುಂಡ, ಬಸ್ಸುಗೌಡ ದಂಡಗುಂಡ, ವಿನ್ನುಕುಮಾರ ಜಡಿ, ಶರಣು ಡೋಣಗಾಂವ, ರವಿಸಾಗರ ಹೊಸಮನಿ, ರಾಜಣ್ಣ ಕರದಾಳ, ಬಾಗು ದೊರೆ, ಸೂರಜ್ ಕಲ್ಲಕ್, ಸೇರಿದಂತೆ ಇತರರು ಇದ್ದರು.

## ಬಜೆಟ್‌ನಲ್ಲಿ 25 ಎಕರೆ ಜಮೀನು ಮಂಜೂರು

**ಬಸವಕಲ್ಯಾಣ:** 2026–27ನೇ ಸಾಲಿನ ದಾಖಲೆ ಕರ್ನಾಟಕ ಬಜೆಟ್ ಮಂಡನೆ ಮಾಡುತ್ತಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯ ರವರಿಗೆ ವಿಶೇಷವಾಗಿ ಬಸವಕಲ್ಯಾಣದಲ್ಲಿ ವಚನ ವಿಶ್ವವಿದ್ಯಾಲಯ ನಿರ್ಮಾಣಕ್ಕೆ ಬಜೆಟನಲ್ಲಿ 25 ಎಕರೆ ಜಮೀನು ಮಂಜೂರು ಮಾಡಿರುವ ನಮ್ಮ ಕಾಂಗ್ರೆಸ್ ಸರ್ಕಾರಕ್ಕೆ ತುಂಬು ಹೃದಯದ ಧನ್ಯವಾದಗಳು ಸಲ್ಲಿಸುತ್ತೇನೆ.

ಸಮಾಜದ ಎಲ್ಲಾ ವರ್ಗಗಳ ಆಶಯಗಳನ್ನು ಪೂರೈಸುವಂತೆ ರೂಪುಗೊಂಡಿರುವ ಈ ಬಜೆಟ್ ರೈತರು, ಮಹಿಳೆಯರು, ಯುವಕರು, ಕಾರ್ಮಿಕರು, ಮಧ್ಯಮ ವರ್ಗ ಸೇರಿದಂತೆ ಪ್ರತಿಯೊಬ್ಬರ ಬದುಕಿಗೆ ಆಶಾವಾದವನ್ನು ಮೂಡಿಸುತ್ತದೆ.

ರಾಜ್ಯದ ಆರ್ಥಿಕ ಬೆಳವಣಿಗೆಯ ಜೊತೆಗೆ ಸಾಮಾಜಿಕ ನ್ಯಾಯ, ಕಲ್ಯಾಣ ಮತ್ತು ಅಭಿವೃದ್ಧಿಯನ್ನು ಸಮತೋಲನಗೊಳಿಸುವ ಈ ಜನಪರ ಬಜೆಟ್ ಕರ್ನಾಟಕದ ಭವಿಷ್ಯವನ್ನು ಇನ್ನಷ್ಟು ಬಲಪಡಿಸುವ ವಿಶ್ವಾಸ ನೀಡುತ್ತದೆ. ಈ ಮಹತ್ವದ ಸಾಧನೆಗೆ ನಮ್ಮ ರಾಜ್ಯ ಸರ್ಕಾರ–ಕ್ಕೆ ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ ಯವರು ಅಭಿನಂದನೆಗಳು ತಿಳಿಸಿದ್ದಾರೆ.

## ಮೃತ ಸಿಬ್ಬಂದಿ ಸದಸ್ಯರಿಗೆ 8.22 ಕೋಟಿ ಪರಿಹಾರ



**ಬೆಂಗಳೂರು:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಪಘಾತದಿಂದ ಮೃತಪಟ್ಟ 4 ಸಿಬ್ಬಂದಿಯ ಅವಲಂಬಿತರಿಗೆ ತಲಾ ರೂ.1 ಕೋಟಿಯಂತೆ ರೂ. 4 ಕೋಟಿ ಪರಿಹಾರವನ್ನು ಸಚಿವ ರಾಮಲಿಂಗಾರೆಡ್ಡಿ ವಿರಿಸಿದ್ದಾರೆ.

ಅಪಘಾತ ಹೊರತುಪಡಿಸಿ ಇತರೆ ಕಾರಣಗಳಿಂದ ಮೃತಪಟ್ಟ 28 ಸಿಬ್ಬಂದಿಗಳ ಅವಲಂಬಿತರಿಗೆ ತಲಾ ರೂ.14 ಲಕ್ಷದಂತೆ, ರೂ. 3.92 ಕೋಟಿ ಪರಿಹಾರ ನೀಡಿದ್ದಾರೆ.

3 ಮೃತಪಟ್ಟ ಸಿಬ್ಬಂದಿಗಳ ಅವಲಂಬಿತರಿಗೆ ರೂ.10 ಲಕ್ಷದಂತೆ ರೂ.30 ಲಕ್ಷ ಪರಿಹಾರ ವಿತರಣೆ. ಕಾರ್ಯಕ್ರಮದಲ್ಲಿ ಶ್ರೀ ಮೊಹಮ್ಮದ್ ರಿಜ್ವಾನ್ ನವಾಬ್, ಮಾನ್ಯ ಉಪಾಧ್ಯಕ್ಷರು, ಕರಾರಸಾ ನಿಗಮ, ಶ್ರೀ ಅಕ್ರಂ ಪಾಷ, ಭಾಆಸೇ., ವ್ಯವಸ್ಥಾಪಕ ನಿರ್ದೇಶಕರು, ಕರಾರಸಾ ನಿಗಮ, ಶ್ರೀಮತಿ ಗಾಯಿತ್ರಿ ಕೆ.ಎಂ., ಭಾಆಸೇ., ನಿರ್ದೇಶಕರು (ಸಿಬ್ಬಂದಿ ಮತ್ತು ಜಾಗೃತ) ಹಾಗು ಅಧಿಕಾರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಮಾನವೀಯತೆ ಮೆರೆದ ಡಿಕೆ ಸಿದ್ರಾಮ



**ಭಾಲ್ಕಿ:** ತಾಲೂಕಿನ ಕೇಸರಜವಳಗಾ ಗ್ರಾಮದ ನರಸಿಂಗ ಕಟಗೆ ಕೆಲವು ದಿನಗಳ ಹಿಂದೆ ಸೋಲಾಪುರ ಹತ್ತಿರ ರಸ್ತೆ ಅಪಘಾತದಲ್ಲಿ ಮೃತ ಪಟ್ಟಿರುವ ಹಿನ್ನಲೆ ತಾಲೂಕಿನ ಮುಖಂಡರಾದ ಡಿ ಕೆ ಸಿದ್ರಾಮ ಅವರು ಮೃತರ ಕುಟುಂಬಕ್ಕೆ ಭೇಟಿ ಮಾಡಿ ವೈಯಕ್ತಿಕವಾಗಿ 25000 ಧನ ಸಹಾಯ ಮಾಡಿ ಮಾನವೀಯತೆಯನ್ನು ಮೆರೆದಿದ್ದಾರೆ. ಸದಾ ನಿಮ್ಮ ಜೊತೆ ಇರುತ್ತೇನೆ ಅಂತ ಆತ್ಮಸ್ಥೈರ್ಯವನ್ನು ತುಂಬಿದರು. ಈ ಸಂಧರ್ಭದಲ್ಲಿ ಧರ್ಮವೀರ ಪಾಟೀಲ್, ಶಿವರಾಜಪ್ಪಾ ಬಿರಾದಾರ, ನರಹರಿ, ಶರದ ದುರ್ಗಾಳೆ, ಜೈರಾಜ ಕೊಳ್ಳಾ ಸೇರಿದಂತೆ ಗ್ರಾಮದ ಅನೇಕ ಮುಖಂಡರು ಉಪಸ್ಥಿತರಿದ್ದರು.

## ಅರಣ್ಯ ಇದ್ದರೆ ಮಾತ್ರವೇ ಮಾನವಕುಲದ ಉಳಿವು: ಖಂಡ್ರೆ




**ಬೆಂಗಳೂರು:** ಅರಣ್ಯ ಇದ್ದರೆ ಮಾತ್ರವೇ ಮಾನವ ಕುಲ ಉಳಿಯಲು ಸಾಧ್ಯ. ಪ್ರಕೃತಿ ಸಮತೋಲನ ಕಾಪಾಡುವಲ್ಲಿ ವನ್ಯಜೀವಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಪ್ರತಿಪಾದಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿಂದು ಅರಣ್ಯ ಇಲಾಖೆಗೆ ಹೊಸದಾಗಿ ಆಯ್ಕೆಯಾಗಿರುವ 540 ಗಸ್ತು ಅರಣ್ಯ ಪಾಲಕರಿಗೆ ನೇಮಕಾತಿ ಪತ್ರ ವಿತರಿಸುವ ಸಮಾರಂಭದಲ್ಲಿ ಮಾತನಾಡಿದ ಅವರು, ನಮಗೆಲ್ಲರಿಗೂ ಇರುವುದೊಂದೇ ಭೂಮಿ. ನಮ್ಮ ಪೂರ್ವಜರು ನೈಸರ್ಗಿಕ ಸಂಪನ್ಮೂಲವನ್ನು ಹಿತಮಿತವಾಗಿ ಬಳಸುತ್ತಿದ್ದರು. ವನ್ಯಜೀವಿಗಳೊಂದಿಗೆ ಸಹಬಾಳ್ವೆ ನಡೆಸುತ್ತಿದ್ದರು. ಇದೇ ತತ್ವವನ್ನು ನಾವೂ ಅನುಸರಿಸುವ ಅಗತ್ಯವಿದೆ ಎಂದರು.

ಇಂದು ಜಾಗತಿಕ ತಾಪಮಾನ ಏರಿಕೆ ಹಾಗೂ ಹವಾಮಾನ ಬದಲಾವಣೆಯಿಂದಾಗಿ ಋತುಮಾನಗಳೇ ಬದಲಾವಣೆಯಾಗುತ್ತಿವೆ. ಅಕಾಲದಲ್ಲಿ ಮಳೆಯಾಗುತ್ತಿದೆ. ಬಿಸಿಲ ಬೇಗೆಯ ಹೆಚ್ಚಳದಿಂದ ಜನ ಮೃತಪಡುತ್ತಿದ್ದಾರೆ. ಹೀಗಾಗಿ ನಾವೆಲ್ಲರೂ ಪ್ರಕೃತಿ ಪರಿಸರ ಕಾಪಾಡುವ ಸಂಕಲ್ಪ ಮಾಡಬೇಕು.ಈ ಭಮಿಯಲ್ಲಿ ಹುಟ್ಟಿದ ಪ್ರತಿಯೊಂದು ಕೀಟ ಸಂಕುಲ, ಪಕ್ಷಿ ಸಂಕುಲ, ಜೀವಿ ಸಂಕುಲ, ಪ್ರಾಣಿ ಸಂಕುಲಕ್ಕೂ ಬದುಕುವ ಹಕ್ಕಿದೆ, ಹೀಗಾಗಿ ಅವುಗಳ ಆವಾಸಸ್ಥಾನವನ್ನು ರಕ್ಷಿಸುವ ಜವಾಬ್ದಾರಿ ಇಲಾಖೆಯ ಅಧಿಕಾರಿ ಸಿಬ್ಬಂದಿ ಮೇಲಿದೆ ಎಂದರು.

ಅರಣ್ಯ ಒತ್ತುವರಿ ಅವ್ಯಾಹತವಾಗಿ ನಡೆಯುತ್ತಿದೆ. ಅರಣ್ಯ ಒತ್ತುವರಿ ಅತಿ ದೊಡ್ಡ ಅಪರಾಧವಾಗಿದೆ. ಕೊರೊನಾ ಸಂದರ್ಭದಲ್ಲಿ ಪ್ರಾಣವಾಯು ದೊರಕದೆ ಅತಿ ಹೆಚ್ಚು ಸಾವು ಸಂಭವಿಸಿತು. ಹೀಗಾಗಿ ನಿತ್ಯ ನಮಗೆ ಶುದ್ಧ ಗಾಳಿ ನೀಡುವ ಮರ, ಗಿಡ, ಅರಣ್ಯ, ಪರಿಸರ ರಕ್ಷಿಸುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದರು.

## ಸ್ಮರಣ ಸಂಚಿಕೆಗೆ ಲೇಖನ–ಕವನಗಳ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಮುಂಬರುವ ಏಪ್ರಿಲ್ 4ರಂದು ಕೆಂಭಾವಿ ಪಟ್ಟಣದಲ್ಲಿ ಆಯೋಜಿಸಲಾಗಿರುವ ಸುರಪುರ ತಾಲೂಕು 3ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಹೊರತರಲಿರುವ ಸ್ಮರಣ ಸಂಚಿಕೆಗೆ ಲೇಖನ ಹಾಗೂ ಕವನಗಳನ್ನು ಆಹ್ವಾನಿಸಲಾಗಿದೆ.

ಈ ಕುರಿತು ಮಾಹಿತಿ ನೀಡಿರುವ ಸ್ಮರಣ ಸಂಚಿಕೆ ಸಮಿತಿಯ ಸಂಪಾದಕರು, ತಾಲೂಕಿನ ಬರಹಗಾರರಿಂದ ತಾಲೂಕಿನ ಪ್ರಾದೇಶಿಕ ವೈಶಿಷ್ಟ್ಯಗಳು, ಕಲೆ, ಸಾಹಿತ್ಯ, ನಾಡು ನುಡಿ ಹಾಗೂ ಸಂಸ್ಕೃತಿಯನ್ನು ಬಿಂಬಿಸುವ ಬರಹಗಳಿರಲಿ. ತಾಲೂಕಿನ ಇತಿಹಾಸ ಮತ್ತು ಕಲೆ, ಸಂಸ್ಕೃತಿ ಪರಂಪರೆ, ಭೌಗೋಳಿಕ ಸೌಂದರ್ಯ, ಧಾರ್ಮಿಕ ಕ್ಷೇತ್ರಗಳು, ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳು, ಮಣ್ಣಿನ ಹೆಮ್ಮೆಯ ಸಾಧಕರ ಪರಿಚಯದ ಲೇಖನಗಳು ಗರಿಷ್ಠ 250–300 ಪದಗಳ ಮಿತಿಗಳಲ್ಲಿ ಹಾಗೂ ಸ್ವ–ರಚಿತ ಕವನಗಳು 12 ರಿಂದ 16 ಸಾಲುಗಳ ಒಳಗಿರಬೇಕು.

ಕಳುಹಿಸಿಕೊಡುವ ಲೇಖನ, ಕವಿತೆಗಳು 'ನುಡಿ' ಅಥವಾ 'ಬರಹ' ತಂತ್ರಾಂಶದಲ್ಲಿ ಟೈಪ್ ಮಾಡಿರಬೇಕು. ಆಸಕ್ತ ಬರಹಗಾರರು ಮತ್ತು ಸಾಹಿತ್ಯಾಸಕ್ತರು ತಮ್ಮ ಲೇಖನ ಹಾಗೂ ಕವನಗಳನ್ನು ತಮ್ಮ ವಿಳಾಸ ಸಮೇತ ಮಾರ್ಚ್ 14, 2026ರ ಒಳಗಾಗಿ ನಿಗದಿಪಡಿಸಿದ ಇಮೇಲ್ ವಿಳಾಸ ಅಥವಾ ವಾಟ್ಸಪ್ ಮೂಲಕ ಕಳುಹಿಸಿಕೊಡಲು ಕೋರಲಾಗಿದೆ. ತಾಲೂಕಿನ ಸಾಹಿತ್ಯಿಕ ಶ್ರೀಮಂತಿಕೆಯನ್ನು ದಾಖಲಿಸುವ ಈ ಕಾರ್ಯದಲ್ಲಿ ಕೈಜೋಡಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕೆಂದು ಸ್ಮರಣ ಸಂಚಿಕೆ ಸಮಿತಿ ವಿನಂತಿಸಿದೆ.

ಸಂಪಾದಕರು, ಸ್ಮರಣ ಸಂಚಿಕೆ ಸಮಿತಿ


ಲೇಖನಗಳಿಗೆ: kemsammelana3@gmail.com, ವಾಟ್ಸಪ್: 9972456360, 9008370650, 9901216023 ಕವನಗಳಿಗೆ ವಾಟ್ಸಪ್: 9900169400, 9901296143

## ಮಕ್ಕಳು ವೈಜ್ಞಾನಿಕ ಮನೋಭಾವ ಬೆಳಸಿಕೊಳ್ಳಿ

• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ

ಪ್ರಸ್ತುತವಾಗಿ ಜಗತ್ತಿಗೆ ವಿಜ್ಞಾನ ಬಹುಮುಖ್ಯವಾಗಿದೆ, ನೋಬೆಲ್ ಪ್ರಶಸ್ತಿ ವಿಜೇತ ಸಿ.ವಿ.ರಾಮನ್ ಇಂತಹ ಅನೇಕ ವಿಜ್ಞಾನಿಗಳ ಸಾಧನೆಗಳ ಬಗ್ಗೆ ವಿದ್ಯಾರ್ಥಿಗಳು ಅರಿತುಕೊಂಡು ವೈಜ್ಞಾನಿಕ ಮನೋಭಾವನೆ ಬೆಳಿಸಿಕೊಳ್ಳ ಬೇಕು ಎಂದು ಸ.ಪ್ರೌಡ ಶಾಲೆಯ ಮುಖ್ಯ ಶಿಕ್ಷಕ ಎಫ್.ಎಮ್.ಕಳ್ಳಿ ಅವರು ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ ದಮ್ಮೂರ ಶಾಲೆಯಲ್ಲಿ ರಾಷ್ಟೀಯ ವಿಜ್ಞಾನ ದಿನ ಮತ್ತು ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ದೀಪ ಬೇಳಗಿಸಿ ಮಾತನಾಡಿದರು.

ವಿಜ್ಞಾನ ದಿನಾಚಾರಣೆ ಅಂಗವಾಗಿ ಜರುಗಿದ ವಿಜ್ಞಾನ ವಸ್ತು ಪ್ರದರ್ಶನ ಕುರಿತು ಪ್ರಾಥಮಿಕ ಶಾಲೆಯ ಮುಖ್ಯ ಗುರು ಕನಕಪ್ಪ ಕಂಬಳಿ ಅವರು ಮಾತನಾಡಿ ಮಕ್ಕಳು ಇಂತಹ ಕಾರ್ಯಕ್ರದಲ್ಲಿ ಭಾಗವಹಿಸಿದಾಗ ವಿಜ್ಞಾನದ ಬಗ್ಗೆ ಹೊಸ ವಿಚಾರಗಳನ್ನು ತಿಳಿದುಕೊಳ್ಳುವದಕ್ಕೆ ಸಾದ್ಯ ಎಂದರು.



ವಿದ್ಯಾರ್ಥಿಗಳು ಗುರುಗಳು ಹೇಳುವ ವಿಷಯವನ್ನು ಸಮಗ್ರವಾಗಿ ಚಿತ್ತದಿಂದ ಆಲಿಸಿ ನಂತರ ಪ್ರಶ್ನೇ ಮಾಡುವ ಮನೋಭಾವನೆಯನ್ನು ರೂಡಿಸಿಕೊಳ್ಳಬೇಕು ಎಂದು ಶಿಕ್ಷಕ ಅಬ್ದಲ್ ಅವರು ಮಾತನಾಡಿದರು.

ಅಗಸ್ಯ ಫೌಂಡೇಷನ್ ಐಎಂಟಿ ಚಂದ್ರೇಗೌಡ ಅವರು ಮಾತನಾಡಿ ಮಕ್ಕಳು ವಿಜ್ಞಾನವನ್ನು ನಂಬ ಬೇಕು ಹೊರತು, ಮೂಡನಂಬಿಕೆಯನ್ನಲ್ಲ ಎಂಬುದರ ಬಗ್ಗೆ ತಿಳಿಸಿದರು.ಎಸ್.ಡಿ.ಎಂ.ಸಿ ಅದ್ಯಕ್ಷ ಭೀಮಣ್ಣ ಕಮ್ಮಾರ ಅಧ್ಯಕ್ಷತೆ ವಹಿಸಿದ್ದರು.ತದನಂತರ ವಿದ್ಯಾರ್ಥಿಗಳು ತಯಾರಿಸಿದ ವಿಜ್ಞಾನ ಮಾದರಿಗಳನ್ನು ನೋಡಿ ಸಂತಸ ಪಟ್ಟರು.

## ಭಕ್ತಿಯ ಓದಿನಿಂದ ಅಗಾಧತೆಯ ಅನಾವರಣ: ಹಾರಕೂಡ ಶ್ರೀ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಏಕಾಗ್ರತೆ, ತಲ್ಲೀನತೆ ಹಾಗೂ ಭಕ್ತಿಯ ಓದಿನಿಂದ ಅಗಾಧವಾದ ಜ್ಞಾನಶಕ್ತಿಯ ಅನಾವರಣವಾಗುತ್ತದೆ ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಶ್ರೀ ಗುರುಲಿಂಗ ಶಿವಾಚಾರ್ಯ ಉಚಿತ ವಸತಿ ಶಾಲೆಯ 24ನೇ ವಾರ್ಷಿಕೋತ್ಸವ ಹಾಗೂ ಹತ್ತನೆ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದ ಪಾವನ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಸತತ ಮತ್ತು ಸರಿಯಾದ ಪ್ರಯತ್ನದಿಂದ ಪರೀಕ್ಷೆಯನ್ನು ಸಂತಸದಿಂದ ಎದುರಿಸಲು ಸಾಧ್ಯವಾಗುತ್ತದೆ.

ಅಚಲವಾದ ಶ್ರದ್ಧೆ, ನಿಷ್ಠೆಯಿಂದ ಕೂಡಿದ ಅಭ್ಯಾಸ, ಆತ್ಮ ಬಲವನ್ನು ಹೆಚ್ಚಿಸಿ ಆತಂಕವನ್ನು ದೂರ ಮಾಡುತ್ತದೆ.

ಪರೀಕ್ಷೆ ಎಂಬುದು ಪ್ರಮಾಣ ಪತ್ರ ಕೊಡುವ



ಒಂದು ಮಾಧ್ಯಮ ಎಂದು ತಿಳಿಯದೆ, ಬದುಕಿನ ದಿಕ್ಸೂಚಿ ಹಾಗೂ ಆತ್ಮ ವಿಮರ್ಶೆಯ ಸಾಧನವೆಂದು ಅರಿತು ಅಧ್ಯಯನ ಶೀಲರಾದಾಗ ಕಲಿಕೆ ಎಂಬುದು ನಿತ್ಯೋತ್ಸವ ವಾಗುತ್ತದೆ.


ಗುರುಲಿಂಗ ಶಿವಾಚಾರ್ಯ ಉಚಿತ ವಸತಿ ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಶಿಕ್ಷಕರು ಸೇವಾ ಮನೋಭಾವದವರಾಗಿದ್ದು, ಅವರ ಶ್ರಮ ಮಕ್ಕಳ ಫಲಿತಾಂಶದಲ್ಲಿ ಸಾರ್ಥಕ ರೂಪ ತಾಳಲಿ, ಎಲ್ಲ ಮಕ್ಕಳು ಉತ್ತಮ ಶ್ರೇಣಿಯಲ್ಲಿ ತೇರ್ಗಡೆ–ಯಾಗಲಿ ಎಂದು ಶುಭ ಹಾರೈಸಿದರು.

ಕ್ಷಕರಾದ ಅಂಬಾರಾಯ ಉಗಾಜಿ ಕೋಹಿನೂರ ಮಾತನಾಡಿ ಪೂಜ್ಯ ಡಾ. ಚನ್ನವೀರ ಶಿವಾಚಾರ್ಯರನ್ನು ಯಾವ ರೂಪದಲ್ಲಿ ನೋಡಿದರೂ ಪೂರ್ಣ ಚಂದಿರರಂತೆ ಕಾಣುತ್ತಾರೆ.

ಪರುಷಮಣಿಯಾಗಿರುವ ಪೂಜ್ಯರ ಸನ್ನಿಧಿಗೆ ಬಂದವರೆಲ್ಲ ಚಿನ್ನ ವಾಗುವುದು ಖಚಿತ, ಶಿಕ್ಷಣ ಕ್ಷೇತ್ರಕ್ಕೆ ಶ್ರೀಗಳ ಕೊಡುಗೆ ಅಪಾರ ಅನನ್ಯ ಎಂದು ನುಡಿದರು. ವಿದ್ಯಾರ್ಥಿಗಳಾದ ವಿಕಾಸ ಬೇಲೂರ. ಸೋಮಶೇಖರ ಹೊಸಳ್ಳಿ, ನಾಗರತ್ನ ಹಿರೇಮಠ, ವೈಷ್ಣವಿ ಚೌದ್ರಿ, ಸುಮಿತ ಅಬ್ಬಜಲಪೂರ, ನಾಗೇಶ ಮಾದನ ಹಿಪ್ಪರಗಾ ಅನಿಸಿಕೆ ವ್ಯಕ್ತಪಡಿಸಿದರು.


ಶಾಲೆ ಆಡಳಿತ ಅಧಿಕಾರಿ ಐ.ಜಿ. ಮಠಪತಿ, ಮಲ್ಲಿನಾಥ ಹಿರೇಮಠ ಹಾರಕೂಡ, ಮೇಘರಾಜ ನಾಗರಾಳೆ, ಸುನೀತಾ ನಾಲೂರೆ, ಗಜೇಂದ್ರ ಸಂತಾಜಿ, ಸಂತೋಷ, ವಿಜಯಕುಮಾರ ಸಂಗೋಳಗೆ, ಪಂಡಿತರಾವ ದೇಗಾಂವ, ಟೋಣಪೆ, ಸಂತೋಷ ಕಾಂಬಳೆ, ಲಕ್ಷ್ಮಣ ಬೆಡಗೆ, ನಾಗಣ್ಣ ಪಾಟೀಲ, ಮಧುರಾಯ ಕುರಕೋಟೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ತಿಕ ಸ್ವಾಮಿ ಯಲದಗುಂಡಿ, ಶರಣಪ್ಪ ಜಮಾದಾರ ಸಂಗೀತ ಸೇವೆ ಸಲ್ಲಿಸಿದರು. ಹತ್ತನೇ ತರಗತಿ ವಿದ್ಯಾರ್ಥಿಗಳು ಹಾರಕೂಡ ಶ್ರೀಗಳ 930ನೇ ತುಲಾಭಾರ ಮಾಡಿ ಆಶೀರ್ವಾದ ಪಡೆದರು.




ಸಿದ್ದರಾಮಯ್ಯ ದಾಖಲೆ 17ನೇ ಬಜೆಟ್ ಮಂಡನೆ ಮಾಡಿದ್ದಾರೆ. ಇದು ಒಂದು ಐತಿಹಾಸಿಕ ಸಾಧನೆ 26/27ನೇ ಸಾಲಿನ ಆಯವ್ಯಯ ರಾಜ್ಯದ ಎಲ್ಲಾ ಭಾಗಗಳಿಗೂ ಮತ್ತು ಎಲ್ಲಾ ಜನಾಂಗದವರಿಗೂ ಮತ್ತು ಎಲ್ಲಾವಲಯಕ್ಕೂ ಸಮಾನವಾದ ಮತ್ತು ಉತ್ತಮವಾಗಿರ್ತಕ್ಕಂತ ಬಜೆಟ್ಟನ್ನು ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕದ ಜನತೆಗೆ ನೀಡಿದ್ದಾರೆ. ಅದರಲ್ಲಿ ವಿಶೇಷವಾಗಿ ಬಸವಕಲ್ಯಾಣದಲ್ಲಿ ವಚನ ವಿವಿ ಸ್ಥಾಪನೆ ಮಾಡ್ಲಿಕ್ಕೆ ಸುಮಾರು 25 ಎಕ್ರೆ ಭೂಮಿ ನೀಡಿರುವುದು ಹಾಗೆ 16 ವರ್ಷದ ಒಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳನ್ನು ಬಳಸದಂತೆ ನಿರ್ಬಂಧ ಏರಿರುವುದು ತುಂಬಾ ಸ್ವಾಗತ ಒಟ್ಟಾರೆಯಾಗಿ ಹೇಳುವುದಾದರೆ ಎಲ್ಲಾ ವರ್ಗದ ಜನರನ್ನು ತಲುಪುವ ಒಂದು ಉತ್ತಮವಾದ ಆಯವ್ಯಯವಾಗಿದೆ.

–ಹುಡೇದ ಗುರುಬಸವರಾಜ್, ಕಾಂಗ್ರೆಸ್ ವಕ್ತಾರ, ವಿಜಯನಗರ



ಈ ಬಾರಿಯ ಬಜೆಟ್ ನಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ ಸ್ಥಾಪನೆ, ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಶಾಲೆಗಳ ಸ್ಥಾಪನೆ, ಕೃಷಿ ರೇಶ್ಮೆ, ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚುವರಿ ಹಣ ಮಂಜೂರಾತಿ ಸೇರಿದಂತೆ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕ ಬಜೆಟನ್ನು ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನೀಡಿದ್ದಾರೆ.

–ಫತ್ರೇಶ್ ಹಿರೇಮಠ್, ವಕ್ತಾರರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಬೆಂಗಳೂರು




ದಾಖಲೆಯ 17ನೇ ಬಜೆಟ್ ಮಂಡನೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇವಲ ದಾಖಲೆಗಾಗಿ ಬಜೆಟ್ ಮಂಡನೆ ಮಾಡದೆ ಬಡ ವರ್ಗದ, ಹಿಂದುಳಿದ ವರ್ಗ, ಅಲ್ಪ ಸಂಖ್ಯಾತರ ಅಭಿವೃದ್ಧಿಯ ಜೊತೆಗೆ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. ಜೊತೆಗೆ ಮಕ್ಕಳಿಗೆ ಅಂತರ್ಜಾಲ ನಿಶೇಧ ಮಾಡುವ ಮೂಲಕ ಅವರಲ್ಲಿ ಹೆಚ್ಚಿನ ಶೈಕ್ಷಣಿಕ ಕಡೆ ಗಮನ ನೀಡಲು ಸಹಕಾರಿಯಾಗುತ್ತದೆ. ಜಿಲ್ಲೆಯ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಅದ್ಯತೆ ನೀಡಿರುವುದು ಗಮನಿಸಬೇಕಾದ ಅಂಶವಾಗಿದೆ.

–ಮರಿರಾಮಪ್ಪ, ಅಧ್ಯಕ್ಷರು ಪುರಸಭೆ ಹಗರಿಬೊಮ್ಮನಹಳ್ಳಿ

## ದೂರದೃಷ್ಟಿ ಇಲ್ಲದ ಬಜೆಟ್:ತೆಗನೂರ

**ಕಲಬುರಗಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವುದು ದೂರದೃಷ್ಟಿ ಇಲ್ಲದ, ರಾಜ್ಯದ ಸಮಗ್ರ ಅಭಿವೃದ್ಧಿಯ ಮುನ್ನೋಟ ಇಲ್ಲದ ಸಪ್ಪೆ, ಚಿಲ್ಲರೆ ಬಜೆಟ್ ಎಂದು ಕನ್ನಡಪರ ಹೋರಾಟಗಾರ ಆನಂದ ತೆಗನೂರ ಟೀಕಿಸಿದ್ದಾರೆ.




ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ಸಿದ್ದರಾಮಯ್ಯ ಅವರು ತಮ್ಮ ಆಡಳಿತಾತ್ಮಕ ವೈಫಲ್ಯ ಮುಚ್ಚಿಕೊಳ್ಳಲು, ರಾಜ್ಯದ ಜನರ ಗಮನವನ್ನು ಬೇರೆಡೆ ಸೆಳೆಯಲು ಹೊಸ ತಂತ್ರಗಾರಿಕೆಯನ್ನು ಅನುಸರಿಸಿದ್ದಾರೆ. ಸಣ್ಣ, ಪುಟ್ಟ ಸಹಾಯಧನಗಳ ಘೋಷಣೆ ಬಿಟ್ಟು ರೈತರ ಮೂಲಭೂತ ಸಮಸ್ಯೆಗಳ ಇತ್ಯರ್ಥಕ್ಕೆ ಶಾಶ್ವತ ಪರಿಹಾರಗಳನ್ನು ಅವರು ಘೋಷಣೆ ಮಾಡಿಲ್ಲ.ಬೆಂಬಲ ಬೆಲೆಗಳು, ಆತ್ಮಹತ್ಯೆಯ ಸುಳಿಗೆ ಸಿಕ್ಕ ರೈತನನ್ನು ಬಚಾವ್ ಮಾಡಲು ಸಾಲ ಮನ್ನಾ ಮುಂತಾದ ಸದೃಢ ಘೋಷಣೆಗಳನ್ನು ಮಾಡದೇ ರೈತರ ಮೂಗಿಗೆ ತುಪ್ಪ ಸವರುವ ಕಾರ್ಯ ಮಾಡಿದ್ದಾರೆ. ರೈತರಿಗೆ ಅನುಕೂಲ ಎನ್ನುವ ಭ್ರಮೆ ಸೃಷ್ಟಿಸಿ ಮಂಕು ಬೂದಿ ಎರಚಿದ್ದಾರೆ ಎಂದರು.ಕಳೆದ ಬಜೆಟ್ ನಲ್ಲಿ ಸರ್ಕಾರದ ತೆರಿಗೆ ಸಂಗ್ರಹದಲ್ಲಿ ಶೇಕಡಾ 25 ರಷ್ಟು ಖೋತಾ ಆಗಿರುವುದನ್ನು ಗಮನಿಸಿದಾಗ, ಈ ಬಾರಿಯೂ ಇನ್ನಷ್ಟು ಭಾರಿ ಪ್ರಮಾಣದಲ್ಲಿ ಸಾಲ ಎತ್ತಿ, ಜನಸಾಮಾನ್ಯರನ್ನು ಇನ್ನಷ್ಟು ಸಾಲಗಾರರಾಗಿ ಮಾಡುವ ಉದ್ದೇಶ ಸಿದ್ದರಾಮಯ್ಯ ಅವರಿಗಿದೆ.ಅಂಗನವಾಡಿ ನೌಕರರಿಗೆ, ವೃದ್ಧರಿಗೆ, ಅಬಲೆಯರಿಗೆ, ಕೈಗಾರಿಕೆ ಉದ್ಯಮಿಗಳಿಗೆ, ಸಣ್ಣ ಕೈಗಾರಿಕೆಗಳಿಗೆ, ಬಡ ರೈತರಿಗೆ ಏನೇನೂ ಇಲ್ಲ. ಗೃಹ ಲಕ್ಷ್ಮಿ ಯೋಜನೆ ವೆಚ್ಚ 62ಸಾವಿರ ಕೋಟಿ ಎಂದಾದರೂ, ಅದಕ್ಕೆ ಮೀಸಲಿಟ್ಟ ಹಣ ಬರೀ 28ಸಾವಿರ ಕೋಟಿ ಎನ್ನುವುದು ಆಶ್ಚರ್ಯದ ಸಂಗತಿಯಾಗಿದೆ ಎಂದರು.

## ಜಿಲ್ಲಾ ನೂತನ ಪದಾಧಿಕಾರಿಗಳ ಆಯ್ಕೆ

**ವಿಜಯನಗರ:** ನಗರದ ಪ್ರವಾಸಿ ಮಂದಿರದಲ್ಲಿ 02–03–2026 ರಂದು ದಲಿತ ಸಂಘರ್ಷ ಸಮಿತಿ (ಸಂಯೋಜಿತ )ವಿಜಯನಗರ ಜಿಲ್ಲಾ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಈ ಸಭೆಯನ್ನು ಉದ್ದೇಸಿಶಿ ಮಾತನಾಡಿದ ರಾಜ್ಯ ಸಮಿತಿಯ ಸಂಯೋಜಕರಾದ ದೇವಪ್ಪ ದೇವರಮನಿ ಇವರು ಸಂಘದ ದಯಾಧೋರಣೆಗಳ ಬಗ್ಗೆ ಮಾತನಾಡಿದರು ಸಂಘಟನೆಯಿಂದ ಎಲ್ಲಾ ಜಾತಿಯ ದಲಿತರನ್ನು ಒಗ್ಗೂಡಿಸಿ ಮೂಲಭೂತ ಸೌಕರ್ಯಕ್ಕಾಗಿ ಒತ್ತಾಯಿಸಿ ಹೋರಾಡಬೇಕು ಎಂದು ತಿಳಿಸಿದರು ದಲಿತರ ಸಮಸ್ಯೆಗಳ ಬಗ್ಗೆ ಗಮನ ವಹಿಸಬೇಕು ಮತ್ತು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ನೂತನವಾಗಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲು ಜಿಲ್ಲಾ ಪದಾಧಿಕಾರಿಗಳಿಗೆ ತಿಳಿಸಿದರು.

ಈ ವೇಳೆ ಜಿಲ್ಲಾ ಸಂಯೋಜಕರಾಗಿ ಅಂಜಿನಪ್ಪ .ಜಿಲ್ಲಾ ಸಂಘಟನಾ ಸಂಯೋಜಕರಾಗಿ ನಟರಾಜ



ಗೋಸಾಯಿ.ಜಿಲ್ಲಾ ಸಹ ಸಂಘಟನ ಸಂಯೋಜಕರಾಗಿ ಕೃಷ್ಣಾ ನಾಯ್ಕ್..ಕಮಲಾ ನಾಯ್ಕ .ಜಿಲ್ಲಾ ಖಜಾಂಚಿ ಶ್ರೀಮತಿ ಮಂಜುಳಾ.ಜಿಲ್ಲಾ ಸಂಯೋಜಕರು (ಮಹಿಳಾ ಒಕ್ಕೂಟ)ಎಸ್.ಹರಿಶ್ಚಂದ್ರನಾಯ್ಕ ಸೇವಾಲಾಲ್ ಜಿಲ್ಲಾ ವಿದ್ಯಾರ್ಥಿ ಒಕ್ಕೂಟ. ಎಲ್. ಪ್ರಶಾಂತ ಕುಮಾರ.ಜಿಲ್ಲಾ ಕಲಾ ಮಂಡಳಿ ಎ.ಕೆ. ಬಸವರಾಜ ಹೆಚ್.ಬಿ.ಹಳ್ಳಿ ಸದಸ್ಯರು.ಎ.ಅಸ್ಲಾಮ್ ಸದಸ್ಯರು,ಆಯ್ಕೆ ಮಾಡಿದ ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರ ನೀಡಲಾಯಿತು.

ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಸಂಯೋಜ–ಕರಾದ ರಮೇಶ ಗುಡ್ಡನೂರ,ಹಾಗೂ ನಾಗರಾಜ ಸಂಗಾಪುರ ಸಂಘದ ಸದಸ್ಯರು ಪದಾಧಿಕಾರಿಗಳು ಇನ್ನಿತರರು ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)